ಬಿ.ಪಿ ಬಾಯಿರಿ

ಕಲೆ ಮತ್ತು ಕಲಾ ಸಾಹಿತ್ಯ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಪ್ರಬಂಧ



ಮಾರ್ಗದರ್ಶಕರು
ಶ್ರೀ ಅಶೋಕ. ಟಿ. ಅಕ್ಕಿ
ಪ್ರಾಚಾರ್ಯರು
ವಿಜಯ ಲಲಿತಕಲಾ ಮಹಾವಿದ್ಯಾಲಯ, ಗದಗ
(ಸ್ನಾತಕೋತ್ತರ ಕೇಂದ್ರ ಕ.ವಿ.ವಿ, ಧಾರವಾಡ)

ಸಂಶೋಧಕ
ಮಹೇಶ. ಅ. ಉಮತಾರ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮

ಬಿ. ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ)

ಸಂಶೋಧನಾ ಪ್ರಬಂಧ

ಸಂಶೋಧಕ
ಮಹೇಶ. ಅ. ಉಮತಾರ

ಮಾರ್ಗದರ್ಶಕರು
ಅಶೋಕ. ಟಿ. ಅಕ್ಕಿ
ಪ್ರಾಚಾರ್ಯರು
ಲಲಿತ ಕಲೆಗಳ ಸ್ನಾತಕೋತ್ತರ ಕೇಂದ್ರ,
ವಿಜಯ ಲಲಿತಕಲಾ ಮಹಾವಿದ್ಯಾಲಯ,
ಗದಗ

ಸಹ ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ
ಡೀನ್, ಲಲಿತಕಲಾನಿಕಾಯ
ಪ್ರಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ,
ಹಂಪಿ-ವಿದ್ಯಾರಣ್ಯ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೮

ಬಿ. ಪಿ. ಬಾಯಿರಿಯವರ ಕಲೆ ಮತ್ತು ಕಲಾ ಸಾಹಿತ್ಯ

ಪರಿವಿಡಿ

ಪ್ರಮಾಣ ಪತ್ರ

"ಬಿ. ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ" ಎಂಬ ಶೀರ್ಷಿಕೆಯ ಪ್ರಬಂಧವನ್ನು **ಅಶೋಕ. ಟಿ. ಅಕ್ಕಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅತವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

(ಮಹೇಶ. ಅಡಿವೆಪ್ಪ. ಉಮತಾರ)

ದಿನಾಂಕ :

ಸ್ಥಳ : ಕ.ವಿ.ವಿ. ಹಂಪಿ–ವಿದ್ಯಾರಣ್ಯ

ಪ್ರಮಾಣ ಪತ್ರ

ಮಹೇಶ. ಅಡಿವೆಪ್ಪ. ಉಮತಾರ ಇವರು ಬರೆದು ಸಾದರ ಪಡಿಸಿದ **"ಬಿ. ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ"** ಎಂಬ ಶೀರ್ಷಿಕೆ ಎಂ.ಫಿಲ್. ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ. ಫಿಲ್ ಪದವಿಗಾಗಿ ಈ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಪ್ರಬಂಧವು ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ : ಕ.ವಿ.ವಿ. ಹಂಪಿ–ವಿದ್ಯಾರಣ್ಯ

ಮಾರ್ಗದರ್ಶಕರು

(ಅಶೋಕ. ಟಿ. ಅಕ್ಕಿ)

ಪ್ರಮಾಣ ಪತ್ರ

"ಬಿ. ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ" ಎಂಬ ಶೀರ್ಷಿಕೆಯ ಪ್ರಬಂಧವನ್ನು **ಅಶೋಕ. ಟಿ. ಅಕ್ಕಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಮಹೇಶ. ಅ. ಉಮತಾರ ರವರು ಸಲ್ಲಿಸುತ್ತಿದ್ದಾರೆ. ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್ ಅಧ್ಯಯನ ಮಾಡಿರುವ ಇವರು ಈಗ ಕಿರು ಪ್ರಬಂಧವನ್ನು ವಿಭಾಗದ ಮೂಲಕ ಅಧ್ಯಯನಾಂಗಕ್ಕೆ ಸಲ್ಲಿಸುತ್ತಿದ್ದಾರೆ.

ಮುಖ್ಯಸ್ಥರು

(ಡಾ. ಎಸ್. ಸಿ. ಪಾಟೀಲ)

ದಿನಾಂಕ : ೩೧-೧೦-೦೮

ಸ್ಥಳ : ಕ.ವಿ.ವಿ. ಹಂಪಿ-ವಿದ್ಯಾರಣ್ಯ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ಮತ್ತು ವೈಧಾನಿಕತೆ

ಪ್ರಕೃತಿ ಅನೇಕ ಜೀವಿಗಳಲ್ಲಿ ಮಾನವ ಜೀವನವು ಒಂದು. ನಿಸರ್ಗದೊಡನೆ ನಿಸರ್ಗವಾಗಿ ಮನುಷ್ಯ ಬದುಕತೊಡಗಿದಾಗ ಉಂಟಾದ ಆಯಾಸ, ಭಯ, ಆನಂದ, ಉತ್ಸಾಹದ ಪ್ರತೀಕವಾಗಿ ನೂರಾರು ಚಟುವಟಿಕೆಗಳು ಕಾಲಕ್ರಮೇಣ ಕಾಣಿಸಿಕೊಂಡವು. ಆ ಒಟ್ಟು ಚಟುವಟಿಕೆಗಳನ್ನು ಕಲೆ ಎಂಬ ಪದದ ವ್ಯಾಪ್ತಿಯಲ್ಲಿ ವಿದ್ವಾಂಸರು ಗಮನಿಸುತ್ತಾರೆ. ಸಮಾಜ ಶಾಸ್ತ್ರಜ್ಞರು ಕಲೆಯ ಉಗಮವನ್ನು ಮಾನವನ ಸಾಮಾಜಿಕ ಜೀವನದ ವಿಕಾಸದಲ್ಲಿ ಕಾಣುತ್ತಾರೆ. ಮನಸ್ಸಿನ ಸೂಕ್ಷ್ಮ ಚಲನವಲನಗಳ ಅಭಿವ್ಯಕ್ತಿಯೇ ಕಲೆಯೆಂದು ಅದನ್ನು ಅಳೆಯುತೊಡಗುತ್ತಾನೆ. ಒಂದು ಮನಸ್ಸಿನಲ್ಲಿ ಅದು ಉಗಮಿಸಿ, ಇನ್ನೊಂದು ಮನಸ್ಸನ್ನು ಅದು ತುಂಬುವುದು ಕರ್ನಾಟಕದ ಸಂಸ್ಕೃತಿಯನ್ನು ಅಧ್ಯಯನ ಮಾಡುವಲ್ಲಿ, ಸಂಸ್ಕೃತಿಯ ಬಹುಮುಖ್ಯ ಅಂಗವಾಗಿರುವ ಲಲಿತಕಲೆಗಳ ಪಾತ್ರ ತುಂಬ ಮೌಲಿಕವಾದುದು ಒಂದು ರೀತಿಯಲ್ಲಿ ಜನಾಂಗದ ಬದುಕು ಜೀವನ ಚರಿತ್ರೆಯೆನಿಸಿದರೆ ಕಲೆಗಳು ಅದರ ಆತ್ಮಚರಿತ್ರೆ ಎನಿಸುತ್ತವೆ. ಒಂದು ಕಲಾ ಪರಂಪರೆಯ ಬೆಳವಣಿಗೆಯ ಹಿಂದೆ ಆ ಸಂಸ್ಕೃತಿಯ ತಾಯಿ ಬೇರುಗಳಿರುವದನ್ನು ಪ್ರಮುಖವಾಗಿ ಗುರುತಿಸಲಾಗುತ್ತದೆ.[೧] ಯಾವುದೇ ದೇಶದ ಅಥವಾ ನಾಡಿನ ಕಲೆಗಳು ಒಮ್ಮೆಲೆ ಪರಿಪೂರ್ಣತೆಯ ಹಂತವನ್ನು ಏರುವುದಿಲ್ಲ. ಅವು ಪರಿಕಲ್ಪನೆಯ ಸ್ಥಿತಿಯನ್ನು ಮುಟ್ಟುವುದಕ್ಕೆ ಶತ

೧ ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ-೨

ಶತಮಾನಗಳುದ್ದಕ್ಕೂ ಸಾವಿರಾರು ಕಲಾವಿದರು. ಅವಿರತವಾಗಿ ಮಾಡಿದ ಪ್ರಯತ್ನ ಇರುತ್ತದೆ. ಹಾಗೆಯೇ ನಾಡಿನ ಪ್ರಜೆಗಳ ಹಾಗೂ ಅವರ ಪ್ರತಿನಿಧಿಗಳಾಗಿರುತ್ತಿದ್ದ ಅರಸರ, ಮಾಂಡಲಿಕರ, ನಾಯಕರ ಕಲಾಭಿರುಚಿಯು, ಕಲಾಭಿಜ್ಞತೆಯು ಆಶ್ರಯ ಪಾಲನೆ-ಪೋಷಣೆ ಮತ್ತು ಪ್ರೋತ್ಸಾಹಗಳು ಇರುತ್ತವೆ. ಸಾಹಿತ್ಯ, ಸಂಗೀತ. ಚಿತ್ರ, ಶಿಲ್ಪ, ನೃತ್ಯ ಮೊದಲಾದ ಲಲಿತಕಲೆಗಳು ಅಂದಿನಿಂದ ಒಟ್ಟು ಜನಾಂಗದ ಪ್ರತಿಬಿಂಬವಾಗಿ ಬೆಳವಣಿಗೆಯನ್ನು ಹೊಂದಿರುತ್ತವೆ. ಅಲ್ಲದೆ ಆಯಾ ಕಾಲದ ಸಾಂಸ್ಕೃತಿಕ ಇತಿಹಾಸವನ್ನೇ ತಮ್ಮಲ್ಲಿ ಒಡಮೂಡಿಸಿ ಕೊಂಡಿರುತ್ತವೆ.[೨] ಹೀಗೆ ನಮ್ಮ ದೇಶದ ಅಥವಾ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ಗಮನಿಸಿದಾಗ ಚಿತ್ರ, ಶಿಲ್ಪ, ಸಂಗೀತ, ನೃತ್ಯ, ನಾಟಕ ಮುಂತಾದ ಕಲೆಗಳು ನೀಡಿದ ಕೊಡುಗೆಗಳು ಅನನ್ಯವಾದವುಗಳು ಹಾಗೆಯೇ ಈ ಕಲಾ ಪರಂಪರೆಯ ಹಿಂದೆ ದುಡಿದ ಕಲಾವಿದರ ಕೊಡುಗೆಯೂ ಬಹು ಮುಖ್ಯವಾದುದಾಗಿರುತ್ತದೆ.

ಮುಂದಿನ ಪೀಳಿಗೆಗೆ ಈ ಕಲೆ, ಕಲಾವಿದರ ಸಾಧನೆಯನ್ನು ಪರಿಚಯಿಸುವ ದಾಖಲೆಗಳು ತುಂಬ ಅಪರೂಪವಾಗಿವೆ. ಸಾಂಸ್ಕೃತಿಕ ಇತಿಹಾಸ ರಚನೆಯ ಸಂದರ್ಭದಲ್ಲಿ ಈ ದಾಖಲೆಗಳು ಮಹತ್ವದ ಆಕರಗಳಾಗಿರುತ್ತವೆ. ವಿದೇಶಿಯ ಕಲಾ ಪರಂಪರೆಯನ್ನು ಗಮನಿಸಿದಾಗ, ಅಲ್ಲಿ ಆಕರ ಸಾಮಗ್ರಿಗಳು ಹೇರಳವಾಗಿ ಲಭಿಸುತ್ತವೆ. ಇದಕ್ಕೆ ಕಾರಣ ವಿದೇಶಿಯ ಕಲಾ ತಜ್ಞರ ದೂರದೃಷ್ಟಿ ಕಲೆಯ ಬಗೆಗಿನ ಕಳಕಳಿ ಕಾಳಜಿಗಳು ಗಮನಾರ್ಹವಾಗಿವೆ. ನಮ್ಮ ದೇಶದಲ್ಲಿ ಐತಿಹಾಸಿಕವಾಗಿ ಅನೇಕ ಕಲೆಯ ತಾಣಗಳು ಅಮೂಲ್ಯವಾದ ಕಲಾಕೃತಿಗಳು ಉಪಲಬ್ಧವಾದರೂ ಅದರ ಹಿಂದೆ ದುಡಿದ ಕಲಾವಿದರ ಕುರಿತಾದ ಯಾವುದೇ ಸ್ಪಷ್ಟವಾದ ಮಾಹಿತಿಗಳು ಅಷ್ಟೊಂದು ಉಪಲಬ್ಧವಾಗಿಲ್ಲ ಹೀಗೆ ಹಲವಾರು ಕಾರಣಗಳಿಂದಾಗಿ ಕಲೆ ಕಲಾವಿದರನ್ನು ಕುರಿತಂತೆ ಸರಿಯಾದ ರೀತಿಯಲ್ಲಿ ಸಮಗ್ರವಾಗಿ ಅಧ್ಯಯನ ಮಾಡಲು ಸಾಧ್ಯವಾಗಿಲ್ಲ.

ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿಯೂ ನಾವು ಈ ಕೊರತೆಯನ್ನು ಎದುರಿಸುತ್ತಿದ್ದೇವೆ. ಸಮಕಾಲೀನ ಕಲೆ, ಕಲಾವಿದರ ಕುರಿತಾದ ಅಮೂಲ್ಯವಾದ ಮಾಹಿತಿಯನ್ನು, ಚಿಂತನಶೀಲ ವಿಚಾರಗಳನ್ನು ಅವರ ಕುರಿತು ಪ್ರಕಟಿತ ಸಾಹಿತ್ಯ ವಿಮರ್ಶೆಗಳನ್ನು ಕಲಾಕೃತಿಗಳನ್ನು ಅರ್ಥೈಸುವ, ಅದರ ಹಿಂದೆ ದುಡಿದ ಕಲಾವಿದನ ಮನಸ್ಸನ್ನು ಪರಿಭಾವಿಸುವ ಹಲವಾರು ಅಂಶಗಳನ್ನು ತುಂಬ ಗಂಭೀರವಾಗಿ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ದಾಖಲಿಸಬೇಕಾದುದು ಇಂದಿನ ಬಹುಮುಖ್ಯ ಕಾರ್ಯವಾಗಿದೆ.

---

೨ ಡಾ. ಬಿ. ಕೆ. ಹಿರೇಮಠ: ಸೃಷ್ಟಿ, ಪುಟ-೧೯೧

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ತಡವಾಗಿಯಾದರೂ ಕಲೆ ಕಲಾವಿದರ ಕುರಿತಾದ ಸಂಶೋಧನಾ ಅಧ್ಯಯನಗಳು ಇಂದು ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯುತ್ತಿರುವುದು ಈ ಕ್ಷೇತ್ರದ ಒಂದು ಶುಭಲಕ್ಷಣವೆಂದೇ ಹೇಳಬೇಕು. ಪ್ರಸ್ತುತ ಕರ್ನಾಟಕದ ಹಿರಿಯ ತಲೆವಾರಿನ ಗಮನಾರ್ಹ ಕಲಾವಿದರಲ್ಲಿ ಒಬ್ಬರಾದ, ರಂಗೋಲಿ ಕಲಾವಿದರೆಂದೆ ಪ್ರಸಿದ್ಧರಾದ ಬಿ. ಪಿ. ಬಾಯಿರಿಯವರ ಕುರಿತು ಇಲ್ಲಿ ಅಧ್ಯಯನವನ್ನು ಕೈಕೊಳ್ಳಲಾಗಿದೆ.

ಸುದೀರ್ಘವಾದ ಮತ್ತು ಅತ್ಯಂತ ವೈವಿಧ್ಯಮಯವಾದ ಐತಿಹಾಸಿಕ, ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಪ್ರದೇಶ ತುಳುನಾಡು, ಈ ನಾಡಿನ ಇತಿಹಾಸ, ಸಂಸ್ಕೃತಿ, ಭಾಷಾವೈವಿಧ್ಯತೆ, ಜಾನಪದ ಆಚರಣೆಗಳು ಹಾಗೂ ನಂಬಿಕೆಗಳ ಐತಿಹಾಸಿಕ ಸ್ಥಳವಾದ ಉಡುಪಿಯ ಬಾರ್ಕೂರಿನಲ್ಲಿ ಜನ್ಮ ತಾಳಿದ ಬಿ.ಪಿ ಬಾಯಿರಿಯವರು ಇಂದು ಕಲಾಕ್ಷತ್ರದಲ್ಲಿ ಕಲಾಗುರು. ರಂಗೋಲಿ ಕಲಾವಿದ ಎಂದು ಗೌರವಿಸಲ್ಪಟ್ಟವರು. ಪ್ರತಿಯೊಬ್ಬ ಕಲಾವಿದನ ಹಿಂದೆ ಆತನ ಸಾಧನೆಯ ಸೇವೆಯು ಪ್ರಸ್ತುತವಾಗಿರುತ್ತದೆ. ಕಲಾಶಿಕ್ಷಣವನ್ನು ನೀಡಿದ ಮಹಾನ್ ವ್ಯಕ್ತಿ ಬಿ. ಪಿ. ಬಾಯಿರಿಯವರು ಇವರು ಕೇವಲ ಒಬ್ಬ ಕಲಾವಿದರಾಗಿರದೇ, ಸಾಹಿತ್ಯದಲ್ಲಿ ಕೂಡಾ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳಲ್ಲಿ ತೊಡಗಿಸಿಕೊಂಡು ಕಲೆ-ಕುಶಲ ಕಲೆಗಳ ಮಹತ್ವದ ಪಾತ್ರವನ್ನು ಮತ್ತು ಅವಶ್ಯಕತೆಯನ್ನು ಕಂಡುಕೊಂಡು ಚಿತ್ರಕಲಾ ಉಪಾಧ್ಯಾಯರಾಗಿ ತೃಪ್ತಿಕರ ಸೇವೆಯನ್ನು ನೀಡಿ, ಕಲಾ ಶಿಕ್ಷಣದ ಬಗ್ಗೆ, ಚಿಕ್ಕಮಕ್ಕಳ ಚಿತ್ರಕಲೆಯ ಬಗ್ಗೆ, ಮನೋವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಪ್ರಯೋಗಿಕರಿಸಿ ಸಾಹಿತ್ಯ ರೂಪದಲ್ಲಿ ಪುಸ್ತಕಗಳನ್ನು "ಚಿತ್ರ ಕುಟೀರ" ದಿಂದ ಹೊರತಂದಿದ್ದಾರೆ. ಒಂದು ಕಾಲದಲ್ಲಿ ಮನೆ ಮನೆಗಳಲ್ಲಿ ಅರಳುತ್ತಿದ್ದ "ರಂಗೋಲಿ ಕಲೆ" ಕ್ರಮೇಣ ಆಧುನಿಕರಣದ ಪ್ರಲೋಭಗಳಿಂದ ಅಲಕ್ಷಕ್ಕೊಳಗಾದಾಗ ಒಬ್ಬಂಟಿಯಾಗಿ ಅದನ್ನೊಂದು ಚಳುವಳಿಯ ರೂಪದಲ್ಲಿ ಕರ್ನಾಟಕದಲ್ಲೆಲ್ಲಾ ಪುನರುಜ್ಜೀವನಗೊಳಿಸಿದವರೂ ನಾಡಿನ ಹಿರಿಯ ಕಲಾವಿದರೂ ಆದ ಶ್ರೀ ಬಾರ್ಕೂರು ಪರಮೇಶ್ವರ ಬಾಯಿರಿ ಅವರು ಇಡೀ ಜೀವನವನ್ನು ಕಲೆಗಾಗಿಯೇ ಸಮರ್ಪಿಸಿಕೊಂಡ ಒಬ್ಬ ಶುದ್ಧ, ಸರಳ, ಧಿಮಂತ ಕಲಾವಿದರು ಹಾಗೆಯೇ ಚಿತ್ರಕಲಾ ಶಿಕ್ಷಕರಾಗಿ ೨೬ ವರ್ಷಗಳ ಕಾಲತೃಪ್ತಿಕರ ಸೇವೆ ಮಾಡಿ ನಾಡಿನ ಎಲ್ಲಾ ಚಿತ್ರಕಲಾ ಶಿಕ್ಷಕರಿಗೆ ಕಲಾ ಶಿಕ್ಷಣದ ಬಗ್ಗೆ ಮಾರ್ಗದರ್ಶನ ನೀಡಿದ ಉಡುಪಿ ಜಿಲ್ಲೆಯ ಶ್ರೀ ಬಿ. ಪಿ. ಬಾಯಿರಿಯವರನ್ನು ನಾವೆಂದೂ ಮರೆಯುವಂತಿಲ್ಲ ಇಂತಹ ಮಹಾನ್ ವ್ಯಕ್ತಿಯ ಕಲೆ ಮತ್ತು ಜೀವನದ ಬಗ್ಗೆ ನಾವು ಅರಿಯುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಯಾವುದೇ ಪ್ರಚಾರವನ್ನು ಬಯಸದೇ ಕಲೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ ಇವರು ನಾಡಿನ ಒಬ್ಬ ಹಿರಿಯ ಕಲಾವಿದರು. ಕನ್ನಡ ನಾಡಿನ ಕಲಾಕ್ಷೇತ್ರದಲ್ಲಿ ಕಲಾಕೃತಿ ರಂಗೋಲಿಗಳನ್ನು

ರಚಿಸುತ್ತ ಬಂದಿದ್ದಾರೆ. ದೇಶ ವಿದೇಶಗಳ ಕಲಾಸಕ್ತರ ಗಮನ ಸೆಳೆಯುವುದರೊಂದಿಗೆ ಅವರು ಒಬ್ಬ ಕಲಾಶಿಕ್ಷಣ ತಜ್ಞರಾಗಿ ಕಲಾವಿಮರ್ಶಕರಾಗಿ. ಕಲಾ ಸಂಘಟಕರಾಗಿ, ಕಲಾ ಸಾಹಿತ್ಯ ರಚನಾಕಾರರಾಗಿ ಬಹುಮುಖ್ಯ ವ್ಯಕ್ತಿತ್ವವನ್ನು ಪಡೆದ ನಾಡಿನ ಹಿರಿಯ ಕಲಾವಿದ.

ಕನ್ನಡ ನಾಡಿನ ಕಲಾಕ್ಷೇತ್ರಕ್ಕೆ ತಮ್ಮದೇ ಆದ ಸೇವೆ ಸಲ್ಲಿಸಿದ ಇಂತಹ ಕಲಾವಿದರ ಕುರಿತು ಇಲ್ಲಿಯವರೆಗೆ ಯಾವುದೇ ಸಂಶೋಧನೆ ನಡೆಯದೇ ಇರುವುದನ್ನು ಗಮನಿಸಿ ಬಿ. ಪಿ. ಬಾಯಿರಿ ಕಲೆ ಹಾಗೂ ಕಲಾ ಸಾಹಿತ್ಯ ಎಂಬ ವಿಷಯವಾಗಿ ಸಂಶೋದನೆಯನ್ನು ನಡೆಸಲಾಗಿದೆ.

ಅಧ್ಯಯನದ ಉದ್ದೇಶ

ಭಾರತೀಯ ಕಲೆಗೆ ಅಮೂಲ್ಯವಾದ ಕೊಡುಗೆ ನೀಡಿದ ಅನೇಕ ಕಲಾವಿದರು ಕರ್ನಾಟಕದರಿದ್ದಾರೆ. ಹಾಗೇಯೆ ಕರಾವಳಿ ಜಿಲ್ಲೆಗಳಲ್ಲಿ ಒಂದಾದ ಉಡುಪಿ ಜಿಲ್ಲೆಯು ಕೂಡಾ ಅನೇಕ ಕಲಾವಿದ ಸಾಹಿತಿಗಳಿಗೆ ಜನ್ಮ ನೀಡಿದ ತಾಣವಾಗಿದೆ. ಇತ್ತೀಚಿನ ಈ ಆಧುನಿಕ ಯುಗದಲ್ಲಿ ಯಾರಿಗೂ ಕಡಿಮೆಯಿಲ್ಲವೆನ್ನುವಂತೆ ಈ ಜಿಲ್ಲೆಯ ಚಿತ್ರಕಲೆ ಮತ್ತು ಕಲಾವಿದರು ರಾಷ್ಟ್ರ ಮಟ್ಟದವರೆಗೂ ಬೆಳೆದು ನಿಂತಿದ್ದಾರೆ. ಅವರಲ್ಲಿ ಮುಖ್ಯವಾಗಿ ಪಿಟರ್ ಲೂಯಿಸ್, ಯು ಬಾಸ್ಕರ ರಾವ್, ಯು ರಮೇಶರಾವ್, ಕೆ. ಕೆ. ಹೆಬ್ಬಾರರಂತವರ ಹೆಸರುಗಳನ್ನು ಉದಾಹರಿಸಬಹುದು. ಇವರು ತಮ್ಮ ಬದುಕನ್ನು ಕಲೆಗಾಗಿ ಮುಡಿಪಾಗಿಟ್ಟುಕೊಂಡವರು ಇಂತಹವರ ಸಾಲಿನಲ್ಲಿ ತಮ್ಮ ಬದುಕನ್ನು ಕಲೆಗಾಗಿ ಕಲಾ ಸಾಹಿತ್ಯಕ್ಕಾಗಿ ಮೀಸಲಾಗಿರಿಸಿದ ಬಿ. ಪಿ. ಬಾಯಿರಿಯವರೂ ಒಬ್ಬರು ಹಾಗಾಗಿ ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಶ್ರೀ ಬಿ. ಪಿ. ಬಾಯಿರಿ ಯವರ ಬಗ್ಗೆ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಬಿ. ಪಿ. ಬಾಯಿರಿಯವರ ಅಧ್ಯಯನವೆಂದರೆ ಅವರ ಒಟ್ಟು ಬದುಕಿನ ಸಮಕಾಲೀನ ಕಲೆ ಹಾಗೂ ಕಲಾವಿದರ ಅಧ್ಯಯನವೆಂದೇ ಅರ್ಥ ಹೀಗಾಗಿ ಬಾಯಿರಿ ಯವರ ಅಧ್ಯಯನದೊಂದಿಗೆ ಸಮಕಾಲೀನ ಕಲೆ, ಕಲಾ ಶಿಕ್ಷಣ, ಕಲಾವಿದರ ಅಧ್ಯಯನದ ಮಹತ್ವದ ವಿವರಗಳ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಬಾಲ್ಯದಲ್ಲಿ ಬಾರ್ಕೂರಿನ ನಿಸರ್ಗ ನದಿ, ಸಮೂದ್ರಗಳ ಸಮೂಹಗಳು ಅಂದಿನ ಮನೆಯ ಮುಂದಿನ ರಂಗೋಲಿಗಳು ಹೇಗೆ ಪ್ರಭಾವ ಬೀರಿದವು ಬಾಯಿರಿಯವರು ಬಾಲ್ಯದ ಸಾಂಸ್ಕೃತಿಕ ಪರಿಸರ ಮತ್ತು ಕಲಾಶಿಕ್ಷಣ ಪಡೆಯಲು ಕಷ್ಟಗಳನ್ನು ಅನುಭವಿಸಿದ್ದು ಮತ್ತು ಕಲಾ ಶಿಕ್ಷಣ ಎಷ್ಟರ ಮಟ್ಟಿಗೆ ಅವರ ಸೃಜನಶೀಲ ಕಲಾ ಕೃತಿಗಳ ರಚನೆಗೆ ಪೂರಕವಾಯಿತು ಎನ್ನುವುದರ ತಾತ್ವಿಕ ಚಿಂತನೆಗಳ ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚೆಗೆ ಒಳಗಾಗಿದೆ.

ಬಾಯಿರಿಯವರ ಸಾವಿರಾರು ಭಾವಚಿತ್ರಗಳು, ಕಲಾಕೃತಿಗಳು ವೈವಿಧ್ಯಮಯಗಳಾಗಿದ್ದು ಅವುಗಳ ತಂತ್ರ, ಮಾಧ್ಯಮದ ಕುರಿತು, ವರ್ಣವಿನ್ಯಾಸ, ರೇಖಾವಿನ್ಯಾಸಗಳ ಸ್ವರೂಪದ ಕುರಿತು ವಿಶೇಷವಾದ ಅಧ್ಯಯನ ಮಾಡುವ ಉದ್ದೇಶವು ಇಲ್ಲಿದೆ. ಬಾಯಿರಿಯವರ ಬೋರ್ಡ ಹೈಸ್ಕೂಲ್ ಕಲಾ ಶಿಕ್ಷಕರಾಗಿ ನೇಮಕವಾದಾಗಿನಿಂದ ಸಾವಿರಾರು ಮಕ್ಕಳಿಗೆ ಚಿತ್ರಕಲೆಯ ಶಿಕ್ಷಣದ ಬಗ್ಗೆ ಒಲವನ್ನು ಮೂಡಿಸಿ ಹುರುದುಂಬಿಸಿದ್ದಾರೆ. ಅದರ ಮೂಲಕ ಅವರ ಈ ಕಲಾ ಚಟುವಟಿಕೆಯ ಕೊಡುಗೆಯನ್ನು ಗುರುತಿಸುವುದು ಕೂಡ ಈ ಅಧ್ಯಯನದ ಭಾಗವಾಗಿದೆ.

ಇದರಲ್ಲಿ ಬಾಯಿರಿಯವರು ಮತ್ತು ರಂಗೋಲಿಕಲೆಯ ನಿಕಟ ಬಾಂಧವ್ಯ ಹೊಸ ಹೊಸ ವಿನ್ಯಾಸಗಳಿಂದ ಸಂಪ್ರದಾಯಗೊಳಪಟ್ಟ ಅನೇಕ ರಂಗೋಲಿಗಳನ್ನು ರಚಿಸಿಕೊಂಡು ಬಂದಿದ್ದಾರೆ. ಇದೆಲ್ಲದರ ಸೂಕ್ಷ್ಮವಾದ ಒಳನೋಟಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡುವ ಉದ್ದೇಶ ಹೊಂದಿದೆ.

ಮೇಲಿನ ಮಾತು ಬಾಯಿರಿಯವರ ಈವರೆಗಿನ ಕಲಾಕೃತಿಗಳನ್ನು ವಿಶ್ಲೇಷಿಸುವಾಗ, ನಮ್ಮಲ್ಲಿನ ಎಷ್ಟೋ ಕಲಾವಿದರು ಒಂದೇ ಶೈಲಿಗೆ ಅಂಟಿಕೊಂಡು ಅವರ ಕಲಾಕೃತಿಯನ್ನು ವಿಕ್ಷಿಸಿ ನೋಡಿದಾಕ್ಷಣ ಇದು ಇಂಥ ಕಲಾವಿದರದೇ ಎಂದು ಗುರುತಿಸುವಷ್ಟು ಶೈಲಿಗೆ ಒತ್ತುಕೊಟ್ಟು ಸ್ಥಿರವಾಗಿದ್ದಾರೆ. ಆದರೆ ಬಾಯಿರಿಯವರ ಕಲಾಕೃತಿಗಳು ಜನಸಾಮಾನ್ಯರಿಗೆ ಹತ್ತಿರವಾಗುವಂಥಹ ಕಲಾಕೃತಿಗಳನ್ನು ಬಹಳಷ್ಟು ರಚಿಸಿದ್ದು ಕಂಡು ಬರುತ್ತದೆ. ಅಲ್ಲದೇ ಶ್ರೀಕೃಷ್ಣನ ಚಿತ್ರ ಬರೆದು ಅದರ ಪ್ರತಿ ಕೃತಿಯನ್ನು ಜನಸಾಮಾನ್ಯರಿಗೆ ಎಟಕುವ ಬೆಲೆಗೆ ವಿತರಿಸಿದ್ದುಂಟು, ಇಂಥ ಶೈಲಿ ಅಭಿವ್ಯಕ್ತಿಯನ್ನೇ ಪ್ರತ್ಯೇಕವಾಗಿ ಗುರುತಿಸಬೇಕಾದ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ ಸಮಕಾಲೀನ ಕಲಾ ಸಂದರ್ಭದಲ್ಲಿ ಬಾಯಿರಿಯವರ ಜೀವನ-ಸಾಧನೆ-ಸಿದ್ಧಿ-ಕೊಡುಗೆಗಳನ್ನು ಅವರ ಕಲಾಶೈಲಿಗಳ ಅಧ್ಯಯನದಿಂದ ಮುಂದಿನ ಪೀಳಿಗೆಗೆ ಪರಿಚಯಿಸಿಕೊಡುವುದು ಸಹ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಕರ್ನಾಟಕ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಕಲಾವಿದರ ಕುರಿತು ಸಂಶೋಧನಾತ್ಮಕ ಅಧ್ಯಯನಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆದಿಲ್ಲ. ಕರ್ನಾಟಕ ಲಲಿತಕಲಾ ಅಕಾಡೆಮಿ ಹಿರಿಯ ಕಲಾವಿದರ ಕುರಿತು ಪರಿಚಯಗಳನ್ನು ಪ್ರಕಟಿಸಿದ್ದರೂ ಅವು ಸಮಗ್ರ ಅಧ್ಯಯನದಿಂದ ಕೂಡಿಲ್ಲ. ಕೈಪಿಡಿಗಳಂತೆ ತೋರುವ ಅವು ಕಲಾವಿದರ ಹುಟ್ಟು ಜೀವನ ವಿಚಾರದೊಂದಿಗೆ ಅಲ್ಪ ಪ್ರಮಾಣದ ಕಲಾಕೃತಿಗಳ ನಿರ್ಧಿಷ್ಟ ಅಧ್ಯಯನ ನಡೆಸಿದ್ದುಂಟು ಪಶ್ಚಮದ ಕಲಾವಿದರ ಚರಿತ್ರೆ ಗ್ರಂಥಗಳಂತಹ ಸಮಗ್ರ ಅಧ್ಯಯನ ನಮ್ಮಲ್ಲಿಯೂ ನಡೆಯಬೇಕಾಗಿದೆ.

೧೯೮೦ ರ ದಶಕದಿಂದ ಕರ್ನಾಟಕ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲ ಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಸಂಶೋಧನಾತ್ಮಕ ಅಧ್ಯಯನಗಳು ಪ್ರಾರಂಭಗೊಂಡಿರುವುದು ಕಂಡು ಬರುತ್ತದೆ. ಡಾ. ಎಸ್. ಸಿ. ಪಾಟೀಲರು ೧೯೮೨ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅದ್ಯಯನ[೩] ಎಂಬ ಸಂಶೋಧನ ಕಿರು ಪ್ರಬಂಧ ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೬ ರಲ್ಲಿ ಡಾ. ಬಿ. ಕೆ. ಹಿರೇಮಠರವರು ಕನ್ನಡ ಹಸ್ತ ಪ್ರತಿಗಳು ಒಂದು ಅಧ್ಯಯನ[೪] ಎಂಬ ಪಿಹೆಚ್.ಡಿ ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆಯ ಕುರಿತಂತೆ ಕೆಲವು ಅಧ್ಯಾಯಗಳನ್ನು ಮೀಸಲಾಗಿವೆ. ಇದರ ನಂತರ ೧೯೯೧ ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ ಕರ್ನಾಟಕ ಜನಪದ ಚಿತ್ರಕಲೆ[೫] ಈ ಮಹಾಪ್ರಬಂಧವನ್ನು ಡಾ. ಎಸ್. ಸಿ. ಪಾಟೀಲರು ಸಿದ್ದಪಡಿಸಿದ್ದು ನಮ್ಮ ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಂತರದ ದಿನಗಳಲ್ಲಿ ೧೯೯೫ ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು,[೬] ೧೯೯೬ ರಲ್ಲಿ ಡಾ. ಸಂಪದಾ ಭಟ್ ಅವರ ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು,[೭] ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೧೯೯೬ ರಲ್ಲಿ ಡಾ. ಪುಷ್ಪಾ ದ್ರಾವಿಡ್ ಇವರು ಮಂಡಿಸಿದ ಅನಿವಾಸಿ ಭಾರತೀಯ ಕಲಾವಿದ ದಿವಂಗತ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು,[೮] ೨೦೦೧ ರಲ್ಲಿ .ಡಾ. ಯಾದಪ್ಪ. ಪರದೇಶಿಯವರ ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ,[೯] ೨೦೦೨ ರಲ್ಲಿ ಡಾ. ಶಿವಾನಂದ ಬಂಟನೂರು ಇವರ ಕರ್ನಾಟಕ ಜನಪದ ಶಿಲ್ಪಕಲೆ ಒಂದು ಅಧ್ಯಯನ,[೧೦] ೨೦೦೨ ರಲ್ಲಿ ಡಾ. ಗಿರೀಶ ಅವರ ಬುಡಕಟ್ಟು ಚಿತ್ರಕಲೆ,[೧೧] ೨೦೦೨ ರಲ್ಲಿ ಡಾ. ಲಕ್ಷ್ಮೀ ದೇವಿಗವಾಯಿಯವರ ಕಲಾವಿದ ಎಂ. ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು– ಒಂದು ಅಧ್ಯಯನ,[೧೨] ೨೦೦೨ರಲ್ಲಿ

೩. ಡಾ. ಎಸ್. ಸಿ. ಪಾಟೀಲ : ಪಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ. ೧೯೮೩.

೪. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತ ಪ್ರತಿಗಳು, ಪಿಹೆಚ್.ಡಿ ಮ.ಪ್ರ. ಕರ್ನಾಟಕ ವಿ.ವಿ. ೧೯೮೬

೫. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಹೆಚ್.ಡಿ. ಮ.ಪ್ರ.ಕರ್ನಾಟಕ.ವಿ.ವಿ ೧೯೯೧

೬. ಡಾ. ಅ.ಲ.ನರಸಿಂಹನ್ : ಕರ್ನಾಟಕ ಭಿತ್ತಿಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು. ಪೆಹೆಚ್.ಡಿ ಮ.ಪ್ರ.ಬೆಂ.ವಿ.ವಿ. ೧೯೯೮

೭. ಡಾ. ಸಂಪದಾ ಭಟ್ : ರಾಗಮಾಲಾ ಚಿತ್ರಗಳು ಮತ್ತು ಹಿಂದೂಸ್ಥಾನಿ ಸಂಗೀತ ಪಿಹೆಚ್.ಡಿ ಮ.ಪ್ರ.ಕನ್ನಡ.ವಿ.ವಿ ೧೯೯೬

೮. ಡಾ. ಪುಷ್ಪಾ ದ್ರಾವಿಡ್ : ನಿಕೋಲಾಸ್ ಕೋರಿಕ್ ಜೀವನ ಮತ್ತು ಕಲಾಕರತಿಗಳು, ಪಿಹೆಚ್.ಡಿ ಮ.ಪ್ರ.ಬೆಂ.ವಿ.ವಿ..

೯. ಡಾ. ಯಾದಪ್ಪ. ಪರದೇಶಿ : ಉತ್ತರ ಕರ್ನಾಟಕ ಭಿತ್ತಿ ಚಿತ್ರಕಲೆ ಪಿಹೆಚ್.ಡಿ ಮ.ಪ್ರ.ಕನ್ನಡ ವಿ.ವಿ. ೨೦೦೦

೧೦. ಡಾ. ಶಿವಾನಂದ. ಬಂಟನೂರ : ಕರ್ನಾಕಟ ಜನಪದ ಪಿಹೆಚ್.ಡಿ ಮಹಾಪ್ರ. ಕನ್ನಡ ವಿ.ವಿ. ೨೦೦೨.

೧೧. ಡಾ. ಗಿರೀಶ : ಬಡುಕಟ್ಟು ಚಿತ್ರಕಲೆ ಪಿಹೆಚ್.ಡಿ.ಮ.ಪ್ರ.ಕನ್ನಡ ವಿ.ವಿ. ೨೦೦೨.

೧೨. ಡಾ. ಲಕ್ಷ್ಮೀದೇವಿ. ಗವಾಯಿ : ಕಲಾವಿದ ಎಂ.ಎ. ಚಟ್ಟಿಯವರ ಜೀವನ ಕಲಾಕೃತಿಗಳು, ಪಿಹೆಚ್.ಡಿ. ಮ.ಪ್ರ.ಕನ್ನಡ ವಿ.ವಿ. ೨೦೦೨.

ಡಾ. ಶರಣಪ್ಪ. ಕೋಲ್ಕಾರ ಅವರ ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸ ಕಾಲದ ಕಲೆ.[೧೩] ಬೆಂಗಳೂರು ವಿ.ವಿ.ಗೆ ೨೦೦೩ ರಲ್ಲಿ ಡಾ. ವೀಣಾಶೇಖರ್ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ಸ್ ಆಫ್ ಕರ್ನಾಟಕ (೧೨೮೦-೧೮೨೦), [೧೪] ೨೦೦೩ ರಲ್ಲಿ ಡಾ. ಎಸ್. ಸಿ. ಪಾಟೀಲರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಎಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಆರ್ಟ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೆಟ್ ವಿತ್ ಸ್ಪಶೆಲ್ ರೆಫೆರೆನ್ಸ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್[೧೫] ಕುರಿತು ನಡೆಸಿದ ಇಂಗ್ಲಿಷ ಭಾಷೆಯ ಪ್ರಬಂಧಗಳು.

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ ಎಂ. ಫಿಲ್ ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಜೆ. ಎಸ್. ಖಂಡೇರಾವ್ ಒಂದು ಅಧ್ಯಯನ[೧೬] ೨೦೦೨ ರಲ್ಲಿ ಡಾ. ಸೌಮ್ಯರವರ ಯಂತ್ರಾ ದಿ ಯುಜುವಲ್ ಆಫ್ ದಿ ಶಂಕರ ಫಿಲಾಸಫಿ ವಿಥ್ ರೆಫಿರೆನ್ಸ್ ಟು ಕಾಂಟೆಂಪರರಿ ಯಾಂತ್ರಿಕ ಆರ್ಟಿಸ್ಟ್[೧೭] ಎಂಬ ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯದಿಂದ ಹೊರ ಬಂದಿದೆ. ೨೦೦೨ ರಲ್ಲಿ ಪ್ರಮಿಳಾ ಲೋಚನಾರವರ ಮೈಂಡ್ ಮ್ಯೂಜಿಕ್ ಆಂಡ್ ಕಲರ ಕಾಂಪೋಜಿಸ್ ಆ್ಯಂಡ್ ಡೆವಲಪ್‌ಮೆಂಟ್ ರಾಗಮಾಲಾ ಪೇಂಟಿಂಗ್ಸ್ (೧೮) ಪಿಹೆಚ್.ಡಿ ಪ್ರಬಂಧ ಬೆಂಗಳೂರು ವಿಶ್ವವಿದ್ಯಾಲಯದಿಂದ ಹೊರತಂದರು. ೨೦೦೩ ರಲ್ಲಿ .ಡಾ. ಸಿದ್ದಲಿಂಗಸ್ವಾಮಿ ಹಿರೇಮಠರವರ ಕಲಾವಿದ ಆರ್. ಎಂ. ಹಡಪದ[೧೯] ಪಿಹೆಚ್.ಡಿ ಪ್ರಬಂಧವು ಕನ್ನಡ ವಿಶ್ವವಿದ್ಯಾಲಯದಿಂದ ಹೊರಬಂದಿತು. ಈ ಪ್ರಬಂಧದಲ್ಲಿ ಈ ಕಲಾವಿದರ ಜೀವನ, ಕಲಾಶಿಕ್ಷಣ ಹಾಗೂ ಕಲಾಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ, ಕಲಾಚಿಂತನೆ, ಕಲಾಕೃತಿಗಳನ್ನು ಅಧ್ಯಯನ ಮಾಡಿದ್ದಾರೆ. ೨೦೦೪ ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಡಾ. ಎಂ. ವ್ಹಿ. ಬಾಗಾಯತ್ ರವರ ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ[೨೦] (೧೪೦೦-೧೮೦೦) ಎಂಬ ಪಿಹೆಚ್.ಡಿ ಮಹಾಪ್ರಬಂಧವು ಪದವಿ ಪಡೆದುಕೊಂಡಿದೆ. ಈ ಪ್ರಬಂಧಕಾರರು ಪ್ರಬಂಧದಲ್ಲಿ ಮುಸ್ಲಿಂ ಅರಸರ ಕಾಲದಲ್ಲಿ ರಚನೆಗೊಂಡ ಹಸ್ತಪ್ರತಿ ಚಿತ್ರಕಲೆ, ಗ್ರಂಥ, ಚಿತ್ರಕಲೆ ಭಿತ್ತಿ ಚಿತ್ರಕಲೆ ಚಿಕಣಿ ಚಿತ್ರಕಲೆಯ ಕುರಿತು ಅಧ್ಯಯನ ಮಾಡಿದ್ದಾರೆ.

---

೧೩. ಡಾ. ಶರಣಪ್ಪ. ಕೋಲ್ಕಾರ : ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೌತಿಹಾಸ ಕಾಲದ ಕಲೆ ಪಿಹೆಚ್.ಡಿ ಮ.ಪ್ರ.ಕನ್ನಡ ವಿ.ವಿ. ೨೦೦೨.
೧೪. ಡಾ. ವೀಣಾಶೇಖರ : ಎ.ಸ್ಮತ್ ಆಫ್ ಹಿಸ್ಮಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦) ಬೆಂ. ವಿ.ವಿ. ೨೦೦೩.
೧೫. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಎಕ್ರಿಟಿಕಲ್ ಎನಾಅಸಿಸ್ ಆಫ್ ಆರ್ಟ್ ಎಜ್ಯುಕೇಶಿನ್ ಆರ್ಟ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೆಟ್ ವಿತ್ ಸ್ಪಶೆಲ್ ರೆಫೆರೆನ್ಸ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್
೧೬. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ. ಎಸ್. ಖಂಡೇರಾವ್ ಎಂಫಿಲ್ ಪ್ರಬಂಧ ಕನ್ನಡ ವಿ.ವಿ. ೨೦೦೩.
೧೭. ಡಾ. ಸೌಮ್ಯ : ಯಂತ್ರಾ ದಿ ಯುಜುವಲ್ ಆಫ್ ದಿ ಸಿ ಶಂಕರ ಫಿಲಾಸಫಿ ವಿಥ್ ರೆಪರೆನ್ಸ ಟು ಕಾಂಟೆಂಪರರಿ ಯಾಂತ್ರಿಕ ಆರ್ಟಿಸ್ಟ ಬೆಂ. ವಿ.ವಿ. ೨೦೦೨.
೧೮. ಡಾ. ಪ್ರಮಿಳಾ ಲೋಚನಾ : ಮೌಂಡ್ ಮ್ಯೂಜಿಕ್ ಆಂಡ್ ಕಲರ ಎಕ್ಸೋಪೋಜಿಸ್ ಆ್ಯಂಡ ಡೆವಲಪಮೆಂಟ್ ರಾಗಮಾಲಾ ಪೇಂಟಿಂಗ್ಸ್, ಬೆಂಗಳೂರು .ವಿ.ವಿ. ೨೦೦೨.
೧೯. ಡಾ. ಸಿದ್ದಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್. ಎಮ್. ಹಡಪದ ಪಿಹೆಚ್.ಡಿ ಮ.ಪ್ರ. ಕನ್ನಡ ವಿ.ವಿ. ೨೦೦೩
೨೦. ಡಾ. ಎಂ. ವ್ಹಿ. ಬಾಗಾಯತ್ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ (೧೪೦೦-೧೮೦೦) ಪಿಹೆಚ್.ಡಿ ಮ.ಪ್ರ.-೦೪

೨೦೦೮ ರಲ್ಲಿ ಡಾ. ಜಿ. ಓ. ಶಿವಕುಮಾರರವರ ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು[೨೧] ಎಂಬ ಮಹಾ ಪ್ರಬಂಧವು ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಹೊರಬಂದಿದೆ. ಈ ಅಧ್ಯಯನಕಾರರು ಕರ್ನಾಟಕದಲ್ಲಿ ಸಮಕಾಲೀನ ಸಾಂಸ್ಕೃತಿಕ, ಪ್ರಾದೇಶಿಕ ಉತ್ಸವಗಳನ್ನು ಜಾತ್ರೆಗಳನ್ನು, ಆಚರಣೆಗಳನ್ನು, ಹಬ್ಬಗಳನ್ನು ಮತ್ತು ವಾಣಿಜ್ಯ ಮೇಳಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ೨೦೦೫ ರಲ್ಲಿ ಡಾ. ಶಶಿಕಲಾ ಹೂಗಾರರವರ ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ[೨೨] ಎಂಬ ಪ್ರಬಂಧವು ಕನ್ನಡ ವಿಶ್ವವಿದ್ಯಾಲಯದಿಂದ ಹೊರಬಂದಿದೆ. ಈ ಪ್ರಬಂಧಕಾರರು ತಮ್ಮ ಅಧ್ಯಯನದಲ್ಲಿ ಕರ್ನಾಟಕದಲ್ಲಿ ಕಂಡುಬರುವ ತೊಗಲುಗೊಂಬೆಯ ಆಟಗಳು, ತೊಗಲುಗೊಂಬೆಯ ಕಲಾವಿದರು, ತೊಗಲುಗೊಂಬೆ ಚಿತ್ರಕಲೆಯ ರಚನೆ, ಆಟದ ವೈಶಿಷ್ಟತೆ ಹಾಗೂ ಪರಿಕರಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ೨೦೦೫ ರಲ್ಲಿ ಡಾ. ಶಿವಕುಮಾರ ತುಕ್ಕಣ್ಣವರ ರವರಕರ್ನಾಟಕದ ರಥಶಿಲ್ಪಗಳು[೨೩] ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದಿಂದ ಹೊರತಂದಿದ್ದಾರೆ. ಈ ಪ್ರಬಂಧದಲ್ಲಿ ಕರ್ನಾಟಕದಲ್ಲಿ ಕಂಡು ಬರುವ ರಥಗಳ ಮಾದರಿ, ರಚನೆ, ಪರಿಕರಗಳು, ಆಚರಣೆಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ೨೦೦೬ ರಲ್ಲಿ ಡಾ. ವಿಶ್ವೇಶ್ವರಿ ತಿವಾರಿಯವರ ರಂಗೋಲಿಚಿತ್ರಕಲೆ[೨೪] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಹೊರಬಂದಿದೆ. ಇವರು ರಂಗೋಲಿ ಚಿತ್ರಕಲೆಯ ಕುರಿತು ರಂಗೋಲಿಯ ವಿಧಗಳು, ಪದ್ಧತಿಗಳು ಆಚರಣೆಗಳು ಹಾಗೂ ರಂಗೋಲಿ ಪರಿಕರಗಳನ್ನು ಅಧ್ಯಯನ ಮಾಡಿದ್ದಾರೆ. ೨೦೦೭ ರಲ್ಲಿ ಕುಮಾರಿ ಡಾ. ಬಿ. ಆರ್. ಗೀತಾಂಜಲಿ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಕರ್ನಾಟಕದ ದೀಪಸ್ತಂಭಗಳು[೨೫] ಎಂಬ ಪ್ರಬಂಧವನ್ನು ಸಾದರ ಪಡಿಸಿದ್ದಾರೆ. ೨೦೦೭ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಸಲ್ಲಿಸಿದ ಸುರಪುರ ಚಿತ್ರಕಲಾ ಶೈಲಿ.[೨೬] ಎಂ.ಫಿಲ್ ಕಿರು ಪ್ರಬಂಧವನ್ನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

---

೨೧. ಡಾ. ಜಿ. ಓ. ಶಿವಕುಮಾರ : ಕರ್ನಾಟಕ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳ ಪಿಹೆಚ್.ಡಿ. ಮ.ಪ್ರ. ೨೦೦೪.

೨೨. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ ಪಿಹೆಚ್.ಡಿ ಮ.ಪ್ರ ಕನ್ನಡ ವಿ.ವಿ. ೨೦೦೫

೨೩. ಡಾ. ಶಿವಕುಮಾರ. ತುಕ್ಕಣ್ಣವರ : ಕರ್ನಾಟಕದ ರಥಶಿಲ್ಪಗಳು, ಪಿಹೆಚ್.ಡಿ. ಮ.ಪ್ರ. ಕನ್ನಡ ವಿ.ವಿ.೨೦೦೫

೨೪. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆ ಪಿಹೆಚ್.ಡಿ. ಮ.ಪ್ರ. ಗುಲಬರ್ಗಾ ವಿ.ವಿ. ೨೦೦೬

೨೫. ಡಾ. ಬಿ. ಆರ್. ಗೀತಾಂಜಲಿ : ಕರ್ನಾಟಕದ ದೀಪಸ್ತಮಭಗಳು ಪಿಹೆಚ್.ಡಿ ಮ.ಪ್ರ. ಕನ್ನಡ .ವಿ.ವಿ. ೨೦೦೭

೨೬. ಮಲ್ಲಿಕಾರ್ಜುನ ಬಾಗೋಡಿ : ಸುರಪುರ ಚಿತ್ರಕಲಾ ಶೈಲಿ ಪಿಹೆಚ್.ಡಿ. ಮ.ಪ್ರ. ಕನ್ನಡ.ವಿ.ವಿ. ೨೦೦೭.

ಬಿ. ಪಿ. ಬಾಯಿರಿಯವರ ಕುರಿತು ನಡೆದ ಅಧ್ಯಯನ

ಕರ್ನಾಟಕದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಚಿತ್ರಕಲೆಯ ಸಂಶೋಧನಾತ್ಮಕ ಅಧ್ಯಯನ ಸಮಗ್ರವಾಗಿ ನಡೆಯ ಬೇಕಾದುದರ ಹಿನ್ನೆಲೆಯಲ್ಲಿ ಬಿ.ಪಿ. ಬಾಯಿರಿಯವರ ಬದುಕು, ಕಲಾಕೃತಿಯ ಕುರಿತು ಅಧ್ಯಯನ ನಡೆಸುವ ಅಗತ್ಯತೆ ಇಂದು ನಮ್ಮ ಮುಂದೆ ಇದೆ. ಬಾಯಿರಿಯವರ ಕುರಿತು ನಡೆದ ಅಧ್ಯಯನ ಅಲ್ಪ ಪ್ರಮಾಣದ್ದು. ಈ ಹಿನ್ನೆಲೆಯಲ್ಲಿ ಬಾಯಿರಿಯವರ ಕುರಿತು ಇದುವರೆಗೆ ಬಂದ ಅಧ್ಯಯನದ ವಿವರಗಳೂ ವಿರಳವಾಗಿದ್ದು ಅವರ ಕೆಲವೇ ಕಲಾಕೃತಿಗಳೊಂದಿಗೆ ಅಲ್ಪ ಪರಿಚಯಕ್ಕೆ ಸಿಮಿತಗೊಂಡಿದ್ದೂ ಬಾಯಿರಿಯವರ ಬದುಕು, ಕಲಾಕೃತಿಗಳ ಕುರಿತು ಸಮಗ್ರವಾಗಿ ಅಧ್ಯಯನ ನಡೆಸುವುದರ ಅವಶ್ಯಕತೆಯ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ರೂಪುಗೊಂಡಿದೆ.

೨೦೦೬-೦೭ ರಲ್ಲಿ ಉಡುಪಿಯ ಚಿತ್ರಕಲಾ ಮಂದಿರ ಕಲಾ ಶಾಲೆಯ ಅಂತಿಮ ವರ್ಷದ ವಿಶೇಷ ಪರಿಣತಿ ಚಿತ್ರಕಲೆಯ ವಿದ್ಯಾರ್ಥಿ ಸೂರಜ ಕುಮಾರ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಬಿ.ಪಿ.ಬಾಯಿರಿಯವರ ಜೀವನ ಮತ್ತು ಕಲಾಕೃತಿಗಳು[೧] ಎಂಬ ಕಿರು ಯೋಜನಾ ವರದಿಗಳೆ ಬಾಯಿರಿಯವರ ಕುರಿತು ನಡೆದ ಅಲ್ಪ ಪ್ರಮಾಣದ ಸಂಶೋಧನೆಗಳಾಗಿವೆ. ಅಲ್ಲದೆ ಹೊಸ ದಿಗಂತ ದಿನ ಪತ್ರಿಕೆ ಟೈಮ್ಸ್ ಆಫ್. ಇಂಡಿಯಾ ದಿನ ಪತ್ರಿಕೆ, ಸುಧಾ, ತರಂಗ ವಾರ ಪತ್ರಿಕೆ, ವಿಶೇಷಾಂಕಗಳಲ್ಲಿ ಬಾಯಿರಿಯವರ ಕಲೆ ಮತ್ತು ಜೀವನದ ಬಗ್ಗೆ ಪ್ರಕಟಣೆ ಬಂದಿವೆ.

ಅಧ್ಯಯನ ಸ್ವರೂಪ

ಪ್ರಸ್ತುತ ಈ ಅಧ್ಯಯನವನ್ನು ಏಳು ಅಧ್ಯಾಯಗಳಲ್ಲಿ ವಿಂಗಡಿಸಿದ್ದು, ಪ್ರತಿಯೊಂದು ಅಧ್ಯಾಯದ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ರೂಪದ ವಿವರವನ್ನು ಇಲ್ಲಿ ಕೊಡಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪವನ್ನು ವಿಧಾನಗಳನ್ನು ಮತ್ತು ಮೂಲ ಆಕರ ಸಾಮಗ್ರಿ, ಅನುಷಂಗಿಕ ಆಕರ ಸಾಮಗ್ರಿಯ ಕುರಿತಾದ ವಿವರಣೆ ಇರುವುದು.

ಎರಡನೆಯ ಅಧ್ಯಾಯದಲ್ಲಿ ಬಿ.ಪಿ. ಬಾಯಿರಿಯವರು ಜನಿಸಿದ ಉಡುಪಿಯ ಬಾರ್ಕೂರಿನ ಪರಿಸರ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಅವರ ಬಾಲ್ಯಜೀವನ ಪ್ರಾಥಮಿಕ ಮತ್ತು ಪ್ರೌಢ ಹಂತದ ಶೈಕ್ಷಣಿಕ ಜೀವನವನ್ನು ಕುರಿತು ವಿವರಣೆ ನೀಡಲಾಗುವುದು.

ಮೂರನೆಯ ಅಧ್ಯಾಯದಲ್ಲಿ ಬಾಯಿರಿಯವರ ವೃತ್ತಿ ಜೀವನದ ಪ್ರಾರಂಭ, ಅವರು

---

೧. ಸೂರಜಕುಮಾರ : ಬಿ.ಪಿ. ಬಾಯಿರಿಯವರ ಜೀವನ ಮತ್ತು ಕಲಾಕೃತಿಗಳು ಡಿಪ್ಲೋಮಾ ಪದವಿಗಾಗಿ ಸಲ್ಲಿಸಿದ ಕಿರು ಯೋಜನಾ ವರದಿ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬-೦೭.

ನಡೆದು ಬಂದ ದಾರಿ ಮತ್ತು ಜೊರ್ಜ ಹೈಸ್ಕೂಲ್‌ನಲ್ಲಿ ಅವರ ಶೈಕ್ಷಣಿಕ ಸಾಧನೆಗಳ ವಿವರಗಳನ್ನು ಇಲ್ಲಿ ದಾಖಲಿಸಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ ಜಿ.ಪಿ.ಬಾಯಿರಿಯವರು ತಮ್ಮ ಶೈಕ್ಷಣಿಕ ಬದುಕಿನ ಜೊತೆ ಜೊತೆಗೆ ಅವರು ರಚಿಸಿರುವ ನಾಡಿನ ಗಣ್ಯರ ಭಾವಚಿತ್ರಗಳು, ಪೂರ್ಣಭಾವಚಿತ್ರಗಳು ಮತ್ತು ವರ್ಣಚಿತ್ರಗಳು ಕುರಿತಾದ ವಿವರಣೆ ನೀಡಲಾಗಿದೆ. ಅಂತಹ ಕಲಾಕೃತಿಗಳ ಪ್ರಭಾವ, ಪ್ರೇರಣೆ, ತಂತ್ರಗಾರಿಕೆಗಳ ಕುರಿತಾದ ವಿಷಯಗಳನ್ನು ಪರಾಮರ್ಶಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಬಾಯಿರಿಯವರು ತಮ್ಮ ಬದುಕಿನ ಜೊತೆಗೆ ಪರಿಚಯಿಸಿದ ರಗೋಲಿ ಕಲೆಯ ಕುರಿತು ವಿವರಣೆ ನೀಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬಾಯಿರಿಯವರು ಕಲಾ ಶಿಕ್ಷಣ, ಕಲಾಕೃತಿಗಳ ರಚನೆಗೆ ಮಾತ್ರ ತೊಡಗಿಸಿಕೊಳ್ಳದೇ ಕಲಾ ಸಾಹಿತ್ಯಕ್ಕೂ ವಿಸ್ತರಿಸಿಕೊಂಡಿರುವುದಲ್ಲದೇ ರಂಗೋಲಿ ಚಿತ್ರಕಲೆಗೆ ಸಂಬಂಧಿಸಿದ ಕಲಾ ಸಾಹಿತ್ಯ, ಚಿಕ್ಕ ಮಕ್ಕಳ ಕಲಾ ಸಾಹಿತ್ಯ ಮುಂತಾದ ಇದುವರೆಗೆ ಬಂದ ಅವರ ಸಾಹಿತ್ಯವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಏಳನೆಯ ಅಧ್ಯಾಯದಲ್ಲಿ ಸಮಾರೋಪವಾಗಿದ್ದು, ಎಲ್ಲ ಅಧ್ಯಾಯನದಿಂದ ಹೊರಬಂದ ಫಲಿತಾಂಶಗಳ ಕುರಿತಾದ ಸಮೀಕ್ಷೆಯ ವಿವರವನ್ನು ನೀಡಲಾಗುವುದು.

ಅಧ್ಯಯನದ ವೈಧಾನಿಕತೆ

ವ್ಯಕ್ತಿಗತ ಅದ್ಯಯನದ (Case Study) ವಿಧಾನದಲ್ಲಿ ಚಿತ್ರಕಲಾವಿದ ಬಿ. ಪಿ. ಬಾಯಿರಿಯವರ ಅಧ್ಯಯನವನ್ನು ಕೈಕೊಳ್ಳಲಾಗಿದೆ. ಇಲ್ಲಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

ಈ ಎರಡು ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರ ಕಾರ್ಯ, ಸ್ವತಃ ಕಲಾವಿದರ ಸಂಬಂಧಿಕರ ಸಂದರ್ಶನ, ಮಕ್ಕಳ ಸಂದರ್ಶನ, ಅವರೊಂದಿಗೆ ಚರ್ಚೆ ಕಲಾಕೃತಿಗಳ ಛಾಯಾಚಿತ್ರಣ ಮಾಡುವದು. ಅವರ ಸಮಕಾಲೀನರ ಸಂದರ್ಶನಗಳು ಹಾಗೂ ಸಂಗ್ರಹಿತ ವಿಷಯಗಳ ಪಟ್ಟಿ ಸಿದ್ಧಪಡಿಸಿ ವಿವಿಧ ರೂಪದಲ್ಲಿ ಅಧ್ಯಯನ ಮಾಡಲಾಗಿದೆ.

ಅ. ಸಂದರ್ಶನ

ಬಾರ್ಕೂರಿನಲ್ಲಿ ಜನಿಸಿದ ಕಲಾವಿದ ಬಿ.ಪಿ.ಬಾಯಿರಿಯವರ ಆತ್ಮೀಯ ಮಕ್ಕಳನ್ನು ಸಂದರ್ಶಿಸಿ. ಸಂಬಂಧಿಕರನ್ನು ಸಂದರ್ಶಿಸಿ ಅವರ ಬಾಲ್ಯ, ಪ್ರಾಥಮಿಕ ಶಿಕ್ಷಣ, ಅಂದಿನ ಸನ್ನಿವೇಶದಲ್ಲಿ ಕಲೆಯ ಕಡೆ ಅವರ ಮನಸ್ಸು ಆಕರ್ಷಿತವಾದ ಬಗೆ, ಪ್ರೇರಣೆ ನೀಡಿದ ವ್ಯಕ್ತಿಗಳು, ಬಾರ್ಕೂರಿನ ಪರಿಸರ, ಶಾಲಾ ಪರಿಸರ ಮತ್ತು ಅಲ್ಲಿನ ಆಚರಣೆಗಳು ಇವರ ಮೇಲೆ ಹೇಗೆ ಪ್ರಭಾವ ಬೀರಿದವು ಹಾಗೂ ಅವರ ಕೌಟುಂಬಿಕ ಹಿನ್ನೆಲೆಯನ್ನು ಸಂಗ್ರಹಿಸಲಾಗಿದೆ. ನಂತರ ಪ್ರೌಢ ಶಾಲಾ ವ್ಯಾಸಂಗ, ಕಲಾ ಶಿಕ್ಷಣ ಮತ್ತು ಆ ಸಂದರ್ಭದಲ್ಲಿ ಕಲಾ ರಚನೆಯ ಹಿನ್ನೆಲೆಯ ಅನುಭವಗಳನ್ನು ಇಲ್ಲಿ ದಾಖಲಿಸಲಾಗಿದೆ. ಕುಂದಾಪುರಕ್ಕೆ ಕಲಾಶಿಕ್ಷಕರಾಗಿ ಬೋರ್ಡ ಹೈಸ್ಕೂಲ್‌ಗೆ ಪಾದಾರ್ಪಣೆ ಜೊತೆ ಜೊತೆಗೆ ಭಾವಚಿತ್ರಣದ ರಚನೆ. ಬಾಯಿರಿಯವರ ಶಿಷ್ಯ ಬಳಗ, ಆಪ್ತ ವಲಯದ ಒಡನಾಡಿಗಳಿಂದ ಪ್ರಶ್ನಾವಳಿಗಳ ಮೂಲಕ ಅಭಿಪ್ರಾಯ ಸಂಗ್ರಿಸಲಾಗಿದೆ. ಇದಕ್ಕೂ ಮುಖ್ಯವಾಗಿ ಬಾಯಿರಿಯವರ ಕಲಾಕೃತಿಗಳ ಅಭಿವ್ಯಕ್ತಿಯ ಕುರಿತು ಅವರ ಅನಿಸಿಕೆಗಳನ್ನು, ರಚನೆಯ ಹಿನ್ನೆಲೆ, ಪ್ರೇರಣೆ, ಪ್ರಭಾವಗಳನ್ನು ಸಂದರ್ಶನದ ಮೂಲಕ ಸಂಗ್ರಹಿಸಿ ಇಲ್ಲಿ ಬಳಸಿಕೊಳ್ಳಲಾಗಿದೆ.

ಬ. ಛಾಯಾಚಿತ್ರಣ

ಬಾಯಿರಿಯವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಶ್ರೀಮಂತರ ಮನೆಗಳಲ್ಲಿ ಶಾಲೆ ಕಾಲೇಜುಗಳಲ್ಲಿ ಇದ್ದರೆ, ಇನ್ನು ಕೆಲವು ಬಾಯಿರಯವರ ಸಂಗ್ರಹದಲ್ಲಿವೆ. ವಿದ್ಯಾರ್ಜನೆಯ ಸಂದರ್ಬದಲ್ಲಿ ರಚಿಸಿದ್ದ ಕಲಾಕೃತಿಗಳು ಅಲ್ಪವಾಗಿದ್ದರೆ, ನಂತರ ಶಿಕ್ಷಕ ವೃತ್ತಿಯೊಂದಿಗೆ ರಚಿಸಿದ ಕಲಾಕೃತಿಗಳು ಹಲವಾರು. ಅವುಗಳಲ್ಲಿ ಭಾವಚಿತ್ರಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳು ವಿವಿಧ ಮಾಧ್ಯಮದ ವರ್ಣಚಿತ್ರಗಳು ವಿಷಯವಾರು ವಿಂಗಡಿಸಇಕೊಂಡು ಇಲ್ಲಿಯ ಅಧ್ಯಾಯುಗಳಿಗೆ ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ

ಕಲಾ ಸಂಶೋಧನಾ ಮಹಾಪ್ರಬಂಧಗಳು, ಪ್ರಕಟಿತ ಕಲಾ ಸಾಹಿತ್ಯ ಕೃತಿಗಳು, ನಿಘಂಟುಗಳು, ವಿಶ್ವಕೋಶಗಳು, ಪತ್ರಿಕೆಗಳು, ಕಲಾವಿಧರ ಕಲಾಕೃತಿಗಳನ್ನುದ್ದೇಶಿಸಿ, ಪ್ರಕಟಿವಾದ ಕಲಾವಿಮರ್ಶೆ ಮತ್ತು ಅಭಿಪ್ರಾಯಗಳು, ಲೇಖನಗಳು, ಸಂಶೋಧನಾ ಲೇಖನಗಳು ಇತ್ಯಾದಿ ರೀತಿಯ ಆನುಷಂಗಿಕ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಾಯ : ಎರಡು

ಬಿ. ಪಿ. ಬಾಯಿರಿಯವರ ಬಾಲ್ಯ ಪರಿಸರ ಮತ್ತು ವಿದ್ಯಾಭ್ಯಾಸ

ಈ ಅಧ್ಯಾಯದಲ್ಲಿ ಬಾಯಿರಿಯವರ ಜನ್ಮಸ್ಥಳದ ಸಾಂಸ್ಕೃತಿಕ ಪರಿಸರ, ಬಾಲ್ಯ ಜೀವನ, ತಂದೆ-ತಾಯಿ, ಕೌಟುಂಬಿಕ ಹಿನ್ನೆಲೆ, ಪ್ರಾತಮಿಕ, ಮಾಧ್ಯಮಿಕ ಶಿಕ್ಷಣ ಹಂತಗಳಲ್ಲಿ ಕಲೆಯ ಕಡೆಗೆ ಹರಿದ ಅವರ ಮನಸ್ಸು ಅಲ್ಲಿ ಕಲೆಯ ಕುರಿತಾಗಿ ಪ್ರೇರಣೆ ನೀಡಿದ ಪ್ರಾಥಮಿಕ ಶಾಲಾ ದಿನಗಳು ಬಾಯಿರಿಯವರ ಬಾಲ್ಯದಲ್ಲಿನ ಕಲಾ ಚಟುವಟಿಕೆಗಳು, ಊರಿನಲ್ಲಿ ನಡೆಯುತ್ತಿದ್ದ ಹಬ್ಬ ಹರಿದಿನಗಳ ಆಚರಣೆಗಳು ಹಾಗೂ ಆ ಸಂದರ್ಭದಲ್ಲಿ ಮನೆಯ ಮುಂದೆ ಹಾಕುತ್ತಿದ್ದ ರಂಗೋಲಿಗಳು ಬಾಯರಿಯವರ ಕಲಾರಚನೆಗಳಿಗೆ ಪ್ರೇರಣೆಯಾಗಿವೆ. ಅವುಗಳಿಂದ ಆಕರ್ಷಿತವಾಗಿ ಬಾಯರಿಯವರ ಮನಸ್ಸು ಕಲೆಯ ಕಡೆಗೆ ತಿರುಗಿದ ರೀತಿ, ಬಾಲ್ಯದ ದಿನಗಳಲ್ಲಿ ಕಡಲತೀರ ನಿಸರ್ಗ ಸಂಪತ್ತು, ಶಾಲಾ ಹಂತದಲ್ಲಿ ಕಲಾ ಗುರುಗಳ ವಿಶೇಷ ಆಸಕ್ತಿ, ಮನೆಯಲ್ಲಿ ಕುಟುಂಬ ವರ್ಗದವರ ನೀರಸ ಪ್ರತಿಕ್ರಿಯೆಗಳ ಮಧ್ಯದಲ್ಲಿಯೂ ಇವರು ಸಾಮಾನ್ಯ ಶಿಕ್ಷಣದೊಂದಿಗೆ ಈ ಕಲಾಭಿರುಚಿಯನ್ನು ಬೆಳೆಸಿಕೊಂಡು ಬಂದ ಕುತುಹಲಕಾರಿಯಾದ ಅಂಶಗಳು ಈ ಅಧ್ಯಾಯದಲ್ಲಿ ಚರ್ಚಿತಗೊಂಡಿವೆ.

ಅಧ್ಯಾಯ : ಮೂರು

ಬಿ.ಪಿ. ಬಾಯಿರಿಯವರ ವೃತ್ತಿ ಜೀವನ ಮತ್ತು ಕಲಾಸೃಷ್ಠಿ

ಬಾಯಿರಿಯವರು ತಮ್ಮ ವೃತ್ತಿ ಜೀವನವನ್ನು ೧೯೩೫ ರಲ್ಲಿ ಕಲಾ ಶಿಕ್ಷಕರಾಗಿ ಮಾಲ್ಕಿಯ ಕಲಾ ಶಾಲೆಯಲ್ಲಿ ಕಲಾ ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದರು. ಇವರ ಕಲಾ ಪ್ರವೃತ್ತಿಗೆ ಸ್ಫೂರ್ತಿ ದೊರತದ್ದು ಇಲ್ಲಿಂದಲೇ ಮುಂದೆ ಮೂರು ದಶಕಗಳ ಕಾಲ ಅವರ ಅಧ್ಯಾಪನ ವೃತ್ತಿ ಅವಿಛಿನ್ನವಾಗಿ ಮುಂದುವರೆಯಿತು. ಅಲ್ಲದೆ ಅನೇಕ ಪುಸ್ತಕಗಳ ಮುಖ ಪುಟಗಳಿಗೆ ಬಾಯಿರಿಯವರ ಚಿತ್ರ ಬಿಡಿಸುವ ಕೆಲಸ ಅಲ್ಲದೇ ಮುಂತಾದ ವಿಷಯುಗಳ ಪ್ರಭಾವದ ವಿವರಣೆ ನೀಡಲಾಗುವುದು. ಉಡುಪಿಯ ಬೋರ್ಡ ಹೈಸ್ಕೂಲನಲ್ಲಿನ ಕಲಾ ಶಿಕ್ಷಕನ ಪಾತ್ರ ಉಡುಪಿಯ ಕಲಾಸಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲೆ ಕಲಿಸುವ ಅವಕಾಶದ ವಿವರಣೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ : ನಾಲ್ಕು

ಬಿ.ಪಿ. ಬಾಯಿರಿಯವರ ಕಲಾಕೃತಿಗಳ ವಸ್ತು ವಿಷಯಗಳು

ಈ ಅಧ್ಯಾಯವು ಬಾಯಿರಿಯವರ ತಮ್ಮ ಶೈಕ್ಷಣಿಕ ಬದುಕಿನ ಮಧ್ಯದಲ್ಲಿ ರಚಿಸಿದ ರೇಖಾಚಿತ್ರಗಳ ಮತ್ತು ವರ್ಣ ಚಿತ್ರಗಳ ಕುರಿತಾದ ವಿಶ್ಲೇಷಣೆ ಇರುವುದು ಇದರಲ್ಲಿ ಅವರ ಕಲಾಕೃತಿಗಳನ್ನು ಈ ಕೆಳಗಿನಂತೆ ವರ್ಗೀಕರಿಸಿಕೊಂಡು ಇಲ್ಲಿ ಚರ್ಚಿಸಲಾಗಿದೆ.

ಕಲಾಕೃತಿಗಳ ವರ್ಗೀಕರಣ

೧. ಪೌರಾಣಿಕ ಚಿತ್ರಗಳು

೨. ಐತಿಹಾಸಿಕ ವ್ಯಕ್ತಿಗಳ ಚಿತ್ರಗಳು

೩. ಗಣ್ಯವ್ಯಕ್ತಿಗಳ, ಕವಿಗಳ ಚಿತ್ರಗಳು

೪. ಶಿಕ್ಷಣ ತಜ್ಞರ ಚಿತ್ರಗಳು

೫. ಜ್ಞಾನಪೀಠ ಪ್ರಶಸ್ತಿ ವಿಜೇತರ ಚಿತ್ರಗಳು

ಹೀಗೆ ಈ ಮೇಲಿನ ವರ್ಗೀಕರಣದಂತೆ ಕಲಾಕೃತಿಗಳನ್ನು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಐದು

ಬಿ. ಪಿ. ಬಾಯಿರಿಯವರ ರಂಗೋಲಿ ಸಾಹಿತ್ಯ ಮತ್ತು ಚಿತ್ರವಿನ್ಯಾಸಗಳು

ಈ ಅಧ್ಯಾಯವು ಬಿ. ಪಿ. ಬಾಯರಿಯವರ ರಂಗೋಲಿ ಸಾಹಿತ್ಯ ಮತ್ತು ಚಿತ್ರವಿನ್ಯಾಸಗಳ ಕಲೆಯಾಗಿದ್ದು, ರಂಗವಲ್ಲಿ ಬಿ. ಪಿ. ಬಾಯಿರಿಯವರಿಗೆ ಸದಾ ಕಾಡುತ್ತಿರುವ ಕಲಾ ವಸ್ತುವಾಗಿದ್ದು, ಬಾಲ್ಯದಿಂದಲೇ ಇವರಿಗೆ ರಂಗೋಲಿಯಲ್ಲಿ ಆಸಕ್ತಿ, ರಂಗವಲ್ಲಿ ಕುರಿತಾಗಿ ತಮ್ಮಲ್ಲಿ ಆಸಕ್ತಿ ಮೂಡುವುದಕ್ಕೆ ತಮ್ಮ ಪರಿಸರವೇ ಕಾರಣವೆಂದು ಹೇಳುತ್ತಿದ್ದರು. ಸುಧಾ ವಾರ ಪತ್ರಿಕೆ ಪ್ರತಿವಾರವೂ ಇವರ ರಂಗದಲ್ಲಿ ರಚನೆಗಳನ್ನು ಪ್ರಕಟಿಸತೊಡಗಿತು. ಕ್ರಮೇಣ ಇವರು ನಿವೃತ್ತರಾದ ನಂತರ ತಮ್ಮನ್ನು ರಂಗವಲ್ಲಿ ಕಲೆಗೆ ಗಂಭೀರವಾಗಿ ತೊಡಗಿಸಿಕೊಂಡರು. ಇದೆಲ್ಲದರ ಜೊತೆಗೆ ಹಳೆ ತಲೆಗಳೊಂದಿಗೆ ಅವರ ರಂಗವಲ್ಲಿ ಮಾದರಿಗಳ ಸಂಗ್ರಹಣೆಗಳನ್ನೂ ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಆರು

ಬಿ. ಪಿ. ಬಾಯಿರಿಯವರ ಕಲಾ ಸಾಹಿತ್ಯ ಕೃತಿಗಳು

ಬಿ.ಪಿ.ಬಾಯಿರಿಯವರು ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡಮಿಯ ಪ್ರಶಸ್ತಿಯನ್ನು ಪಡೆದ ಪ್ರಮುಖ ಕಲಾವಿದರಲ್ಲಿ ಬಾಯಿರಿಯವರು ಒಬ್ಬರು ಕರ್ನಾಟಕದ ಕಲಾ ಸಾಹಿತ್ಯವನ್ನು ಉತ್ತಂಗಕ್ಕೇರಿಸಿದ ಮೊದಲಿಗರೆನ್ನಬಹುದು ಕಲೆ ಮತ್ತು ಸಾಹಿತ್ಯಗಳು ಜನ ಸಾಮಾನ್ಯರ ಬಾಹ್ಯ ಚಟುವಟಿಕೆಗಳನ್ನು ಮಾತ್ರ ಪ್ರದರ್ಶಿಸದೇ ರಾಷ್ಟ್ರದ ಅಂತರ ದರ್ಶನವನ್ನುಉಂಟು ಮಾಡುತ್ತದೆ. ಅವು ನಮ್ಮನ್ನು ಶಾಂತ ಹಾಗೂ ಭವ್ಯ ವಿಚಾರಗಳಿರುವ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಹೀಗೆ ಕಲೆ ಮತ್ತು ಸಾಹಿತ್ಯಗಳು ಬೀರುವ ಪರಿಣಾಮ ಅನನ್ಯವಾಗಿರುತ್ತದೆ. ಬಾಯಿರಿಯವರು ಬರೆದಿರುವ ಚಿಕ್ಕ ಮಕ್ಕಳ ಸಾಹಿತ್ಯ, ಕಲಾ ಇತಿಹಾಸದ ಸಾಹಿತ್ಯ, ಕಲಾವಿದರ ಕಥೆಗಳು ಮುಂತಾದ ಇನ್ನೂ ಅನೇಕ ವಿಚಾರಗಳನ್ನು ಸಮಗ್ರವಾಗಿ ಅಧ್ಯಯನದಲ್ಲಿ

ಚರ್ಚಿಸಲಾಗಿದೆ. ಬಾಯಿರಿಯವರನ್ನು ಶಾಲಾ ಸಾಹಿತಿಯೆಂದು ಗುರುತಿಸದೇ ಇದ್ದರೂ ಅವರಲ್ಲಿ ಸೂಕ್ಷ್ಮ ಗ್ರಹಿಕೆಯಿಂದ ಕೂಡಿದ ಕಲಾ ಸಾಹಿತ್ಯ ವಿಶಾಲವಾದ ಹರವನ್ನು ಪಡೆದುಕೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ಈ ಎಲ್ಲಾ ಪ್ರಮುಖ ಅಂಶಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಏಳು

ಸಮಾರೂಪ

ಪ್ರಸ್ತುತ ಅಧ್ಯಾಯದಲ್ಲಿ ಮಹಾಪ್ರಬಂಧದ ಎಲ್ಲ ಅಧ್ಯಾಯಗಳ ಸಮಿಕ್ಷೆಯನ್ನು ಮಾಡಿ ಬಾಯಿರಿಯವರ ವ್ಯಕ್ತಿ, ಅವರ ಕಲಾಕೃತಿಗಳ ತಂತ್ರ, ವರ್ಣ ವೈಶಿಷ್ಟ್ಯ, ಸಮಕಾಲೀನ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಬಾಯಿರಿಯರ ಕಲಾಕೃತಿಗಳ ಹರವು, ಸಾಮಾಜಿಕ ದಾರ್ಮಿಕ ಚಿಂತನೆಗಳ ವಿವಿಧ ಮಗ್ಗಲುಗಳ ಅಧ್ಯಯನ ಸಾಧ್ಯತೆ ಕುರಿತು ಸಂಗತಿಗಳನ್ನು ವಿವರಿಸಲಾಗಿದೆ.

* * * *

ಅಧ್ಯಾಯ ಎರಡು

ಬಿ. ಪಿ. ಬಾಯಿರಿಯವರ ಬಾಲ್ಯ ಪರಿಸರ ಮತ್ತು ವಿದ್ಯಾಭ್ಯಾಸ

ಭಾರತದಲ್ಲಿಯೇ ಅತ್ಯಂತ ಖ್ಯಾತಿ ಪಡೆದ, ದ್ವೈತ ಸಿದ್ಧಾಂತ ಪ್ರತಿಪಾದಕರಾದ ಮಧ್ವಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಕೃಷ್ಣ ದೇವಾಲಯವಿರುವ ಪ್ರಸಿದ್ಧ ಯಾತ್ರಾ ಸ್ಥಳ ಉಡುಪಿ. ಕರ್ನಾಟಕದ ಕಡಲ ತೀರದ ಉಡುಪಿ ಜಿಲ್ಲೆಯ ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಮತ್ತು ಪೂರ್ವಭಿಮುಖವಾಗಿ ಭೂ ಹಸಿರು ಸಮೃದ್ಧಿಯಿಂದ ಕೂಡಿದ್ದು, ಪ್ರಕೃತಿಯ ನಡುವೆ ಬರುವ ಸುಂದರವಾದ ಗುಂಪು ಗುಂಪಾಗಿ ಇರುವ ಮನೆಗಳು ಅನೇಕ ವಿದದ ಸಸ್ಯಗಳು ಅನೇಕ ಜಾತಿಯ ಮರಗಳು, ಪ್ರಕೃತಿಯ ಮಡಿಲಲ್ಲಿ ರಮ್ಯ ಮನೋಹರ ದೃಶ್ಯಗಳಿಂದ ಕೂಡಿವೆ. ಸುತ್ತಲೂ ಹಬ್ಬಿರುವ ಸಹ್ಯಾದ್ರಿ ಬೆಟ್ಟ, ಭೂತಾಯಿ ಹಸಿರು ಸೇರೆಯನ್ನಿಟು ಲವಲವಿಕೆಯಿಂದ ಕುಣಿಯುವ ದೃಶ್ಯ ಹಾಗೆಯೇ ಪ್ರಕೃತಿಯ ನಡುವೆ ಕರಾವಳಿ ತೀರದಲ್ಲಿ ದಕ್ಷಿಣದಿಂದ ಉತ್ತರಾಭಿಮುಖವಾಗಿ ಹಾದು ಹೋಗುವ ಕೊಂಕಣ ರೈಲು, ಪ್ರಕೃತಿಯ ಸೊಬಗನ್ನೆ ಹೆಚ್ಚಿಸಿವೆ. ಇಲ್ಲಿ ಕಲೆ-ಸಾಹಿತ್ಯ, ಸಂಸ್ಕೃತಿಯು ಹಸಿರಾಗಿ ಹರಡಿದೆ. ಕಲೆಯು ಜನರ ಉಸಿರಾಗಿದೆ ಹಲವಾರು ಪ್ರತಿಭಾವಂತ ಕವಿಗಳು, ಸಾಹಿತಿಗಳು, ಕಲಾವಿಧರುಗಳಿಗೆ ಜನ್ಮ ನೀಡಿದ ಕೀರ್ತಿ ಈ ಜಿಲ್ಲೆಗೆ ಸಂದಿದೆ. ಇಲ್ಲಿ ಕಲಾ ಚಟುವಟಿಕೆಗಳಿಗೆ ಕೊರತೆ ಇಲ್ಲ. ಇಲ್ಲಿಯ ಕಲಾವಿದರುಗಳ ಸಾಧನೆ. ಈ ನಾಡಿಗೆ ನೀಡಿದ ಕೊಡುಗೆ ಅಪಾರವಾಗಿದೆ. ಹಾಗೂ ಅವುಗಳು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ಪಡೆದಿವೆ. ಇಂಥ ಸಂಸ್ಕೃತಿ ಪರಿಸರವನ್ನು ಹೊಂದಿರುವ

ಸ್ಥಳ ಬಾರ್ಕೂರು ಇಂಥ ಊರಿನ ಸಂಸ್ಕೃತಿ, ಅದರ ಐತಿಹಾಸಿಕ ಹಿನ್ನೆಲೆಗಳೇ ಪರಮೇಶ್ವರಂಥವರನ್ನು ಕಲಾವಿದರನ್ನಾಗಿ ರೂಪಿಸಿದ್ದು.

ತುಳು, ಹೈವೆ ಕೊಂಕಣವೆಂದು ಇತಿಹಾಸದಲ್ಲಿ ಕರೆಯಲ್ಪಡುವ ಕನ್ನಡ ಕರಾವಳಿ ಪ್ರದೇಶವು ಉತ್ತರದಲ್ಲಿ ಮಜಾಳಿಯಿಂದ ದಕ್ಷಿಣದಲ್ಲಿ ಚಂದ್ರಗಿರಿಯ ನದಿಯುವರೆಗೂ ಹಬ್ಬಿದೆ. ಈ ಕರಾವಳಿ ಪ್ರದೇಶ, ಕನ್ನಡ ನಾಡಿನ ಇತಿಹಾಸದಲ್ಲಿ ಬಹಳ ಸ್ಥಾನವನ್ನು ಪಡೆದಿದ್ದರೂ ಅವುಗಳ ಅಧ್ಯಯನವನ್ನು ಕಡೆಗಣಿಸಿದ್ದು ಸೂಜಿಗದ ಸಂಗತಿ, ನೈಸರ್ಗಿಕ ಸಂಪತ್ತಿನ ಕಣಜವಾದ ಈ ಕರಾವಳಿಯು ಕನ್ನಡ ನಾಡಿನ ಇತಿಹಾಸದ ಹಲವಾರು ಘಟನೆಗಳಲ್ಲಿ ಸಹಭಾಗಿಯಾಗಿದೆ. ಕನ್ನಡ ನಾಡಿನ ಅರಸರ ಸಾಗರೋತ್ತರ ವ್ಯಾಪಾರ ಮತ್ತು ನೌಕಾಬಲಗಳ ರಂಗಭೂಮಿಯಾಗಿ ಮೆರೆಯಿತು. ಈ ಕನ್ನಡ ಕರಾವಳಿ ಇಲ್ಲಿರುವ ಇತಿಹಾಸ ಆಕರಗಳು ವಿಫುಲವಾಗಿದ್ದು ಇತಿಹಾಸ ಅಧ್ಯಯನವನ್ನು ಶ್ರೀಮಂತಗೊಳಿಸಿವೆ. ಈ ಐತಿಹಾಸಿಕ ಆಕರಗಳ ಮಹತ್ವ ಮತ್ತು ರಾಜಕೀಯ ಆರ್ಥಿಕ ಮತ್ತು ಶಿಲ್ಪಕಲೆಗಳಲ್ಲಿ ಕನ್ನಡ ಕರಾವಳಿ ಪ್ರದೇಶವು ಸಹಭಾಗಿಯಾಗಿತ್ತು. ಈಗ ಸಿಕ್ಕಿದ ಶಾಸನಗಳು ಅಧ್ಯಯನ ಮಾಡಲು ಯೋಗ್ಯವಾಗಿವೆ. ಈ ಪ್ರದೇಶದಲ್ಲಿ ಸುಮಾರು ೮೦೦ ಶಾಸನಗಳು ಬೆಳಕಿಗೆ ಬಂದಿವೆ. ಇನ್ನೂ ಹೆಚ್ಚಿನ ಶಾಸನಗಳು ಇನ್ನೂ ಬೆಳಕಿಗೆ ಬಾರದೆ ಇವೆ. ಈಗ ಸಿಕ್ಕಿದ ಶಾಸನಗಳು ಕನ್ನಡ ಕರಾವಳಿಯನ್ನು ಆಳಿದ ಭೋಜ, ಪಲ್ಲವ, ಆಳುಪ, ಚಂದಾವರ ಕದಂಬ, ಹೊಯ್ಸಳ, ವಿಜಯನಗರ ಮತ್ತು ಅವರ ಸಾವಂತರು, ಕೆಳದಿ ರಾಜವಂಶಗಳ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ತಿಳಿಸುವ ಆಕರಗಳಾಗಿವೆ. ಇವುಗಳ ಅಧ್ಯಯನ ಕನ್ನಡ ನಾಡಿನ ಇತಿಹಾಸದ ವ್ಯಾಪ್ತಿಯನ್ನು ವಿಶಾಲಗೊಳಿಸಿವೆ. ಇಷ್ಟಲ್ಲದೇ ಉಡುಪಿ ಶ್ರೀ ಕೃಷ್ಣಮಠದ ಒಂದು ಶಾಸನವು ನಮೂದಿಸಿದೆ ಶಾಸನಗಳೊಂದಿಗೆ ಕರಾವಳಿಯ ಜನರ ಪರಾಕ್ರಮವನ್ನು ಚಿತ್ರಿಸಿದ ಇಲ್ಲಿ ದೊರಕಿದ ವೀರಗಲ್ಲುಗಳು ಕನ್ನಡ ನಾಡಿನ ಇತಿಹಾಸದಲ್ಲಿ ಹೊಸ ದಾಖಲೆಗಳನ್ನು ಸ್ಥಾಪಿಸಿದೆ. ಈ ವೀರಗಲ್ಲುಗಳು ಆಳುಪ, ಕಲ್ಯಾಣ, ಚಾಲುಕ್ಯ, ಗೋವೆ ಮತ್ತು ಚಾಂದವರ ಕದಂಬ, ವಿಜಯನಗರ ಅರಸರ ಕಾಲದಲ್ಲಿ ಹೂರಾಡಿ ಮಡಿದ ವೀರಕಥೆಗಳ ಚಿತ್ರಣವಾಗಿದೆ.

ಶ್ರೀಕೃಷ್ಣ ದೇವಾಲಯದ ಪರಿಸರದಲ್ಲಿ ಮಧ್ವ ಸರೋವರ, ಭೋಜನಶಾಲೆ, ಸಭಾಮಂಟಪ, ನೂತನ ನಿರ್ಮಿತ ಗೀತಾಮಂದಿರವಿದೆ. ತೇರು ಬೀದಿಯ ಸುತ್ತ ನೆಲೆಗೊಂಡಿರುವ ೧೩ ಮಠಗಳು ಮತ್ತು ಇವುಗಳ ಮಧ್ಯಇರುವ ಪುರಾತನ ಚಂದ್ರೇಶ್ವರ, ಅನಂತೇಶ್ವರ, ದೇವಾಲಯಗಳು ಹಾಗೂ ಕನಕನ ಕಿಂಡಿಯ ಎದಿರು ನಿಂತಿರುವ ಕನಕನ ಮೂರ್ತಿ ಪ್ರೇಕ್ಷಣೀಯ. ಹೀಗೆ ಕಲಾಸೃಷ್ಟಿಯೊಂದರ ಹಿಂದೆ ಪರಿಸರದ ಪ್ರಭಾವ ಇದ್ದೇ ಇರುತ್ತದೆ. ಶಿಲ್ಪಿಯ ಅಂತರಿಕ ತುಡಿತ ಮಿಡಿತಗಳು ಪ್ರಕೃತಿಯನ್ನಾಧರಿಸಿ ಸೃಜನಶೀಲ ಕ್ರಿಯೆಗೆ ಜೀವ

ತುಂಬುತ್ತವೆ. ಹೀಗೆ ಜೀವ ತುಂಬಿದ ವಸ್ತು ಕಲೆ ಎಂದೆನಿಸುತ್ತದೆ. ಕಲೆಯ ಕುರಿತು ಕಡಲತೀರ ಭಾರ್ಗವ ಡಾ. ಶಿವರಾಮ ಕಾರಂತರು "ಕಲಾ ಪ್ರಪಂಚ"ದಲ್ಲಿ ಹೀಗೆ ಬರೆಯುತ್ತಾರೆ. "ನಮಗೆ ತೃಪ್ತಿಯನ್ನು ಸಂತಸವನ್ನು ಕೊಡುವ ಅನೇಕ ಅನುಭವಗಳು ಜೀವನದ ಉದ್ದಕ್ಕೂ ಆಗುತ್ತಿರುತ್ತದೆ. ಹಸಿದವನಿಗೆ ಸರಿಯಾದ ಆಹಾರ ದೊರಕಿದಾಗ ತೃಪ್ತಿ ಉಂಟಾಗಬಹುದು. ಪ್ರಕೃತಿಯ ಯಾವುದೋ ಒಂದು ಅದ್ಭುತ ಘಟನೆ ಇಲ್ಲವೇ ಸುಂದರ ದೃಶ್ಯ ಮನಸ್ಸಿಗೆ ಆನಂದವನ್ನು ತೃಪ್ತಿಯನ್ನು ತಂದುಕೊಡಬಹುದು.. ಮಾನವ ಆದಿ ಮಾನವನಂತಹ ಮುಗ್ಧ ಜೀವಿಯೇ ಆಗಿರಲು. ಆಧುನಿಕ ಬುದ್ಧಿ ಶೀಲ ಜ್ಞಾನ ಸಂಪನ್ನ ವ್ಯಕ್ತಿಯೇ ಆಗಿರಲಿ, ತನ್ನಲ್ಲಿ ಹುಟ್ಟಿಕೊಂಡಿರುವ ಭಾವನೆ, ಅನಿಸಿಕೆಗಳ ಒತ್ತಡಗಳ ದೆಸೆಯಿಂದ ಉದ್ದೇಶಪಟ್ಟು ಮೃತ್ತಿಕೆ, ಕಲ್ಲು, ಕಾಗದ, ಬಣ್ಣ, ಕುಂಚ, ಉಳಿ ಇವುಗಳಂಥ ವಸ್ತುಗಳನ್ನು ಬಳಸಿ ತನ್ನ ಮನಸ್ಸಿನಲ್ಲಿ ತುಂಬಿಕೊಂಡ ಭಾವನೆ, ಕಲ್ಪನೆಗಳಿಗೆ ಅನ್ಯರು ಗುರುತಿಸಬಲ್ಲ ದೃಗ್ಗೋಚರ ರೂಪವನ್ನು ಅಥವಾ ಬಿಂಬವನ್ನು ಸೃಷ್ಟಿ ಮಾಡಿ ಇರಿಸಿದಾಗ ಮಾತ್ರವೇ ಅದಕ್ಕೆ "ಕಲಾಕೃತಿ" ಎಂಬ ಹೆಸರು ಬರುವ ಸಾಧ್ಯತೆಯಿದೆ. ಅಂಥವರು ಕಲಾಕೃತಿ ಎನಿಸಲೇಬೇಕು ಎಂಬ ನಿಯಮವಿಲ್ಲ. ಈ ಸೃಷ್ಟಿ ಕಾರ್ಯದಲ್ಲಿ ಒಬ್ಬ ವ್ಯಕ್ತಿ ತನ್ನಲ್ಲಿ ತುಂಬಿಕೊಂಡ ಭಾವನೆ, ಕಲ್ಪನೆಗಳನ್ನು ಮೂರ್ತರೂಪದಲ್ಲಿ ತೋರಿಸಲೇಬೇಕು. ಎನ್ನುವ ಅದಮ್ಯ ಒತ್ತಡ ಅವನಲ್ಲಿ ಮೊದಲಿಗೆ ಕಾಣಿಸಬೇಕು, ಅದಕ್ಕೆ ಆತ ಮೂರ್ತ ರೂಪವನ್ನು ಕೊಡಬೇಕು. ಕೊಡುವ ಸಲುವಾಗಿ ಯೋಗ್ಯ ಸಾಧನ, ಸಲಕರಣೆಗಳನ್ನು ಆತ ತಂದುಕೊಳ್ಳಬೇಕು. ಅಂಥ ಸಾಧನ, ಸಲಕರಣೆ ಮತ್ತು ಯಾವುದೇ ಮಾಧ್ಯಮದ ಸಹಾಯದಿಂದ ನೋವನ್ನೋ, ಸಂತೋಷವನ್ನೋ, ಆನಂದವನ್ನೋ, ಇನ್ನಾವುದೋ ನಿಶ್ಚಿತ ಭಾವನೆಯನ್ನೋ ತಿಳಿಸಿದ್ದಾಗ ಅವುಗಳಿಂದ ಅವರು ಪುಳಕಿತರಾಗಿ ತೃಪ್ತಿಯನ್ನೋ, ಸಂತೊಷವನ್ನು ಪಡುವ ಪ್ರಸಂಗ ಉಂಟಾಗಬೇಕು. ಅಂಥ ಗುಣವುಳ್ಳ ಕೃತಿ ಮಾತ್ರವೇ "ಕಲಾಕೃತಿ" ಎನಿಸುತ್ತದೆ. ಅದನ್ನು ನಿರ್ಮಿಸಿದಾತ "ಕಲಾವಿದ" ಎಂಬ ಬಿರುದಿಗೆ ಪಾತ್ರನಾಗುತ್ತಾನೆ[೧] ಈ ಹಿನ್ನೆಲೆಯಲ್ಲಿ ಭವಿಷ್ಯದಲ್ಲಿ ರೂಪಗೊಳ್ಳುವ ಒಬ್ಬ ಕಲಾವಿದನ ಸುತ್ತಲಿನ ಪರಿಸರ ಅವನ ಸೃಜನಶೀಲ ಅಭಿವ್ಯಕ್ತಿಗೆ ಪೂರಕವಾಗಿ ನಿಂತಾಗ ಮಾತ್ರ ಕಲಾವಿದನ ಕೃತಿಗಳಿಗೆ ಜೀವ ತುಂಬಬಹುದು. ಅಂದಿನ ಬಾಲಕ ಪರಮೇಶ್ವರ ಇಂದಿನ ಕರ್ನಾಟಕ ಸಂದರ್ಭದ "ರಂಗೋಲಿ ಕಲಾವಿದ" ಎಂಬ ಬಿರುದಿಗೆ ಭಾಜನರಾಗಲು ಅವರಿಗೆ ಒದಗಿದ ಮೂಲಸೆಲೆ ಬಾರ್ಕೂರಿನ ಈ ಸಾಂಸ್ಕೃತಿಕ ಪರಿಸರವೆಂಬುದು ಗಮಿಸುವ ಸಂಗತಿಯಾಗಿದೆ.

---

೧. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ, ಪುಟ ೨-೩-೧೯೭೮

ಕರ್ನಾಟಕದಲ್ಲಿ ಚಿತ್ರಕಲೆಗೆ ಅಪಾರ ಕೊಡುಗೆಯನ್ನಿತ್ತ ಈ ನಾಡಿನ ಕಲಾವಿದರುಗಳ ಸಾಲಿನಲ್ಲಿ ಜಿ. ಎಸ್. ಶೈಣೈ, ಕೆ. ಕೆ. ಹೆಬ್ಬಾರ, ಯು. ಬಾಸ್ಕರರಾವ್, ಪೀಟರ್‌ಲೂಯಿಸ್, ಯು. ರಮೇಶರಾವ್, ಮುಂತಾದ ಹಿರಿಯ ಕಲಾವಿದರೆಲ್ಲರೂ ಈ ನಾಡಿನಲ್ಲಿ ಜನಿಸಿದರು ಇಂತಹ ಪ್ರಮುಖ ಕಲಾವಿದರುಗಳ ಸಾಲಿನಲ್ಲಿ ಬಿ.ಪಿ.ಬಾಯಿರಿಯವರು ಪ್ರಮುಖರು ಸಡಿಲಾದ ಅರ್ಧ ತೋಳಿನ ಅಂಗಿ, ಬಿಳಿಪಂಚೆ, ಕೈಯಲ್ಲೊಂದು ಕೊಡೆ, ಕನ್ನಡಕದ ಒಂದಿನ ತೀಕ್ಷ್ಣ ಕಣ್ಣುಗಳು, ಅರೆ ನೆರೆತ ಕೂದಲು, ನಸುಬಾಗಿದ ನೀಲಕಾಯದ ವ್ಯಕ್ತಿಯು ಉಡುಪಿಯ ಬೀದಿಯಲ್ಲಿ ಪರಿಚಿತ ಬಿ. ಪಿ. ಬಾಯಿರಿಯವರು.

ಬಿ. ಪಿ. ಬಾಯಿರಿಯವರ ಕುಟುಂಬ

ಬಾಯಿರಿಯವರು ಮೂಲತಃ ಬ್ರಾಹ್ಮಣ ಕುಟುಂಬದವರು, ತಂದೆ ನಾರಾಯಣ ಬಾಯಿರಿ ಮೂಲತಃ ಪುರೋಹಿತರು ಜೊತೆಗೆ ಸುರಾಲು ಅರಮನೆಯ ಅರಸರ ಮನೆತನದ ಗುಮಾಸ್ತರಾಗಿದ್ದರು. ತಾಯಿ ಶ್ರೀಮತಿ ರಾಧಮ್ಮ. ಹೆಂಡತಿ ಶ್ರೀಂಗಾರಿಯಮ್ಮ, ಬಾಯಿರಿಯವರಿಗೆ ನಾಲ್ಕು ಜನ ಮಕ್ಕಳು ಎರಡು ಗಂಡು, ಎರಡು ಹೆಣ್ಣು ಮಕ್ಕಳು. ಮೊದಲನೆಯ ಮಗ ರತ್ನಾಕರ ಬಾಯಿರಿ ಬಿ.ಎ.ಆರ್.ಸಿ.ಯಲ್ಲಿ ಕೆಲಸ ನಿರ್ವಹಿಸಿ ನಿವೃತ್ತಿ ಹೊಂದಿ ಅಲ್ಲಿಯೆ ನೆಲೆಸಿದ್ದಾರೆ. ಎರಡನೆ ಮಗ ಬಾಲಕೃಷ್ಣ ಬಾಯಿರಿ ರಾಸಾಯನ ಶಾಸ್ತ್ರದ ವಿಭಾಗದಲ್ಲಿ ಎಚ್.ಓ.ಡಿ ಆಗಿ ಉಡಪಿಯ ಎಮ್.ಜಿ.ಎಮ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ ಸಧ್ಯ ಬಿ.ಪಿ. ಬಾಯಿರಿಯವರ ಚಿತ್ರಕುಟೀರದ ಮನೆಯಲ್ಲಿ ನೆಲೆಸಿದ್ದಾರೆ. ಮೂರನೆ ಮಗಳು ಗೀತಾ ಶಿಕ್ಷಕಿಯರಾಗಿ ಸೇವೆ ಸಲ್ಲಿಸಿ ಮಂಗಳೂರಿನಲ್ಲಿ ನೆಲೆಸಿದ್ದಾರೆ. ನಾಲ್ಕನೆಯ ಮಗಳು ರತ್ನಾ ಮಣಿಪಾಲದ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಸೇವೆಯನ್ನು ಸಲ್ಲಿಸಿ ವ್ಹಿ.ಆರ್.ಎಸ್. ಪಡೆದು ಉಡುಪಿಯಲ್ಲಿಯೇ ನೆಲೆಸಿದ್ದಾರೆ.

ಬಾಲ್ಯದ ದಿನಗಳು.

"ಸಂಸ್ಕೃತಿ" ಎಂಬ ಶಬ್ದ ಇಚೆಗೆ ಬಹುಮುಖ್ಯವಾದ ಅರ್ಥವನ್ನು ಪಡೆದು ಬೆಳೆಯುತ್ತಾ ಬಂದಿದೆ. ಮಾನವ ಸಮುದಾಯದ ಸಂಪ್ರದಾಯಗಳಿಂದ ಹಿಡಿದು, ವೈಯಕ್ತಿಕವಾದ ಆಚರಣೆಗಳವರೆಗೂ ಅದರ ವ್ಯಾಪ್ತಿ ಹಬ್ಬಿದೆ. ಮಾನವ ಜನಾಂಗಗಳ ಇತಿಹಾಸವನ್ನು ಚಿತ್ರಿಸುವಾಗ ಬಳಸುವ ಇನ್ನೊಂದು ಪದ ನಾಗರಿಕತೆ ಎಂಬುದು. ಆಂಗ್ಲ ಭಾಷೆಯಲ್ಲಿ Culture ಅದನ್ನು Civilization ಎಂದು ಕರೆಯಲಾಗಿದೆ. ಇವೆರಡು ಪದಗಳನ್ನು ಅನೇಕ ವೇಳೆ ವಿದ್ವಾಂಸರು, ಸಮಾನಾರ್ಥಕಗಳೆಂಬಂತೆ ಪ್ರಯೋಗಿಸಿರುವದೂ ಉಂಟು. ಮಾನವ ಶಾಸ್ತ್ರಜ್ಞರು



ಬಿ. ಪಿ. ಬಾಯಿರಿಯವರ ಕುಟುಂಬ



ಬಿ. ಪಿ. ಬಾಯಿರಿಯವರ ಚಿತ್ರ ಕುಟಿರದ ಮನೆ

(Anthropologists) ಸಂಸ್ಕೃತಿ ಎಂಬುದನ್ನು ನಾಗರಿಕತೆ ಎಂಬ ಅರ್ಥದಲ್ಲಿಯೇ ಬಳಸುತ್ತಾರೆ[೨] ಈ ಕುರಿತು ಹಲವಾರು ಜನ ವಿದ್ವಾಂಸರಿಂದ ಚರ್ಚೆ ಈ ಶತಮಾನದೂದ್ದಕ್ಕೂ ನಡೆಯುತ್ತಿರುವುದನ್ನು ಕಾಣುತ್ತೇವೆ. ಕೆಲವರು ಅದನ್ನು ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳೊಂದಿಗೆ ಗುರುತಿಸಿದರೆ ಮತ್ತೆ ಕೆಲವು ಲಲಿತಕಲೆಗಳೊಂದಿಗೆ. ನಡವಳಿಕೆ ಹಾಗೂ ಚಿಂತನಾ ಕ್ರಮಗಳೊಂದಿಗೆ ಗುರುತಿಸುತ್ತಾರೆ. ಸಂಸ್ಕೃತಿ ಈ ಎಲ್ಲವೂ ಹೌದಾದರೂ, ಅದಷ್ಟೆ ಅಲ್ಲ, ಅದಕ್ಕಿಂತಲೂ ಹೆಚ್ಚಿನದು. ಬ್ರಿಟಿಷ ಮಾನವ ಶಾಸ್ತ್ರಜ್ಞ ಎಡ್ವರ್ಡ ಬರ್ನೆಟ್ ಟೈಲರ್ ಸಂಸ್ಕೃತಿಯನ್ನು ಸಂಕ್ಷಿಪ್ತವಾಗಿ ಹೀಗೆ ವ್ಯಾಖ್ಯಾನಿಸುತ್ತಾರೆ. ಸಮಾಜದ ಸದಸ್ಯನಾಗಿ ಮಾನವ ಗಳಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೈತಿಕತೆಗಳು, ಕಟ್ಟಳೆಗಳು. ಸಂಪ್ರದಾಯ ಮತ್ತಿತರ ಸಾಮರ್ಥ್ಯಗಳು ಮತ್ತು ಸ್ವಭಾವಗಳನ್ನು ಸಂಸ್ಕೃತಿ[೩] ಎಂದು ಕರೆದಿರುವುದು ಇಲ್ಲಿ ಹೆಚ್ಚು ಮಹತ್ವದ್ದೆಂದು ಗುರುತಿಸಬಹುದಾಗಿದೆ. ಸಂಸ್ಕೃತಿ ಎಂಬ ಪದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇದ್ದೇ ಇರುತ್ತದೆ. ಆದರೆ ವಿಭಿನ್ನ ತಳಹದಿಯಲ್ಲಿ ಅದು ರೂಪಗೊಂಡಿರುವುದು. ಅವನ ವರ್ತನೆ. ಹಾವ-ಭಾವ, ಸೃಜನಶೀಲ ಅಭಿವ್ಯಕ್ತಿಯಲ್ಲಿ ಅವು ಸಾಂಸ್ಕೃತಿಕ ಲೋಕದಲ್ಲಿ ಬೆಳಕಿಗೆ ಬರುವುದು ಪ್ರಕೃತಿ ಸಹಜ ಕ್ರಿಯೆಯಾಗುತ್ತದೆ. ಉದಾಹರಣೆಗೆ ಹೆಸರಾಂತ ಕಲಾವಿದರಾಗಿದ್ದ ಶ್ರೀ ಕೆ. ಕೆ. ಹೆಬ್ಬಾರರ ರೇಖಾ ಚಿತ್ರಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಸಂಸ್ಕೃತಿಗಳು ಬದುಕಿನ ಸಂಸ್ಕೃತಿಗಳು ಇದಕ್ಕಿಂತ ಹೆಚ್ಚಾಗಿ ಜನಪದದ ಜಾನಪದ ಕಲೆ ಯಕ್ಷಗಾನದ ಪ್ರಭಾವವು ಹೇರಳವಾಗಿ ಕಂಡು ಬರುತ್ತದೆ. ಅವರ ಪ್ರತಿಯೊಂದು ಕೃತಿಯೂ ಅವರ ಹುಟ್ಟೂರಿನ ಸುತ್ತಲಿನ ಪರಿಸರ ಸಂಸ್ಕೃತಿಗಳನ್ನೇ ಬಿಂಬಿಸುತ್ತಿದ್ದವು. ಕವಿಯಂತೆ, ಕಥೆಗಾರರಂತೆ ಕಲಾವಿದರೂ ಕೂಡ ಸುತ್ತಲಿನ ಅಥವಾ ತಾವು ಬೆಳೆದು ಬಂದ ಪರಿಸರದಲ್ಲಿನ ಅನುಭವಗಳನ್ನೇ ಕೃತಿಯ ಮೂಲಕ ಅಭಿವ್ಯಕ್ತಿಸುವುದು ಕಂಡು ಬರುತ್ತದೆ.

ಈ ಹಿನ್ನೆಲೆಯಲ್ಲಿ ಬಾಯಿರಿಯವರ ಬದುಕಿನ ಬಾಲ್ಯದ ಸಾಂಸ್ಕೃತಿಕ ಪರಿಸರವನ್ನು ಗಮನಿಸಿಸಬೇಕಾಗುತ್ತದೆ. ಪರಮೇಶ್ವರ ಕಡಲ ತಡಿಯಲ್ಲಿ ಹುಟ್ಟಿ ಬೆಳೆದವರು ಅದು ೧೯೧೨ ರ ದಶಕ ಶ್ರೀ ಕೃಷ್ಣನ ಪುಣ್ಯ ಕ್ಷೇತ್ರ ಮತ್ತು ಪ್ರವಾಸಿಗರ ಆಕರ್ಷಕ ಧಾರ್ಮಿಕ ಕ್ಷೇತ್ರವಾದ ಉಡುಪಿಯಿಂದ ಈಶಾನ್ಯದಲ್ಲಿ ಸುಮಾರು ೧೬ ಕಿಲೋ ಮೀಟರ್ ದೂರದ ಗ್ರಾಮಿಣ ಪ್ರದೇಶ ಬಾರ್ಕೂರು. ಈ ಬಾರ್ಕೂರಿನಲ್ಲಿ ಕಲಾವಿದ ಬಿ.ಪಿ. ಬಾಯರಿಯವರು ೧೬-೧೧-೧೯೧೨ ರಲ್ಲಿ ಜನಿಸಿದರು. ಬಿ. ಪಿ. ಬಾಯರಿಯವರ ತಂದೆ ನಾರಾಯಣ ಬಾಯರಿ, ತಾಯಿ ರಾಧಮ್ಮ ಬಾರ್ಕೂರಿನ ಐದು ಕೇರಿಗಳಲ್ಲಿ ಒಂದಾದ ಮೂಡು ಕೇರಿಯಲ್ಲಿ ಇವರ ಮನೆ. ಇವರು

೨. ಡಾ. ಎಚ್. ತಿಪ್ಪೆರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪುಟ.೩. ೧೯೮೨
೩. ಚಿ.ಸು.ಕೃಷ್ಣಶೆಟ್ಟಿ : ಚಿತ್ರ ಚಿತ್ತ, ಪುಟ-೩೭. ೨೦೦೦

ಮೂಲತಃ ಬ್ರಾಹ್ಮಣ ಕುಟುಂಬದವರು. ಬಾಯಿರಿ ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿ ಬೆಳೆದು ಬಂದವರು. ಬಾಲ್ಯದಲ್ಲಿ ಮನೆಯ ಪರಿಸರದಲ್ಲಿದ್ದ ಹೆಮ್ಮರಗಳು, ತುಂಬಿದ ವಿಶಾಲಕೆರೆ, ತೆಂಗು, ಬಾಳೆಯ ತೋಟಗಳು, ನೆರೆ ಹೊರೆಯ ವೈದಿಕ ಮನೆಗಳಲ್ಲಿ ಜರುಗುತ್ತಿದ್ದ ವೃತ್ತಿ, ಹೋಮ, ಭಜನೆ, ಪಟಡೆಯುವುದು ಉದ್ಯೋಗಕ್ಕೆ ಎಂತಲೇ ಭಾವಿಸಲಾಗಿದೆ. ಆದರೆ ನಮ್ಮ ಪುರಾತನ ಸಂದರ್ಭದಲ್ಲಿ ಶಿಕ್ಷಣವು ಬದುಕಿಗಾಗಿ ಸಂಸ್ಕೃತಿ ಸಂವರ್ಧನೆಗಾಗಿ ಕಲಿಸಿಕೊಡುವುದೇ ಆಗಿತ್ತೆಂದು ನಮ್ಮ ದಾರ್ಶನಿಕರು ಹೇಳಿದ್ದನ್ನು ಅನೇಕ ಗ್ರಂಥಗಳಲ್ಲಿ ನೋಡಬಹುದು. ಶಿಕ್ಷಣಕ್ಕೆ ಪರ್ಯಾಯವಾಗಿ ಉದ್ಯೋಗದ ಅರ್ಥವನ್ನು ನಿಡಿದ್ದೇ ಭಾರತದ ಇಂದಿನ ಸಂದರ್ಭದ ಈ ಸ್ಥಿತಿಗೆ ಕಾರಣವಾಗಿರಬಹುದು.

ಬಾಲ್ಯದಲ್ಲಿನ ಪ್ರಾಥಮಿಕ ಶಿಕ್ಷಣ ಆ ಮಗುವಿನ ಭವಿಷ್ಯವನ್ನೇ ರೂಪಿಸುತ್ತದೆ. ಕರಣ ಬಾಲ್ಯದಲ್ಲಿಯೇ ಅವನ ಅಭಿರುಚಿಗಳು ಅವನ ಬರವಣಿಗೆ, ವರ್ತನೆ ಇತ್ಯಾದಿಗಳ ಮೂಲಕ ಬೆಳಕಿಗೆ ಬರಲಾರಂಭಿಸುತ್ತವೆ. ಇವುಗಳನ್ನು ಗುರುತಿಸಿ ಅವುಗಳನ್ನೇ ಪ್ರೋತ್ಸಾಹಿಸುವ ಪ್ರವೃತ್ತಿ ಇಂದಿನ ಸಂದರ್ಭದ ಶಿಕ್ಷಣದಲ್ಲಿ ಅಪರೂಪವಾಗುತ್ತದೆ. ತಂದೆ ತಾಯಿಗಳ ಆಸೆಯಂತೆಯೇ ತನ್ನ ಶಿಕ್ಷಣವನ್ನು ಪೂರೈಸುವ ಮಗು "ಕಾರ್ಖಾನೆ"ಯ ಒಂದು ಉತ್ಪನ್ನದಂತಾಗಿದೆ. ಮಗುವಿನ ಅಭಿರುಚಿಗೆ ತಕ್ಕಂತೆ ಶಿಕ್ಷಣವನ್ನು ಪಡೆಯುವುದು ಇಂದಿನ ಸಂದರ್ಬದಲ್ಲಿ ಆಗುತ್ತಿಲ್ಲವೆಂಬುದನ್ನು ನಾವು ಮಗುವಿನ ಸ್ವಾತಂತ್ರ್ಯ ಹರಣವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಅಭಿನವಗುಪ್ತನಿಗೆ ತಣಿಸಲಾಗದ ವಿದ್ಯಾಸಕ್ತಿಯಿದ್ದಿತು. ಅವನು ವಿವಿಧ ಶಾಸ್ತ್ರಗಳನ್ನು ವಿಭಿನ್ನ ಗುರುಗಳಲ್ಲಿ ಅಧ್ಯಯನ ಮಾಡಿದ ಮತ್ತು ಅದಕ್ಕಾಗಿ ಕಾಶ್ಮೀರಕ್ಕೂ ಹೋದ ಸ್ವತಃ ಪರಿಪೂರ್ಣತೆಯನ್ನು ಸಾಧಿಸಿ, ತನ್ನ ಶಿಷ್ಯನನ್ನು ಸುಲಭವಾಗಿ ಅಲ್ಲಿಗೆ ಕೊಂಡ್ಯೊಯಲು ಸಮರ್ಥನಾದ ಗುರುವೊಬ್ಬನನ್ನು ಒಳ್ಳೆಯ ಅದೃಷ್ಟದಿಂದ ಪಡೆದರೂ ಇತರ ಶಾಸ್ತ್ರಗಳ ಹಾಗೂ ಇತರ ಮಾರ್ಗಗಳ ಜ್ಞಾನವನ್ನು ಸಂಪಾದಿಸಲು ಇತರ ಗುರುಗಳ ಬಳಿಗೆ ಹೋಗಬಾರದೆನ್ನುವುದು ಅದರ ಅರ್ಥವಲ್ಲ ಎಂದು ಅವನು ತಂತ್ರಾಲೋಕದಲ್ಲಿ ಹೇಳುತ್ತಾನೆ. ಇದನ್ನು ಅವನು ತನ್ನ ಉಪದೇಶ ಮತ್ತು ಆಚರಣೆ ಮೂಲಕ ಬೋಧಿಸಿದ. ಏಕೆಂದರೆ ಶೈವಶಾಸ್ತ್ರಗಳ ತತ್ವಗಳು ಮತ್ತು ಉಪದೇಶಗಳು ಅವನಿಗೆ ಪೂರ್ಣ ತೃಪ್ತಿಯನ್ನು ನೀಡಿದ್ದರೂ ಮರೆಯಿಲ್ಲದ ಕುತೂಹಲ ಮತ್ತು ತಣಿಯದ ಜ್ಞಾನದಾಹಗಳಿಂದಾಗಿ, ಅವನು ಇತರ ಪಂಥಗಳ, ಬೌದ್ಧ, ಜೈನ ಗುರುಗಳ ಅಡಿ ಅಧ್ಯಯನ ಮಾಡಿದ"[೪] ಈ ಉಲ್ಲೇಖದನ್ವಯ ವಿದ್ಯೆಯನ್ನು ಕಲಿಯಬೇಕೆಂಬ ಹಂಬಲವುಳ್ಳವನಿಗೆ ಯಾವ ಗುರುವಾದರೇನು ? ಎಲ್ಲವನ್ನೂ ಮೀರಿ ವಿದ್ಯೆಯನ್ನು ಸಂಪಾದಿಸುವುದು. ವಿದ್ಯಾರ್ಥಿಯು ಗುರಿಯಾಗಬೇಕು ಎಂಬ ತತ್ವವನ್ನು ಬಿ.ಪಿ.

೪. ಜಿ. ಟಿ. ದೇಶಪಾಂಡೆ ಅನು : ಎನ್ ಬಾಲಸುಬ್ರಹ್ಮಣ್ಯ, ಅಭಿನವಗುಪ್ತ, ಪುಟ ೫. ೨೦೦೦

ಬಾಯಿರಿಯುವರಲ್ಲಿ ಕಾಣಬಹುದಾಗಿದೆ.

ಬಾಲ್ಯದಿಂದಲೂ ಬಾಯಿರಿಯುವರ ದೃಕ್ ಗ್ರಹಣ ಶಕ್ತಿ ಸ್ಮರಣಶಕ್ತಿ ಪ್ರಬಲವಾದುದು ತಂದೆ ನಾರಾಯಣ ಬಾಯಿರಿ ಅವರಿಗೆ ತಮ್ಮ ಮಕ್ಕಳಿಗೆ ಹೆಚ್ಚು ಶಿಕ್ಷಣ ನೀಡಬೇಕೆಂಬ ಆಸಕ್ತಿ. ಸುರಾಲು ಅರಮನೆಯು ಅರಸರ ಮನೆತನಕ್ಕೆ ಗುಮಾಸ್ತರಾಗಿದ್ದ ಇವರ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲ ಊರಿನ ಜನರ ಪ್ರೀತಿ ಪಾತ್ರರಾಗಿದ್ದ ಇವರು ಹನೇಹಳ್ಳಿಯುಲಲಿ ಎಲೆಮಂಟರಿ ಶಾಲೆ ಸ್ಥಾಪಿಸಿ ವಿದ್ಯಾದಾನದಲ್ಲಿ ತೊಡಗಿದರು. ಅದು ಅಂದು ಬಾಕೂರಿನ ಪರಿಸರದಲ್ಲೆ ಏಕೈಕ ಶಾಲೆಯಾಗಿತ್ತು. (ಇಂದು ಬಾರ್ಕೂರಿನಲ್ಲಿರುವ ಪ್ರಾರ್ಥಮಿಕ ಶಾಲೆ) ಇದೇ ಶಾಲೆಯುಲಲಿಯೇ ಬಾಲಕ ಮರಮೇಶ್ವರನಿಗೆ ಪ್ರಾಥಮಿಕ ಶಿಕ್ಷಣ ಮೊದಮೊದಲು ಅಕ್ಷರಗಳನ್ನು ಸುಂದರವಾಗಿ ಬರೆಯುತ್ತಿದ್ದ ಪರಮೇಶ್ವರ ಪಾಠಗಳಲ್ಲಿ ಆಸಕ್ತಿಯಿಂದ ಬಾಗವಹಿಸುತ್ತಿದ್ದರು. ಕಪ್ಪು ಹಲಗೆಯು ಮೇಲೆ ಶಿಕ್ಷಕ ತಂದೆ ಹೇಳಿದ ಚಿತ್ರಗಳನ್ನು ಪಾಠದ ಸಾರವನ್ನು ಸುಂದರವಾಗಿ ಬರೆಯುತ್ತದ್ದರು. ಅಂದಿನ ಸಂದರ್ಬದಲ್ಲಿ ವಾರಕ್ಕೆ ಅತವಾ ಹದಿನೈದು ದಿನಗಳಿಗೊಮ್ಮೆ ಸರಸ್ವತಿ ಪೂಜೆಯುನ್ನು ಶಾಲೆಯಲ್ಲಿ ಹಮ್ಮಿಕೊಳ್ಳುತ್ತಿದ್ದರು. ಪ್ರತಿ ತರಗತಿಗಳನ್ನು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವನೆಯಿಂದ ಅಲಂಕರಿಸುತ್ತಿದ್ದರು. ಪ್ರತಿ ತರಗತಿಗಳ ಕಪ್ಪು ಹಲಗೆಯು ಮೇಲೆ ಪರಮೇಶ್ವರನನ್ನೇ ಕರೆದು ದೇವ ದೇವತೆಗಳ ಚಿತ್ರಗಳನ್ನು ಅವನಿಂದ ಬರೆಸುತ್ತಿದ್ದರಲ್ಲದೇ ರಾಷ್ಟ್ರ ನಾಯುಕರ ಭಾವಚಿತ್ರಗಳನ್ನು ಬರೆಸುತ್ತಿದ್ದರು. ಬಾಲ್ಯದಲ್ಲಿಯೇ ಚಿತ್ರದ ಗೀಳು ಅಂಟಿಸಿಕೊಂಡ ಪರಮೇಶ್ವರ ಶಾಲೆಯುಲ್ಲಿ ಧಾರ್ಮಿಕ ವಿಧಿ-ವಿಧಾನಗಳಿಂದ ಸಾಕಷ್ಟು ಪ್ರಭಾವಿತನಾಗಿದ್ದನ್ನು ಇಲ್ಲಿ ಗಮನಿಸಬಹುದು. ಬಾಲಕ ಪರಮೇಶ್ವರನಿಗೆ ಪ್ರಾಥಮಿಕ ಶಿಕ್ಷಣ ಮುಗಿಸಿದೊಡನೆಯೆ ವಿದ್ಯಾಭ್ಯಾಸ ಕಾಲದಲ್ಲಿ ಸ್ವತಂತ್ರ ಸಂಗ್ರಾಮದ ಚಳುವಳಿಯಲ್ಲಿ ಭಾಗವಹಿಸಲು ಹೋಗಿದ್ದುಂಟು ನಂತರ ತಾವು ವ್ಯಾಸಂಗ ಮಾಡಿದ ಪ್ರಾಥಮಿಕ ಶಾಲೆಯಲ್ಲಿಯೇ ಶಿಕ್ಷಕ ವೃತ್ತಿ ಆರಂಭ (೧೯೨೫) ಎಂಟನೇ ತರಗತಿಯವರಗೆ ವಿದ್ಯಾಬ್ಯಾಸ ಮಾಡಿ ವೃತ್ತಿ ಆರಂಭಿಸಿದರೂ ಇವರ ಚಿತ್ರಕಲಿಕೆ ನಿಲ್ಲಲಿಲ್ಲ ವೃತ್ತಿಯ ನಡುವೆ ಕಲಿಕೆಯು ಮುಂದುವರೆಯಿತು. ಕಲಿಸುವುದರ ಒಟ್ಟಿಗೆ ತನ್ನ ಓದನ್ನು ಮುಂದುವರಿಸಿಕೊಂಡು ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿಕೊಂಡರು. ಬಾಯಿರಿಯುವರ ಅಭಿರುಚಿ ಪ್ರತಿಭೆಯುನ್ನು ಗಮನಿಸಿ, ಚಿತ್ರಕಲೆಯಲ್ಲಿ ಅವರಿಗೆ ಕ್ರಮಬದ್ಧವಾದ ಆರಂಭಿಕ ಶಿಕ್ಷಣವನ್ನು ನೀಡಿದವರು ಉಡುಪಿಯ ಶ್ರೀನಿವಾಸರಾವ್ ಮತ್ತು ಪಾವಂಜೆ ಗೋಪಾಲಕೃಷ್ಣರಾಯರು ಇವರ ನೆರವು ಮತ್ತು ಪ್ರೊತ್ಸಾಹದಿಂದ ಬಾಯುರಿ ಅವರು ಆಗಿನ ಮದ್ರಾಸು ಸರಕಾರ ನಡೆಸುತ್ತಿದ್ದ ಡಿಪ್ಲೋಮಾ ಕಲಾ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ತುಸುಕಾಲ ಮುಂಬಯಿಯು ದಂಡಾವತಿಮಠರವರ ನೂತನ ಕಲಾ ಮಂದಿರದಲ್ಲಿ ಉನ್ನತ ಕಲಾ ವ್ಯಾಸಮಗ ನಡೆಸಿದ್ದರು.

ಆದರೆ ಬಡತನದಿಂದಾಗಿ ತಮ್ಮ ಔಪಚಾರಿಕ ಶಿಕ್ಷಣವನ್ನು ಹೈಸ್ಕೂಲ್ ಹಂತದಲ್ಲಿಯೇ ಮುಗಿಸಿದ ಇವರು ಜೊತೆ ಜೊತೆಯಲ್ಲಿ ಸಂಸ್ಕೃತ, ಹಿಂದಿ, ಕನ್ನಡ ಸಾಹಿತ್ಯಗಳ ಪರಿಚಯುವನ್ನು ಮಾಡಿಕೊಂಡರು. ಹೀಗೆ ಕಲೆಯ ವಿಕಸನಕ್ಕೆ ಅಗತ್ಯವಾದ ಬೌದ್ಧಿಕ ನೆಲೆಗಟ್ಟನ್ನು ಅವರು ಆರಮಭದಲ್ಲಿಯೇ ಸಂಪಾದಿಸಿಕೊಂಡರು.

ಕಲಾ ಶಿಕ್ಷಣದ ದಿನಗಳು

ಭಾರತದಲ್ಲಿ ಕಲಾ ಶಿಕ್ಷಣದ ಇತಿಹಾಸವು ಇತ್ತಿಚೀನ ಶತಮಾನದಲಷ್ಟೆ ಬೆಳೆದು ಬಂದಿದೆ. ಅದು ಪಡುವಣದಿಂದ ಬಂದ ವಿಕ್ಟೋರಿಯನ್ ಕಲಾ ಶಿಕ್ಷಣವನ್ನು ನಾವು ಅನಿವಾರ್ಯವಾಗಿ ಒಪ್ಪಿಕೊಂಡಿದ್ದು ಆಗಿದೆ. ಆಂಗ್ಲರು ಭಾರತೀಯರನ್ನು ಆಳುತ್ತಿರುವಾಗಲೇ ತಮ್ಮದೇ ಶೈಕ್ಷಣಿಕ ಪದ್ಧತಿಯನ್ನು ಒತ್ತಾಯುವಾಗಿ ಭಾರತದಲ್ಲಿ ಬಿತ್ತಿದರು. ಅದರ ಪರಿಣಾಮವಾಗಿ ಮದ್ರಾಸ, ಮುಂಬಯಿ, ಲಾಹೋರ, ಕಲ್ಕತ್ತಾಗಳಲ್ಲಿ ಆಂಗ್ಲ ಕಲಾವಿದರ, ಅಧಿಕಾರಿಗಳ ಉಸ್ತವಾರಿಯಲ್ಲಿ ಕಲಾ ಶಾಲೆಗಳು ಹುಟ್ಟಿಕೊಂಡವು. ಹೀಗೆ ಹುಟ್ಟಿಕೊಂಡ ಕಲಾ ಶಾಲೆಗಳಲ್ಲಿ ಮದ್ರಾಸು ಕಲಾ ಶಾಲೆಯೂ ಒಂದು. ಸ್ವತಂತ್ರ ಪೂರ್ವದಲ್ಲಿ ಬ್ರಿಟೀಷರ ಆಳ್ವಿಕೆಯ ಕಾಲ ಮತ್ತು ಭಾರತೀಯ ಕಲಾ ಸಂಪ್ರದಾಯದ ಅಧಃ ಪತನದ ಕಾಲದಲ್ಲಿ ಈ ಕಲಾ ಶಾಲೆಗಳು ಪ್ರಾರಂಭವಾದವು. ಲಂಡನ್ನಿನ ರಾಯಲ್ ಅಕಾಟಡೆಮಿ ಆಫ್ ಆರ್ಟ ಸಂಸ್ಥೆಯ ಮಾದರಿಯಲ್ಲಿ ಬ್ರಿಟೀಷರು ಸ್ಥಾಪನೆ ಮಾಡಿದ ಎಕೈಕ ಕಲಾ ಶಾಲೆ ಮುಂಬಯಿ ನಂತರ ಇದೇ ಮಾದರಿಯಲ್ಲಿ ಮದ್ರಾಸು ಕಲಾ ಶಾಲೆಯನ್ನು ಡಾ. ಹಂಟರ ಪ್ರಾರಂಭಿಸಿದದು. ಇಂತಹ ಕಲಾ ಶಾಲೆಯಲ್ಲಿಯೇ ಪರಮೇಶ್ವರರು ಡಿಪ್ಲೋಮಾ ಪರೀಕ್ಷೆ ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಅಂದಿನ ಶೈಕ್ಷಣಿಕ ಸಂದರ್ಭದಲ್ಲಿ ವಿಶೇಷವೆನಿಸುವ ವಿಷಯಗಳು ಇರುತ್ತಿದ್ದವು. ನೈಜ ಅಲಂಕಾರಿಕ, ಭಾರತೀಯ ಕಲಾ ವಿಷಯಗಳು ಇರುತ್ತಿದ್ದವು ಆದರೆ ಭಾರತೀಯ ಕಲಾಕೃತಿಗಳಲ್ಲಿನ ಲಕ್ಷಣಗಳು ಯಾವುವು ? ಅವುಗಳನ್ನು ಹೇಗೆ ಗುರುತಿಸುವುದು ? ಕಡೆ ಪಕ್ಷ ಹತ್ತು ಲಕ್ಷಣಗಳಾದರೂ ಹೇಳಿ ಎಂದರೆ ಯಾರು ಕೂಡ ಈ ಕುರಿತು ನಿಖರವಾಗಿ ಹೇಳುತ್ತಿರಲಿಲ್ಲ ಅದು ಕೂಡ ಕಷ್ಟಕರವಾಗಿತ್ತು. ಆ ಭಾರತೀಯ ಚಿತ್ರಕಲಾ ಕೃತಿಯ ವಿಷಯ. ಅಂದರೆ ಪುರಾಣಗಳನ್ನು ಅಥವಾ ಕಥೆಗಳನ್ನು ಆಧರಿಸಿಯೋ ಆ ಚಿತ್ರದಲ್ಲಿನ ರೂಪಗಳ ಹಿನ್ನೆಲೆಯನ್ನು ಹೇಳುತ್ತಿದ್ದರು. ಆದರೆ ತಾಂತ್ರಿಕ ವಿಷಯಗಳ ಕುರಿತಾಗಿ ಏನೂ ಹೇಳುತ್ತಿರಲಿಲ್ಲ. ಇದರಿಂದ ನಮಗೆ ಕಲೆಯ ಕುರಿತಾಗಿ ವಿಶೇಷ ಪರಿಣತಿ ದೊರೆಯುವದಿಲ್ಲ ಆದ್ದರಿಂದ ಭಾರತದಲ್ಲಿ ಬಹು ಮಟ್ಟಿಗೆ ಹೇಳುವುದಾದರೆ ತಾಂತ್ರಿಕತೆಯಲ್ಲಿ ಒಂದೇ ರೀತಿಯ ಶೈಲಿಗಳು ಬಂದಿವೆ. ಅದು ನಿಲ್ಲಬೇಕಾದರೆ ವರುಷಗಳೆ ಬೇಕಾಗಬಹುದು. ಆದರೆ ಇಂದಿನ ಬೆಳವಣಿಗೆಗೆ ತಕ್ಕಂತೆ ಆಧುನಿಕ ಪರಿಕರಗಳಿಗೆ ತಕ್ಕಂತೆ ಚಿತ್ರಗಳನ್ನು ರಚಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆ ಅಂದು ಯೋಚಿಸಿರಲಿಲ್ಲ. ಆದ್ದರಿಂದ ನಿರ್ದಿಷ್ಟ

ಚೌಕಟ್ಟಿನೊಳಗೆ ಅಧ್ಯಯನ ಮಾಡುವಂತಹ ಪ್ರವೃತ್ತಿ ಇತ್ತು ಇನ್ನೊಬ್ಬರು ರಚಿಸಿದ ಕೃತಿಯನ್ನೇ ನಾನೂ ರಚಿಸಿಬಿಟ್ಟರೆ ಸಾಕು.. ಅವರ ಮಟ್ಟದಲ್ಲಿಯೇ ನಾನು ಇದ್ದೇನೆ ಎಂಬ ಭಾವನೆ ಬಾಯಿರಿಯವರದಾಗಿತ್ತು. ಏಕೆಂದರೆ ಆಗಿನ ಪರಿಸರವೇ ಹಾಗಿತ್ತು. ಕುತುಹಲದ ಆ ಪ್ರವೃತ್ತಿಯೇ ಇಂದು ಬಾಯಿರಿಯವರನ್ನು ಬೆಳೆಸಿದೆ.

ಶೈಕ್ಷಣಿಕ ಸಂದರ್ಭವು ಕೆಲ ಕಾಲವಿದರ ಮಟ್ಟಿಗೆ ಸ್ಮರಣೀಯವಾಗಿ ಬದುಕಿನುದಕ್ಕೂ ಆ ಶಾಲೆಯ ಪ್ರಭಾವವನ್ನು ತಮ್ಮ ಕಲಾಕೃತಿಗಳಲ್ಲಿ ಅಳವಡಿಸಿಕೊಂಡು ಒಂದು ಶೈಲಿಗೆ ಅಂಟಿಕೊಂಡು ಮುನ್ನಡೆಯುತ್ತಾರೆ. ಆದರೆ ಕಲಾ ಶಿಕ್ಷಣ ಹಂತದಿಂದ ಹಿಡಿದು ಇಂದಿನವರೆಗೂ ವಿಭಿನ್ನ ಮಾಧ್ಯಮಗಳನ್ನು ಸಮರ್ಥನೀಯವಾಗಿ ಬಳಸಿಕೊಳ್ಳುತ್ತ ದಂಡಾವತಿ ಮಠರ ನೂತನ ಕಲಾ ಮಂದಿರದ ಪ್ರಭಾವವನ್ನು ಅದರ ಹೊಸ್ತಿಲಲ್ಲೇ ಬಿಟ್ಟು ತಮ್ಮತನವನ್ನು ಕಂಡು ಕೊಂಡ ರೀತಿಯಿಂದ ಬಾಯಿರಿಯವರು ಕರ್ನಾಟಕ ಕಲಾಕ್ಷೇತ್ರದಲ್ಲೇ ವಿಭಿನ್ನ ನೆಲೆಯಲ್ಲಿ ನಿಲ್ಲುವುದರೊಂದಿಗೆ ಮಹತ್ವದ ಕಲಾವಿದ, ಕಲಾ ಶಿಕ್ಷಕರೆನಿಸುತ್ತಾರೆ.

* * * * *

ಅಧ್ಯಾಯ ಮೂರು

ಬಿ. ಪಿ. ಬಾಯಿರಿಯವರ
ವೃತ್ತಿ ಜೀವನ ಮತ್ತು ಕಲಾಸೃಷ್ಟಿ

ಕಲಾಕೃತಿ ತನ್ನಷ್ಟಕ್ಕೆ ತಾನೆ ಹುಟ್ಟಿಬರುತ್ತದೆ, ತನಗೋಸ್ಕರವೇ ಇರುತ್ತದೆ. ಅದರ ಉತ್ಪತ್ತಿಗೆ ಮತ್ತಾವ ನಿಮಿತ್ತವೂ ಇಲ್ಲ ಮತ್ತಾವ ಉದ್ದೇಶದಿಂದ ಸಫಲವಾಗುವುದಿಲ್ಲ. ಹಿಗೇಂಬುದು ಕಲೆಗಾಗಿ ಕಲೆಯೆಂಬ ಸೂತ್ರದ ಸಾರ. ಬಹು ಗಲಭೆಯುನ್ನೆಬ್ಬಿಸಿರುವ ಈ ವಾದ ೧೯ ನೆಯ ಶತಮಾನದಲ್ಲಿ ಮೊದಲು ಫ್ರಾನ್ಸಿನಲ್ಲಿ ತಲೆದೋರಿ ಕ್ರಮೇಣ ವೃದ್ಧಿಹೊಂದಿತು. ಸಂಗೀತದ ವಿಚಾರವಾಗಿ ಈ ತತ್ವಕ್ಕೆ ಸರ್ವರ ಸಮ್ಮತಿ ಹಿಂದನಿಂದಲೂ ಇತ್ತು. ಆದರೆ ೧೮೨೦-೧೮೪೦ ರ ದಶಕಗಳಲ್ಲಿ ಫ್ರಾನ್ಸಿನ ಚಿತ್ರಕಾರರ ಒಂದೂ ಕೂಟದವರು ತಮ್ಮ ಕಲೆಗೂ ಅಂಥ ಸ್ವತಂತ್ರ ಸ್ಥಾನವನ್ನು ಗಳಸಿಕೊಡಲು ಹಾತೊರೆದರು. ದೃಶ್ಯವೊಂದರ ವರ್ಣಚಿತ್ರವನ್ನು ಸಂದರ್ಶಿಸುವಾಗ ಅದು ಹೇಗೆ ಸಾರವತ್ತಾಗಿ ರಚಿಸತವಾಗಿದೆ ಎಂಬುದನ್ನು ಲೆಕ್ಕಿಸಬೇಕು. ಈ ಬಗೆಯು ಗಟ್ಟಿ ಕೂಗಿನಿಂದ ಜನತೆಯಲ್ಲಿ ಆಂದೋಳನ ಉಂಟಾಯಿತು. ಸಾಹಿತ್ಯ ಲೋಕಕ್ಕೂ ಅದರ ಅಲೆಗಳು ಉರುಳಿ ಬಂದವು. ಥಿಯೋಪೈಲ್ ಗೌತಿಯೆ (೧೮೧೦-೭೨) "ಕಲೆಗಾಗಿ ಕಲೆ" ಎಂಬ ಧ್ಯೇಯ ಮಂತ್ರವನ್ನು ೧೮೫೨ ರಲ್ಲಿ ಸಾರಿದ ನುರಿತ ಅಕ್ಕಸಾಲೆ ನಾಜುಕು ನಗವನ್ನು ತಯಾರಿಸುವ ಚಾಕಚಕ್ಕತೆಯಿಂದ ತನ್ನ ಕವಿತೆಯನ್ನು ತಾನು ರಚನೆಗೈಯುವುದಾಗಿ ಆತ ಹೇಳುತ್ತಿದ್ದ"[೧]

೧. ಹಾ.ಮಾ.ನಾಯಕ (ಸಂ) ಕನ್ನಡ ವಿಶ್ವಕೋಶ, ಸಂಪುಟ-೪, ಪುಟ೨೫೩.

ಮೇಲಿನ ಉಲ್ಲೇಖದಂತೆ ಉಡುಪಿಯಲ್ಲಿ ೧೯೩೫ ರಲ್ಲಿ ಬಾಯರಿಯವರು ಕಲಾಶಿಕ್ಷಕರಾಗಿ ರೂಪಗೊಂಡು ಮೂಲ್ಕಿಯ ಶಾಲೆಯಲ್ಲಿ ಕಲಾ ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದರು ಇವರ ಕಲಾ ಪ್ರವೃತ್ತಿಗೆ ಸ್ಫೂರ್ತಿ ದೊರೆತಿದ್ದು ಇಲ್ಲಿಯೇ ಅಲ್ಲಿಂದ ಮುಂದೆ ಮೂರು ದಶಕಗಳ ಕಾಲ ಅವರ ಅಧ್ಯಾಪನ ವೃತ್ತಿ ಅವಿಛಿನ್ನವಾಗಿ ಮುಂದುವರಿಯಿತು. ಮೂಲ್ಕಿ ಶಾಲೆಯಲ್ಲಿ ಇವರಿಗೆ ಅಲ್ಲಿ ಶಿಕ್ಷಕರಾಗಿದ್ದ ಶ್ರೀನಿವಾಸ ಕಿದಿಯೂರು, ಹೆಜಮಾಡಿ ಮುದ್ದಣ್ಣ ಶೆಟ್ಟರು, ನಂಟು ಶ್ರೀನಿವಾಸರಾಯರ ಪುಸ್ತಕಗಳಿಗೆ ಬಾಯರಿಯವರೆ ಚಿತ್ರ ಬಿಡಿಸುವ ಕೆಲಸ ಹೀಗೆ ಕಲಾ ಪ್ರವೃತ್ತಿಯು ಬೆಳವಣಿಗೆಗೆ ಅವಕಾಶ ದೊರೆಯಿತು. ನಿತ್ಯ ಪಾಠಗಳಿಗೆ ಅಗತ್ಯವಾಗಿದ್ದ ಚಿತ್ರ ಪಟಗಳನ್ನು ತಯಾರಿಸುವ ಹೊಣೆ ಬಾಯಿರಿಯವರ ಮೇಲಿತ್ತು. ನಾನಾ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಚಿತ್ರಪಟಗಳನ್ನು ನಿರ್ಮಿಸಿದರು. ನಂತರ ಕುಂದಾಪೂರ ಶಾಲೆಗೆ ವರ್ಗ ಆ ಶಾಲೆಯಲ್ಲಿಯೂ ಇವರ ಸೇವೆ. ಅಲ್ಲಿ. ಕೋ. ಲ .ಕಾರಂತರ ಪ್ರೋತ್ಸಾಹ ಇವರಿಗೆ ಲಭ್ಯವಾಯಿತು. ನಿರಂತರ ಕಲಾ ಅಧ್ಯಯನಕ್ಕೆ ನಾಂದಿ ಹಾಡಿದ್ದು ಇಲ್ಲಿಯೇ ಕುಂದಾಪುರದಲ್ಲಿಯೇ ಸುಮಾರು ೨೦೦ಕ್ಕೂ ಹೆಚ್ಚು ಭಾವ, ಪೂರ್ಣಭಾವಚಿತ್ರಗಳನ್ನು ರಚಿಸಿದ ಇವರು ಮುಂದೆ ಉಡುಪಿಯ ಬೋರ್ಡ ಹೈಸ್ಕೂಲ್ ನಲ್ಲಿ ೧೯೫೬ ರಲ್ಲಿ ಚಿತ್ರಕಲೆ ಐಚ್ಛಿಕ ಬೋಧನಾ ವಿಷಯವಾಗಿ ಜಾರಿಗೊಂಡಾಗ ಅದರ ಪ್ರಧಾನ ಶಿಕ್ಷಕರಾಗಿ ಕರ್ತವ್ಯದ ಹೊಣೆ ಹೊತ್ತರು. ಇದು ಇವರ ಡಿಪ್ಲೋಮಾ ಪದವಿಗೆ ಒಂದು ಹೆಮ್ಮೆಯ ಹುದ್ದೆ. ಉಡುಪಿಯ ಕಲಾಸಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲೆ ಕಲಿಯುವ ಅವಕಾಶವನ್ನು ಒದಗಿಸಿಕೊಟ್ಟವರು ಇವರು. ಕರ್ನಾಕಟದ ಮೂಲೆ ಮೂಲೆಗಳಲ್ಲಿ ಅವರ ವಿದ್ಯಾರ್ಥಿಗಳು ಹರಡಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಕಲಾ ಕ್ಷೇತ್ರದಲ್ಲಿ ಹಲವಾರು ಕಲಾವಿದರು ತಮ್ಮ ಪ್ರಾವಿಣ್ಯತೆಯನ್ನು ಮೆರೆದಿದ್ದಾರೆ. ಅಂಥವರಲ್ಲಿ ಬಿ.ಪಿ. ಬಾಯರಿಯವರು ಒಬ್ಬ ಕಲಾವಿದನಾಗಿ, ಕಲಾ ಸಾಹಿತಿಯಾಗಿ, ಚಿತ್ರಕಲಾ ಉಪಾಧ್ಯಾಯರಾಗಿ ತಮ್ಮ ಮಹತ್ವದ ಸೇವೆಯನ್ನು ಈ ನಾಡಿಗೆ ಸಲ್ಲಿಸಿದ್ದಾರೆ. ಬಿ.ಪಿ. ಬಾಯರಿಯವರು ಕಲಾ ಶಿಕ್ಷಣದ ಬಗ್ಗೆ, ಚಿಕ್ಕ ಮಕ್ಕಳ ಚಿತ್ರಕಲೆಯ ಬಗ್ಗೆ ಮನೋವೈಜ್ಞಾನಿಕವಾಗಿ ಅಧ್ಯಯನ ಮಾಡಿ ಪ್ರಯೋಗಿಕರಿಸಿ ಸಾಹಿತ್ಯ ರೂಪದಲ್ಲಿ ಪುಸ್ತಕಗಳನ್ನು ಪ್ರಕಟಿಸಲು ಶಿಕ್ಷಕ ವೃತ್ತಿಯೆ ಅವರಿಗೆ ಪ್ರೋತ್ಸಾಹಿಸಿತ್ತು. ಬಿ.ಪಿ. ಬಾಯಿರಿಯವರು ಕಲಾ ಶಿಕ್ಷಕ ವೃತ್ತಿಯನ್ನು ಆದರ್ಶವಾಗಿ ಹಾಗೂ ಸುಧೀರ್ಘವಾಗಿ ಆನಂದಿಸಿದರು ಇವರಿಂದ ಬೋರ್ಡ ಹೈಸ್ಕೂಲ್‌ನಲ್ಲಿ ಚಿತ್ರಕಲೆಯನ್ನು ನೂರಾರು ವಿದ್ಯಾರ್ಥಿಗಳು ಅಭ್ಯಾಸ ಮಾಡಿ ಶ್ರೇಷ್ಠ ಚಿತ್ರಕಲಾ ವಿದರಾಗಿದ್ದಾರೆ. ಹಾಗೂ ಚಿತ್ರಕಲೆಯನನ್ನು ತಮ್ಮ ಜೀವನಾಧಾರದ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಹಾಗೆಯೇ ಈ ಶಿಷ್ಯರು ಇಂದು ಚಿತ್ರಕಲೆಗೆ ತಮ್ಮ ಅಪಾರ ಕೊಡುಗೆಯನ್ನು ಕೊಡುತ್ತಾ ಚಿತ್ರಕಲೆಯನ್ನು ಪ್ರಚಾರ ಮಾಡುತ್ತಾ ಬೆಳೆಸಿಕೊಂಡು ಬಂದಿದ್ದಾರೆ. ಕಲಾ ಶಿಕ್ಷಕರಾಗಿ

ಬಾಯಿರಿ ಅವರು ಎಂದೂ ಪತ್ಯಕ್ರಮಕ್ಕಷ್ಟೇ ಅಂಟಿಕೊಂಡಿರಲಿಲ್ಲ. ಅವರ ಮಟ್ಟಿಗೆ ಕಲಾ ಶಿಕ್ಷಣ ಎಂದರೆ ರೇಖೆ, ಬಣ್ಣಗಳ ವಿನ್ಯಾಸದಲ್ಲಿ ಜಾಣತನವನ್ನು ಕಲಿಸುವುದಲ್ಲ. ಅದರ ಪ್ರಕ್ರಿಯೆಯಲ್ಲಿ ವೀಕ್ಷಣೆ, ಗ್ರಹಿಕೆ, ಕ್ರಿಯಾಶೀಲತೆ ಮತ್ತು ಅಭಿವ್ಯಕ್ತಿ ಇರುತ್ತದೆ. ಇದರ ಪೂರ್ಣ ಅರಿವು ವಿದ್ಯಾರ್ಥಿಗಳಿಗೆ ಉಂಟಾಗಲು ಬಾಯಿರಿ ಅವರುಗಳನ್ನು ಸುಂದರ ಪ್ರಕೃತಿ ತಾಣಗಳಿಗೆ ಕರೆದೊಯ್ಯುತ್ತಿದ್ದರು. ಅಲ್ಲಿನ ಬಣ್ಣ, ವಿನ್ಯಾಸ, ಸಾಮರಸ್ಯ, ವೈರುಧ್ಯಗಳನ್ನು ತೋರಿಸಿ ಅವನ್ನು ತಮ್ಮ ಚಿತ್ರದಲ್ಲಿ ಪಡಿ ಮೂಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುತ್ತಿದ್ದರು. ಮಕ್ಕಳು ರಚಿಸಿದ ಚಿತ್ರದಲ್ಲಿ ಲೋಪ-ದೋಷಗಳನ್ನು ಅವರಿಗೆ ಮನದಟ್ಟಾಗುವಂತೆ ವಿಶ್ಲೇಷಿಸುತ್ತಿದ್ದರು. ಹೀಗೆ ವಿದ್ಯಾರ್ಥಿಗಳು ರಚಿಸಿದ್ದ ಉಡುಪಿ ರಥೋತ್ಸವ ತೆಪ್ಪೋತ್ಸವ, ಅಜ್ಜರಕಾಡು ಗೋಪುರ ಮೊದಲಾದ ಚಿತ್ರಗಳು ಇಂದಿಗೂ ಉಡಪಿ ಬೋರ್ಡ್ ಹೈಸ್ಕೂಲಿನ ಕೋಣೆಗಳಲ್ಲಿ ತೂಗುತ್ತಿರುವುದನ್ನು ಕಾಣಬಹುದು. ಈ ಬಗೆಯ ಚಿತ್ರಗಳ ಅನಾವರಣ ಇತ್ತೀಚಿಗೆ ಸರ್ವೆಸಾಧಾರಣವಾಗಿದೆ ಎಂದು ಬಾಯಿರಿ ಅವರು ವಿಷಾಧದಿಂದ ನುಡಿಯುತ್ತಾರೆ. ತದ್ರೂಪ ಚಿತ್ರಣ, ಚಿತ್ರಕಲೆಯ ಒಂದು ಪ್ರಮುಖ ಅಂಗ ಎಂದು ಅವರು ದೃಢವಾಗಿ ಪ್ರತಿಪಾದಿಸುತ್ತಾರೆ. ದೃಷ್ಟಿಕೋನ, ಪ್ರಮಾಣ ಮೂರನೇಯ ಆಯಾಮ ಇವೆಲ್ಲವೂ ಕರಗತವಾಗುವುದು ಯಥಾ ಚಿತ್ರಣದಲ್ಲಿ ಆದರೆ ತದ್ರೂಪ ಚಿತ್ರಣ ಕಲೆಯೇ ಅಲ್ಲ ಎನ್ನುವ ವಾದ ವಿದ್ಯಾರ್ಥಿಗಳನ್ನು ಈ ಪ್ರಕಾರಕ್ಕೆ ವಿಮುಖರನ್ನಾಗಿಸುತ್ತದೆ. ಇದು ನಿಜಕ್ಕೂ ದುರದೃಷ್ಟಕರ ಪರಿಸ್ಥಿತಿ ಹೀಗೆ ಮುಂದುವರಿದರೆ ನಮ್ಮಲ್ಲಿ ಉತ್ತಮ "ಇಲಸ್ಟ್ರೇಷನ್" ಮಾಡಬಲ್ಲ ಕಲಾವಿದರೇ ಇಲ್ಲವೆನಿಸಬಹುದು ಎನ್ನುವ ಆತಂಕ ಅವರನ್ನು ಕಾಡುತ್ತಿತ್ತು. ಹೀಗೆ ಇವರು ಯಾವುದೇ ಸಹಾಯವಿಲ್ಲದೇ ತಮ್ಮದೆ ಆದ ಸ್ವಂತ ನೆಲೆಯಲ್ಲಿ ನಿಂತು ಮೂವತ್ತಾರು ವರ್ಷಗಳ ಕಾಲ ಸುದೀರ್ಘ ಶಿಕ್ಷಕ ವೃತ್ತಿಯ ಅನಂತರ ಇದೇ ಶಾಲೆಯಲ್ಲಿ ನಿವೃತ್ತರಾದರು.

ಬಾಯಿರಿಯವರು ಅಂದಿನ ಸನ್ನಿವೇಶದಲ್ಲಿ ಆಧುನಿಕ ಕಲೆಯನ್ನು ಜನರಿಗೆ ಪ್ರದರ್ಶಿಸಬೇಕೆಂಬ ಅದಮ್ಯ ಉತ್ಸಾಹವಿದ್ದರೂ ಅಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಂಪರಾಗತ ಕಲೆಯನ್ನೆ ಇಷ್ಟ ಪಡುತ್ತಿದ್ದ ಆ ಕಾರಣದಿಂದಾಗಿಯೇ ಬಾಯಿರಿಯವರು ಜನ ಸಾಮಾನ್ಯರ ಅಭಿರುಚಿಗೆ ಹೆಚ್ಚು ಒಲವು ತೋರಿಸಿ ಬದುಕಿಗೆ ಅವಶ್ಯಕವಿರುವಂತಹ ಕಲಾಕೃತಿಗಳಾದ, ಭಾವಚಿತ್ರ, ಪೂರ್ಣ ಭಾವಚಿತ್ರಗಳಿಗೆ ಹೆಚ್ಚು ಒತ್ತು ಕೊಟ್ಟು ಕಲಾಕೃತಿಗಳನ್ನು ರಚಿಸಿದ್ದಾರೆ. ಒಳ್ಳೆಯ ಅವಕಾಶಗಳನ್ನು ಬಾಯರಿಯವರು ಅಂದಿನ ಸಂದರ್ಭದಲ್ಲಿ ನಿರಿಕ್ಷಿಸುತ್ತ, ದೊರೆಯುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವುದರ ಮೂಲಕ ತಮ್ಮ ಸೃಜನಶೀಲ ಕಲೆಯ ಹರವನ್ನು ವಿಸ್ತರಿಸಿಕೊಳ್ಳಲು ಹಂಬಲಿಸುತ್ತಿದ್ದರು. ಅನೇಕ ಕಲಾ ಪ್ರದರ್ಶನಗಳನ್ನು ನಡೆಸಿಕೊಟ್ಟು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ ಈ ಮಕ್ಕಳಲ್ಲಿ ಕಲೆಯ ಸ್ಪರ್ಧಾತ್ಮಕ

ಮನೋಭಾವನೆಯನ್ನು ಏಕಾಂಗಿಯಾಗಿಯೆ ಅಂದಿನ ಕಾಲಮಾನದಲ್ಲಿ ನಡೆಸಿಕೊಟ್ಟ ಧೀಮಂತ ವ್ಯಕ್ತಿ ಎನ್ನಬಹುದು. ಸರಕಾರದಿಂದ ನೇಮಿಸಲ್ಪಟ್ಟು ಆಗ ದೆಹಲಿಯಲ್ಲಿ ನಡೆಯುತಿದ್ದ ಶಂಕರ ವೀಕ್ಲಿಯವರ ಮಕ್ಕಳ ಕಲಾ ಚಿತ್ರಕಲಾ ಸಮಾರಂಭದಲ್ಲಿ ಭಾಗವಹಿಸಿ ಬಂದಿದ್ದಾರೆ. ಚಿತ್ರಕಲೆಯ ಡಿಪ್ಲೋಮಾ ಪರೀಕ್ಷೆಯಲ್ಲಿ ಪರೀಕ್ಷಕರಾಗಿಯೂ ಕೆಲಸ ಮಾಡಿದ್ದಾರೆ. ಪರೀಕ್ಷಾ ಕೇಂದ್ರ ಮಂಗಳೂರಿನಲ್ಲಿ ಮಾತ್ರ ಇದ್ದಾಗ ಸಾಕಷ್ಟು ಪರೀಕ್ಷಾರ್ಥಿಗಳನ್ನು ಒಟ್ಟು ಮಾಡಿಕೊಂಡು ಉಡುಪಿಯಲ್ಲೂ ಒಂದು ಪರೀಕ್ಷಾ ಕೇಂದ್ರವಾಗುವಂತೆ ಶ್ರಮಿಸಿ ಅದರಲ್ಲಿ ಜಯಗಳಿಸಿದರು. ಬಾಯಿರಿಯವರು ಪ್ರಚಾರವನ್ನು ಬಯಸುವ ವ್ಯಕ್ತಿಯಾಗಿರಲಿಲ್ಲ ಅಲ್ಲದೇ ಉದ್ದೇಶವು ಇವರದಾಗಿರಲಿಲ್ಲ. ಚಿತ್ರಕಲಾ ಶಿಕ್ಷಕರಾಗಿದ್ದಾಗ ಶಾಲೆಯಲ್ಲಿ ಪ್ರತಿವಾರ ಹದಿನೆಂಟು ಘಂಟೆ ಚಿತ್ರದಲ್ಲಿ ತರಗತಿ ನಡೆಸುತ್ತಿದ್ದರೆ ಉಳಿದ ಸಮಯದಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ. ಕಲಾ ಶಿಕ್ಷಕರಾಗುವವರೆಗೆ ತರಗತಿಯನ್ನು ತಮ್ಮ ಮನೆಯಲ್ಲಿ ನಡೆಸುತ್ತಿದ್ದರು. ಭಾವಚಿತ್ರ ಕಲಾವಿದರೂ, ಕಲಾ ಸಾಹಿತಿಗಳು, ರಂಗೋಲಿ ಕಲಾವಿದರಾಗಿ ಇವರು ಬೆಳಗಿದರು. ಚಿತ್ರಕಲೆ ಬಗ್ಗೆ ಜ್ಞಾನವನ್ನು ವೃದ್ಧಿಸಲು ಅವರು ಹೆಚ್ಚು ಪುಸ್ತಕಗಳನ್ನು ಓದುತ್ತಿದ್ದರು. ಕನ್ನಡದಲ್ಲಿ ಚಿತ್ರಕಲೆಯ ಪುಸ್ತಕಗಳು ಅತೀ ವಿರಳವಾಗಿದ್ದುದರಿಂದ, ಕಲಾ ವಿದ್ಯಾರ್ಥಿಗಳಿಗೆ ಇವರ ಪುಸ್ತಕಗಳು ಆಗ ದಾರಿದೀಪವಾಗಿ ಗೋಚರವಾಗಿದ್ದವು.

ಸದಾಕಾಲ ಕಲಾ ಚಿಂತನ ಮಂಥನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಬಿ. ಪಿ. ಬಾಯಿರಿ ಕಲಾಶಿಕ್ಷಕ ವೃತ್ತಿಯಿಂದ ನಿವೃತ್ತರಾದರೂ ಸಹ ಪ್ರವೃತ್ತಿಯಿಂದ ಕಲೆಯಿಂದ ದೂರ ಸರಿಯಲಿಲ್ಲ. ನಿವೃತ್ತಿಯ ಅನಂತರವೂ ಸಂಪೂರ್ಣ ಕಲಾವಿಷಯಗಳ ಪ್ರಸಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸರಳ ಜೀವಿ ಕಲಾಭಿರುಚಿ ಹೊಂದಿದ ಅವರ ಒಲವು ವಸ್ತು ನಿಷ್ಠೆಯಿಂದ ಕೂಡಿದ ಕಲೆಯ ಕಡೆಗೆ. ನವ್ಯ ಕಲೆಯ ಬಗ್ಗೆ ಸರಿಯಾದ ಕಲ್ಪನೆ ಹೊಂದಿದ್ದ ಇವರ ನವ್ಯ ಕಲೆಯ ಹೆಸರಿನಲ್ಲಿ ಸೋಗಿನ ಕಲೆ ರೂಪಗೊಳ್ಳುವದರ ಬಗ್ಗೆ ಕಿಡಕಾರುತ್ತಿದ್ದರು. ನವ್ಯ ಕಲೆಯ ಬಗ್ಗೆ ಶ್ರೀ ಸಾಮಾನ್ಯರ ಬಗ್ಗೆ ಅರ್ಥವಾಗುವ ರೀತಿಯಲ್ಲಿ ಅನೇಕ ಲೇಖನಗಳನ್ನು ಇವರು ಬರೆದವರು . ಇವರ ಬಗ್ಗೆ ಅನೇಕ ಇವರ ಸಮಕಾಲೀನ ಕಲಾವಿದರು. ಅಸಡ್ಡಿ ಮಾತನಾಡಿದ್ದು ಸಹಜ ಬಾಯಿರಿ ನವ್ಯಕಲೆಯ ವಿರೋಧಿ ಎಂಬ ಪಟ್ಟ ಕಟ್ಟಿದರು. ಬಾಯರಿಯವರ ರಂಗೋಲಿಕಲೆಯು ಕಲೆಯಲ್ಲ ಎಂದು ಪ್ರತಿಪಾದಿಸಿದ ಕಲಾವಿದರಿಗೆ ಕೊರತೆಯಿಲ್ಲ. ಆದರೂ ಬಾಯಿರಿ ಇಂತಹ ಮಾತುಗಳಿಗೆ ಪ್ರತ್ಯುತ್ತರ ನೀಡುತ್ತಿರಲಿಲ್ಲ. ರಂಗೋಲಿಯಲ್ಲಿ ಅಡಕವಾಗಿರುವ ಸಾಮಾಜಿಕ ಸಾಂಸ್ಕೃತಿಕ ನವ್ಯ ಕಲಾ ಅಂಶಗಳನ್ನು ವಿವರಿಸಿ ರಂಗೋಲಿ ಒಂದು ಜಾಗತಿಕ ಕಲೆ ಎಂದು ಪ್ರತಿಪಾದಿಸುತ್ತಾರೆ. ಒಟ್ಟಾರೆಯಾಗಿ ಬಿ.ಪಿ. ಬಾಯಿರಿಯವರು ಯಾವುದೇ ಸಹಾಯವಿಲ್ಲದೆ. ತಮ್ಮದೇ ಆದ ಸ್ವಂತ ನೆಲೆಯಲ್ಲಿ ನಿಂತು

ಈ ನಾಡಿನ ಕಲಾ ಜಗತ್ತಿಗಾಗಿ ದುಡಿದಿದ್ದರು. ಒಬ್ಬ ಕಲಾ ಶಿಕ್ಷಕನಾಗಿ ಏನೆಲ್ಲಾ ಮಾಡಬಹುದು ಎಂಬುದನ್ನು ಜಿ.ಪಿ. ಬಾಯಿರಿ ಸಾಧಿಸಿ ತೋರಿಸಿದ್ದಾರೆಂದರೆ ತಪ್ಪಾಗಲಾರದು.

ವೃತ್ತಿ ಜೀವನ

ಖ್ಯಾತ ಕನ್ನಡದ ಮಹಿಳಾ ಸಾಹಿತಿಯಾದ ಮಣಿಪಾಲದ ವೈದೇಹಿಯವರು ತಮ್ಮ ಮಲ್ಲಿನಾಥನ ಧ್ಯಾನ್ಯ ಎಂಬ ಕಥಾಸಂಕಲನದಲ್ಲಿ "ಚಿತ್ರಕಲಿಸಿದ ಪಾಠ" ಎಂಬ ಕಥೆಯಲ್ಲಿ ತಮಗೆ ಬಾಯಿರಿಯವರು ಚಿತ್ರಕಲೆಯನ್ನು ಕಲಿಸುವಾಗಿನ, ತಮ್ಮ ಜೊತೆಗಿನ ಒಡನಾಟದ ಪಾಠ ಕಲಿಸುವ ಅವರ ಪದ್ಧತಿಯನ್ನು ಈ ರೀತಿ ವಿವರಿಸುದ್ದಾರೆ. **"ಚಿತ್ರ ಕಲಿಸಿದ ಪಾಠ"** "ಉಪಾಧ್ಯಾಯರೆಂದರು, ಕಣ್ಣಿನ ಮಟ್ಟ ಬಹಳ ಮುಖ್ಯ. ಘನ ವಸ್ತುವನ್ನು ಮೇಲಿನಿಂದ ನೋಡು. ಮೇಲ್ಭಾಗ ಕಾಣುತ್ತದೆ. ಕೆಳಭಾಗ ಕಾಣುವುದಿಲ್ಲ. ನೇರ ಬದಿಯಿಂದ ನೋಡಿದರೆ ಅದರ ಮಗ್ಗಲು ಕಾಣುತ್ತದೆ. ಎದುರಿನ ಕಣ್ಮಟ್ಟದಲ್ಲಿ ಕಾಣುವುದು ಒಂದು ಅಡ್ಡಗೀಟು ಮಾತ್ರ ! ಎಂತಲೇ ವಸ್ತು ಚಿತ್ರದ ತದ್ರೂಪ ಬಿಡಿಸುವಾಗ ನಿನ್ನ ಕಣ್ಣಿನ ಮಟ್ಟದ ಬಗ್ಗೆ ಎಚ್ಚರವಿರಲಿ. ಎಂತಿದ್ದರೂ ನೀನು ನಿನಗೆ ಕಾಣುವುದು ಎಷ್ಟೋ ಅಷ್ಟೆ ಬಿಡಿಸಬೇಕು ಎಲ್ಲಾ ಭಾಗವನ್ನು ಬರೆಯುಲು ಸಾಧ್ಯವಿಲ್ಲ"

"ಯಥಾವತ್ ವರ್ಣನೆ, ಒಳ ಮನಸ್ಸು, ಗ್ರಹಿಸಿದ ರೀತಿಯ ವರ್ಣನೆ ಎರಡರಲ್ಲಿಯೂ, ವಸ್ತುವಿನದ್ದಾಗಲೀ ಪ್ರಾಣಿಗಳದ್ದಾಗಲೀ ಎಲ್ಲ ಮಗ್ಗುಲುಗಳನ್ನೂ ಒಂದೇ ಬಾರಿಗೆ ನೋಡುವುದು. ಬರೆಯುವುದು ಸಾಧ್ಯವೇ ಇಲ್ಲ. ನೀನು ಬಿಡಿಸುವ ವ್ಯಕ್ತಿಚಿತ್ರ ಈ ಕಾರಣದಿಮದಲೇ ಎಂದಿಗೂ ಅಪೂರ್ಣವಾಗಿಯೇ ಉಳಿಯುತ್ತದೆ. ಬರೆದ ಸಾಲುಗಳಿಗಿಂತ ಬರೆಯದೇ ಉಳಿಯುವ ಸಾಲುಗಳು ಅಸಂಖ್ಯೆ. ಎಂತಲೇ ಅಪೂರ್ಣತೇಯೇ, ಒಂದು ರೀತಿಯಲ್ಲಿ ಸೃಜನಶೀಲತೆಯ ಅನಿವಾರ್ಯ ಗುಣವಾಗಿ ಬಿಡುತ್ತದೆ".

ಕಲ್ಪನಾ ಚಿತ್ರಗಳಲ್ಲಿ ಕೃತಿಯ ಜೀವ ನಿನ್ನ ಕೈಯಲ್ಲಿದ್ದರೆ ವಸ್ತುಗಳ ತದ್ರೂಪ ಚಿತ್ರಗಳಲ್ಲಿ ಅದು ಲೆಕ್ಕಾಚಾರದಲ್ಲೇ ಅಡಗಿದಂತೆ" ಇನ್ನು ಬೆಳಕಿನ ಕುರಿತು ನೀನು ಒಂದು ಗೋಲಕ್ಕೆ ಶೇಟ್ ಆಂಡ್ ಲೈಟ್ ಕೊಡುತ್ತಿರುವೆ ಅಂತಿಟ್ಟುಕೊ ಗೋಲದ ಉಬ್ಬು ಭಾಗದಲ್ಲಿ ಬೆಳಕು ಹೆಚ್ಚು. ಬೆಳಕಿಂದ ದೂರವಿರುವ ಧ್ರುವ ಪ್ರದೇಶದಲ್ಲಿ ಕಡಿಮೆ ಭೂ ಗೋಲಕ್ಕೆ ದೊರಕುವ ಬೆಳಕಿನ ಪ್ರಕಾರ ಧ್ರುವದಲ್ಲಿ ಹಿಮ ನಮಗೆ ಸೆಕೆ. ಪ್ರಕೃತಿ ಶಾಸ್ತ್ರವನ್ನು ಅಧ್ಯಯನ ಮಾಡಿದರೆ ಸಾಕು. ಅದು ನಿನ್ನ ಚಿತ್ರಕಲೆಗೆ ದೊಡ್ಡ ತಿಳಿವಾಗಿ ಕೈ ಹಿಡಿದು ಮುನ್ನಡೆಸುತ್ತಿದೆ.

ಜಾಗ್ರತೆ ಮಗೂ, ಬಣ್ಣಗಳೊಂದಿಗೆ ಜೋಪಾನವಾಗಿ ವರ್ತಿಸು, ಅತೀ ಸೂಕ್ಷ್ಮದವರೊಂದಿಗೆ ಮಾತ್ರ ಅವು ಒಡಲ ಶಕ್ತಿ ತೋರುವಂಥದ್ದು ಇಲ್ಲವಾದರೆ ಸುಮ್ಮನೆ ಕಾಡುಹರಟೆ ಕೊಚ್ಚಿ ಬಾಯಿ ಮುಚ್ಚಿಕೊಳ್ಳುತ್ತವೆ ತಾಳ್ಮೆಯಿಂದ ಕಲೆಸಿ, ಸಂಶೋಧಿಸಿ, ಸಾವಧಾನತೆಯಿಂದ ಬಣ್ಣಗಳನ್ನು





ಬಿ. ಪಿ. ಬಾಯಿರಿಯವರು ಸೇವೆ ಸಲ್ಲಿಸಿದ ಬೋರ್ಡ್ ಹೈಸ್ಕೂಲ್ ಉಡಪಿ

ಒಲಿಸಿಕೋ. ಒಮ್ಮೆ ಬಣ್ಣದ ಆತ್ಮದ ಗುರುತು ನಿನಗೆ ಪತ್ತೆತೆಂದರೆ ಮುಂದೆ ನೀವಿಬ್ಬರೂ ಆಪ್ತ ಸ್ನೇಹಿತರೆಂದೇ ತಿಳಿ[೧] ಈ ರೀತಿಯಾಗಿ ವೈದೇಹಿಯುವರು ವಿವರಿಸುತ್ತಾ ತಮ್ಮ ಜೊತೆಗೆ ಬಾಯಿರಿಯವರು ಸಂಪರ್ಕದ ಮಾಹಿತಿಯುನ್ನು ಎಳೆಯುಳೆಯಾಗಿ ವಿವರಿಸುತ್ತಾ ತಮ್ಮ ಕಲಾ ಗುರುಗಳನ್ನು ಸ್ಮರಿಸಿಕೊಳ್ಳುತ್ತಾರೆ. ಇದೇ ಲೇಖಕಿ ವೈದೇಹಿಯುವರು ತಮ್ಮ ಮಲ್ಲಿನಾಥನ ಧ್ಯಾನ ಎಂಬ ಕಥಾ ಸಂಕಲನದಲ್ಲಿ "ನರಳಿದವರು" ಎಂಬ ಕಥೆಯನ್ನು ಆಧರಿಸಿ ಬಾಯಿರಿಯವರ ಜೀವನದಲ್ಲಿನ ಒಂದು ಘಟನೆಯುನನು ವಿವರಿಸುತ್ತಾ.

ಒಮ್ಮೆ ಸಂತೆಗೆ ಹೋಗಿ ತರಕಾರಿ ತರುವ ಕೆಲಸ ಕೊಡ ಮಾಡದ ನಾಲಾಯಕ್ಕು ಎಂದು ಹೆಂಡತಿ ಅರೆದರೆದು ಜರಿದ ಪರಿಣಾಮವಾಗಿ ಸಂತೆಗೆ ಹೋದ ಬಲಿತದ್ದನ್ನು ಕೊಳ್ಳಬೇಕು ಎಂದೇ ನಂಬಿಕೊಂಡವನು. "ಚನ್ನಾಗಿ ಬೆಳೆದದ್ದನ್ನು ಕೊಡು, ಎಳೆಯುದು ಕೊಟ್ಟರೆ ವಾಪಸ್" ಎಂತೆಲ್ಲ ಬಹಳ ಚೌಕಾಶಿ ಮಾಡುವಂತೆ ಮಾತಾಡಿ, ವ್ಯಾಪಾರಿ ಸಂತೋಷದಿಂದ ಅವನ ಚೀಲಕ್ಕೆ ತುಂಬಿದ ಬಲಿತ ಬೆಂಡಗಳನ್ನು ಮನಗೆ ತಂದ, ಕಂಡು ಹೆಂಡತಿ ಹೌಹಾರಿದಳು. ಆಗ ಆತನೆಂದ "ಯಾಕೆ ಹಾಗೆ ನೋಡುತ್ತೀ ? ಬೆಂಡೆ ಊರು ಬೆಂಡೆ, ಘಾಟಿಯುದಲ್ಲ ಎಷ್ಟು ಚೆನ್ನಾಗಿದೆ. ಬೆಳ್ಳಗೆ ಬೆಳೆದು" ಹೆಂಡತಿಯ ಮುಖ ಕಾವೇರಿತು. ತುಟಿಯೊಡೆಯುದೆ ಅಡುಗೆ ಕೋಣೆಗೆ ಹೋಗಿ ಆ ಬೆಂಡಕಾಯಿಗಳನ್ನು ಕತ್ತರಿಸಿ ಹುಳಿ ಮಾಡಿದಳು. ಗಂಡನನ್ನು ಊಟಕ್ಕೆ ಕರೆದಳು. ಹೋಳುಗಳನ್ನು ಸೌಟಿನಲ್ಲಿ ತುಂಬಿ ತುಂಬಿ ಬಡಿಸಿದಳು. ಸಾಕು ಸಾಕೆಂದರೂ ಕೇಳದೇ ಮತ್ತಷ್ಟು ಬಡಿಸಿದಳು "ತಿನ್ನಿ, ಒಳ್ಳೇ ಬೆಳೆದ ಬೆಂಡೆಕಾಯಿ, ನೀವೇ ತಂದದ್ದು." ಕೈ ಅಡ್ಡ ಹಿಡಿದರೂ ನಿಲ್ಲಿಸದಂತಹ ಭುಗಿಲು ಕೋಪ ಇನ್ನಷ್ಟು ಬಡಿಸುತ್ತಲೇ ಇತ್ತು ಎಂದೂ ಸಿಟ್ಟು ಬರದ ಕಲಾವಿದ ಇಂದು ಮಾತ್ರ ತಟ್ಟೆ ದೂಡಿ ಎದ್ದೇ ಹೋದ. ಹೋದದ್ದು ಮತ್ತೆಲ್ಲಿಗಲ್ಲ, ಕ್ಯಾನ್ವಾಸ್ ಎಂದುರಿಗೆ, ಅದರೆದುರು ಬಲಿತ ಬೆಂಡೆಕಾಯಿ ಹೆಂಡತಿಯ ಕ್ರೌರ್ಯ ಮತ್ತು ತನ್ನ ದಡ್ಡತನ ಎಲ್ಲವನ್ನೂ ಮರೆತ.[೨]

ಬದುಕು

ಬಿ.ಪಿ. ಬಾಯಿರಿಯವರ ಸ್ಮರಣಾರ್ಥ ೧೯೯೬ ರಲ್ಲಿ ಉಡುಪಿಯುಲ್ಲಿ ಕಲೋತ್ಸವ ನಡೆಯಿತು. ಆ ಹಿನ್ನೆಲೆಯುಲ್ಲಿ ಬಾಯಿರಿಯುವರ ಬಗೆಗಿನ ನೆನಪನ್ನು ಪಿ. ಆರ್. ತಿಪ್ಪೇಸ್ವಾಮಿಯುವರು ಈ ರೀತಿಯಾಗಿ ಹೊಸ ದಿಗಂತ ಎನ್ನುವ ದಿನ ಪತ್ರಿಕೆಯಲ್ಲಿ ೧೪-೧೨-೧೯೯೬ ರಲ್ಲಿ ವಿವರಿಸುತ್ತಾ ೧೯೧೨ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನಲ್ಲಿ ಬಾಯಿರಿ ಅವರು ಜನಿಸಿದರು. ಚಿತ್ರಕಲಾ ಶಿಕ್ಷಕರಾಗಿಯೇ ೩೫ ಕ್ಕೂ ಹೆಚ್ಚು ವರ್ಷ ದುಡಿದಿದ್ದರು.

---

೧. ವೈದೇಹಿ : ಮಲ್ಲಿನಾಥನ ಧ್ಯಾನ, ಕಥಾಸಂಕಲನ, ಪುಟ-೨೪ ರಿಂದ ೨೮.
೨. ವೈದೇಹಿ : ಮಲ್ಲಿನಾಥನ ಧ್ಯಾನ, ಕಥಾ ಸಂಕಲನ, ಪುಟ ೧೨೪.

೧೯೭೧ ರಲ್ಲಿ ವೃತ್ತಿಯಿಂದ ನಿವೃತ್ತರಾಗಿ ಉಡುಪಿಯ "ಚಿತ್ರ ಕುಟೀರ"ದಲ್ಲಿ ನೆಲಸಿದರು. "ಚಿತ್ರ ಕುಟೀರ" ಅವರ ಸಾಧನೆಯ ವೇದಿಕೆಯನ್ನಾಗಿ ಮಾಡಿಕೊಂಡರು. ಬಾಯಿರಿ ಅವರು ಪಂಪ, ಲಕ್ಷ್ಮೀಶ, ಕುಮಾರವ್ಯಾಸ, ಪುರಂದರದಾಸ, ಕನಕದಾಸ, ಸರ್ವಜ್ಞ, ರತ್ನಾಕರ- ಇವುಗಳು ಬಾಯಿರಿ ಅವರ ಕಲ್ಪನೆಯ ರೂಪ ಚಿತ್ರಗಳಾಗಿ ನಾಡಿಗೆ ಕಾಣಿಕೆಯಾಗಿ ದೊರೆತವು. ಇಷ್ಟೆ ಅಲ್ಲದೆ ಪ್ರಾದೇಶಿಕ ಪರಿಸರದ ಬದುಕನ್ನು ಸಮೀಪದಿಂದ ಕಂಡ ಬಾಯಿರಿ ಅವರು ಬುಟ್ಟಿ ಹೆಣೆಯುವವರು. ಯಕ್ಷಗಾನ, ರಥೋತ್ಸವ, ಊರ ಜಾತ್ರೆ, ಬೆಣ್ಣೆ ಕಳ್ಳ ಕೃಷ್ಣ, ಚಾಣಕ್ಯ ಚಂದ್ರಗುಪ್ತ ಮೊದಲಾದ ಸಂಯೋಜನ ಚಿತ್ರಗಳನ್ನು ಬಿಡಿಸಿದರು. ನನ್ನ ಕೋರಿಕೆ ಮೇರೆಗೆ ಮೈಸೂರಿನ ಮಾನಸ ಗಂಗೋತ್ರಿ ಜಾನಪದ ವಸ್ತು ಸಂಗ್ರಹಾಲಯದ ಕಲಾ ವಿಭಾಗಕ್ಕೆ ಬಾಯಿರಿ ಅವರು ಉಡುಪಿಯ "ರಥೋತ್ಸವ" ಚಿತ್ರವನ್ನು ದಾನವಾಗಿ ನೀಡಿದ್ದು ನೆನಪಿದೆ.

ಬಿ. ಪಿ. ಬಾಯಿರಿ ಅವರು ಬರೀ ಚಿತ್ರಕಾರರು ಮಾತ್ರ ಅಲ್ಲ, ಬರಹಗಾರರೂ ಕೂಡ ಆಗಿದ್ದರು. ಸುಮಾರು ೨೫ ಪುಸ್ತಕಗಳನ್ನು ರಚಿಸಿದ ಹೆಗ್ಗಳಿಕೆ ಇವರದು. ಕೆಲವು ಆವೃತ್ತಿಗಳನ್ನು ಕಂಡಿವೆ. ಚಿತ್ರಕುಟೀರ, ಚಿತ್ರಜೀವಿ, ಚಿತ್ರಪ್ರೇಮಿ ಹೆಸರುಗಳಲ್ಲಿ ಬಾಯಿರಿ ಅವರು ಸತತವಾಗಿ ರಂಗೋಲಿ ಚಿತ್ರಗಳನ್ನು ಪತ್ರಿಕೆಗಳಿಗೆ ರಚಿಸಿಕೊಡುತ್ತಾ ಬಂದಿದ್ದರು. ಗ್ರಾಮೀಣ ಕಲೆಯಲ್ಲಿ ಸತ್ವ ಇದೆ, ಅದು ಹಳ್ಳಿ ಹೆಡ್ಡರದೆಂದು ಅನಾದರಿಸಬೇಡಿ ಎಂಬುದನ್ನು ಆಧುನಿಕರಲ್ಲಿ ಭಾರತೀಯ ಶೈಲಿಯನ್ನು ಬೆಳಗಿದ ಜಾಮಿನೀರಾಯ್ ಬಗ್ಗೆ ಬಾಯಿರಿ ಅವರು ಅಧ್ಯಯನ ಮಾಡಿದರು. ಇತರ ಗ್ರಾಮೀಣ ಚಿತ್ರಕಲೆ ಬಾಯಿರಿ ಅವರ ಮೇಲೆ ತುಂಬಾ ಪ್ರಭಾವ ಬೀರಿತು. ಜಾಮಿನೀರಾಯ್‌ರ ಬಗ್ಗೆ (ಉದಯವಾಣಿ ೧-೮-೧೯೭೬) ಲೇಖನ ಬರೆದರು.

"ಜನಪದ ಕಲೆ ಜನರ ಜೀವನಾಡಿ" ಎಂದು ಅರಿತ ಬಾಯಿರಿ ಅವರು ರಂಗೋಲಿ ಕಲೆಯ ಉಳಿವಿಗಾಗಿ ಶ್ರಮಿಸಿದ ಏಕೈಕ ಚಿತ್ರಕಾರರು. ಇಂದಿನ ವಿಜ್ಞಾನ ಯುಗದಲ್ಲೂ ಬಾಯಿರಿ ಅವರು ರಂಗೋಲಿ ಕಲೆಯನ್ನು ಪ್ರಚಾರ ಮಾಡಿದುದು ದೊಡ್ಡ ಸಾಧನೆ. ಇವರ ರಂಗೋಲಿ ಗ್ರಂಥಗಳಲ್ಲಿ ಅಲಂಕಾರಿಕ ಹಾಗೂ ಧಾರ್ಮಿಕ ನಂಬಿಕೆಯ ನಮೂನೆಗಳಿವೆ. ಸಾಂಕೇತಿಕ ಕಲೆಯೂ ರಂಗವಲ್ಲಿಗಳಲ್ಲಿ ಅಡಕವಾಗಿದೆ. ತಾವರೆ, ಸ್ವಸ್ತಿಕ್ ಗುರುಮಂಡಲಗಳು ಹೆಚ್ಚಾಗಿ ಕಂಡು ಬಂದರೂ ಮಂಗಲಕರ ವಾತಾವರಣ ಕಾಣುವಲ್ಲಿ ಆಹ್ಲಾದವನ್ನು ನೀಡುತ್ತದೆ. ರಂಗವಲ್ಲಿಯಂಥ ಜಾನಪದ ಶ್ರೇಷ್ಠ ಕಲೆಯನ್ನು ಉಳಿಸಿಕೊಂಡು ಬಂದ ಶ್ರೇಯಸ್ಸು ಬಾಯಿರಿ ಅವರದಾಗಿತ್ತು.

ಮೃದುಮಾತಿನ, ಕಪಟತನ ಅರಿಯದ "ದೊಡ್ಡ ಜೀವ" ಬಾಯರಿಯವರದಾಗಿತ್ತು. ನಾನು ಲಲಿತ ಕಲಾ ಅಕಾಡೆಮಿ ಅಧ್ಯಕ್ಷನಾಗಿದ್ದ ವೇಳೆ ಕರಾವಳಿ ಕಡೆ ಬಂದಾಗಲೆಲ್ಲಾ ತಪ್ಪದೆ ಚಿತ್ರಕುಟೀರಕ್ಕೆ ಭೇಟಿ ನೀಡುತ್ತಿದ್ದೆ. ಬಾಯಿರಿ ಅವರ ಆರೋಗ್ಯ ವಿಚಾರಿಸುತ್ತಿದ್ದೆ. ರಂಗೋಲಿ

ಪುಸ್ತಕ ಪ್ರಕಟಣೆಗೆ ತೊಡಗಿ ಕೈಸುಟ್ಟು ಕೊಂಡಿದ್ದರು. ಪರಿಹಾರವಾರ್ಗ ನೀಡಿದ್ದೆ. ನಮ್ಮಿಬ್ಬರ ನಡುವೆ ಪತ್ರ ವ್ಯವಹಾರ ಕೊನೆಯತನಕ ಬೆಳೆದುಬಂದಿತ್ತು. ಅವರ ಪತ್ರಗಳಲ್ಲಿ ವಿಷಯ, ವಿವರಣೆ ಸಮರ್ಪಕ ವಾಗಿರುತ್ತಿತ್ತು. ತಾವೇ ಮುದ್ರಿಸಿದ ಪುಸ್ತಕಗಳು ಮಾರಾಟವಾಗದೇ ಉಳಿದಿವೆ ಎಂಬ ಆತಂಕ ಅವರನ್ನು ಕಾಡುತ್ತಿತ್ತು. ೧೧-೩-೮೨ ರಂದು ಬಾಯಿರಿ ಹಾಗೂ ನಾನು ಒಂದೇ ವೇದಿಕೆಯಲ್ಲಿ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದಿದ್ದೆವು. ಹತ್ತು ವರ್ಷಗಳಿಗೆ ನನಗಿಂತ ಹಿರಿಯ ಬಾಯಿರಿಯವರಿಗೆ ಒಂದು ಆಸೆ ಕೈಗೊಡಲಿಲ್ಲ. "ರಂಗೋಲಿ ಕಲೆಯನ್ನು ನಮ್ಮ ಸಮಕಾಲೀನ ಕಲಾವಿದರು ಒಂದು ಕಲಾ ಮಾಧ್ಯಮದ ಎಂದು ಪರಿಗಣಿಸುತ್ತಿಲ್ಲವಲ್ಲ" ಎಂಬುದು. ಈ ಬಗ್ಗೆ,ನನ್ನೊಂದಿಗೆ ಅನೇಕ ಸಾರಿ ದುಃಖದಿಂದ ಹೇಳಿಕೊಳ್ಳುತ್ತಿದ್ದರು. "ಗಂಜೀಫಾ ಕಲೆಯನ್ನು "ಕಾವಿ" ಕಲೆಯನ್ನು ಹಾಗೂ "ಛಾಯಾ ಚಿತ್ರ"ವನ್ನು ಕಲೆ ಎಂದು ಆಕಾಡೆಮಿ ಈಗಾಗಲೇ ಪರಿಗಣಿಸಿ "ರಂಗೋಲಿ" ಕಲೆಯನ್ನು ಏಕೆ ಕಡೆಗಣಿಸಬೇಕು ? ಇದಕ್ಕೆ ಇಂದಿನ ಸಮಕಾಲೀನ ಕಲಾವಿದರೇ ಸೂಕ್ತ ಉತ್ತರ ಕೊಡಬೇಕಾಗುತ್ತದೆ.

ಕಳೆದ ವರ್ಷ ಡಿಸೆಂಬರ್ ೧೦ ರಂದು ಚಿತ್ರೀಕರಣದ ಸಮಯದಲ್ಲಿ ಬಾಯರಿ ಅವರನ್ನು ಭೇಟಿಯಾದದ್ದು ನನ್ನ - ಅವರ ಕಡೆಯ ಭೇಟಿಯಾಯಿತು. ಈಗ ಇಂತಹ ಮಹಾನ್ ಕಲಾವಿದನ ಸಂಸ್ಮರಣೆಯ ಕಲಾ ಉತ್ಸವ ಸೂಕ್ತವಾದ ಕಲಾ ಕಾರ್ಯಕ್ರಮ. ಏನೇ ಇರಲಿ ರಂಗೋಲಿ ಕಲೆಯ ಉಳಿವಿಗೆ ಸತತ ದುಡಿದ, ಶ್ರಮಿಸಿದ "ರಂಗೋಲಿ ಬ್ರಹ್ಮ" ಬಿ. ಪಿ. ಬಾಯಿರಿ ಅವರ ಹೆಸರು ಅವರ ಕೆಲಸ ಅಜರಾಮರವಾಗಿ ಉಳಿಯುವಂತಹದು.

ಬಿ.ಪಿ. ಬಾಯಿರಿಯವರ ಬದುಕು ಸಾಹಸದ ಬದುಕು ಎಂದು ವರ್ಣಿಸಬಹುದು. ನೋವನ್ನು ನುಂಗುತ್ತ ಚಿತ್ರಕಲೆಯ ಮೂಲಕ ಬದುಕಿನಲ್ಲಿ ಹಸಿರು ಕಂಡವರು. ಉಡುಪಿಗೆ ಬಂದ ಹೊಸದರಲ್ಲಿ ಇವರಿಗೆ ಕಲಾ ಶಿಕ್ಷಕರೆಂಬ ಕಾರಣಕ್ಕಾಗಿ ಬಾಡಿಗೆ ಮನೆ ದೊರೆಯಲಿಲ್ಲ. ಆದರೆ ಮುಂದೆ ಇದೇ ಊರಿನಲ್ಲಿ ಸ್ವಂತ ಮನೆ, ನೆಲೆ, "ಚಿತ್ರಕುಟೀರ" ಕಟ್ಟಿ ಸಾಧಿಸಿದರು. ಇವರೂ ಕಲೆಯೊಂದಿಗೆ ಸಾಗಿದವರು. ಕಲಾವೃತ್ತಿಯ ಮೂಲವೂ ಬದುಕಿನಲ್ಲಿ ಮೇಲೆ ಬರಬಹುದೆಂದು ಸಾಬೀತುಪಡಿಸಿದ ಕಲಾವಿದ ಇವರು. ಕಲೆಯೇ ತನ್ನ ಜೀವ, ಅದುವೇ ನನ್ನ ಜೀವನದ ಅವಿಭಾಜ್ಯ ಅಂಗವೆಂದು ನಂಬಿದ್ದ ಇವರ ವಾಸದ ಮನೆಯ ಹೆಸರು "ಚಿತ್ರಕುಟೀರ" ಚಿತ್ರ ಕಲೆಯ ಆರಾಧಕ "ಚಿತ್ರಪ್ರೇಮಿ" ಕಲೆಯ ಮೂಲಕ ತನ್ನ ಬದುಕು ರೂಪಿಸಿಕೊಂಡ ಕಲಾವಿದ "ಚಿತ್ರಜೀವಿ" ಹೀಗೆ ಮೂರು ವೈಶಿಷ್ಟ್ಯ ಪೂರ್ಣವಾದ ನಾಮಾಂಕಿತಗಳ ಮೂಲಕ ಕಲಾವಿದ ಬಿ.ಪಿ. ಬಾಯಿರಿ ಕಲಾ ಜಗತ್ತಿಗೆ ಚಿರಪರಿಚಿತರು. ಇವರ ಸಾಹಸ ಅದ್ವಿತೀಯವೇ ಸರಿ ಹೀಗೆ ಚಿತ್ರ ಬಿಡಿಸುತ್ತಾ ಇದ್ದರೆ ಮುಂದೆ ಊಟಕ್ಕೆ ಎಂತ ಮಾಡ್ತಾನೆ ಎಂಬ ಅವರ ತಂದೆಯ ಪ್ರಶ್ನೆಗೆ ತಮ್ಮ ಸಾಹಸದ ಬದುಕಿನ ಮೂಲಕ ಉತ್ತರ ನೀಡಿದ ಧೀಮಂತ ವ್ಯಕ್ತಿತ್ವ ಇವರದು.

ಕಲಾ ಶಿಕ್ಷಕರಾಗಿ, ಕಲಾವಿದರಾಗಿ, ಕಲಾ ಸಾಹಿತಿಗಳಾಗಿ ಮಕ್ಕಳ ಚಿತ್ರಕಲೆಯ ಪೋಷಕರಾಗಿ, ರಂಗೋಲಿಯ ಕಲಾವಿದರಾಗಿದ್ದ ಇವರಿಗೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪ್ರಶಸ್ತಿ, ಜಾಗತೀಕ ಕಲೆಗೆ ಮೀಸಲಾದ ಪ್ರಶಸ್ತಿ, ರಾಜ್ಯದ ಅತ್ಯುತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ ಲಭಿಸಿತು. ಅಲ್ಲದೇ ನೂರಾರು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿದವು.

* * * * *



ತಾವು ರಚಿಸಿದ ಕಲಾಕೃತಿಯೊಂದಿಗೆ ಬಿ. ಪಿ. ಬಾಯಿರಿ



ಕಲಾಕೃತಿಯ ರಚನೆಯಲ್ಲಿ ನಿರತ ಬಿ. ಪಿ. ಬಾಯಿರಿ





ಬಿ. ಪಿ. ಬಾಯಿರಿಯವರ ಬಳಸುತ್ತಿದ್ದ ಕಲಾ ಪರಿಕರಗಳು

ಅಧ್ಯಾಯ ನಾಲ್ಕು

ಬಾಯಿರಿಯವರ ಕಲಾಕೃತಿಗಳ ವಸ್ತು ವಿಷಯಗಳು

ಚಿತ್ರಕಲೆಯ ಚರಿತ್ರೆ ಪ್ರಾರಂಭವಾಗುವುದು ಪ್ರಾಗೈತಿಹಾಸದ ಗುಹಾ ಚಿತ್ರಗಳಿಂದ, ಚಿತ್ರ ರಚನೆಗಳು ಆದಿ ಮಾನವರಿಂದ ಸಾಂಸ್ಕೃತಿಕ, ಮಾನಸೊಲ್ಲಾಸದ ಹಿನ್ನೆಲೆಯಲ್ಲಿ ಮೂಡಿ ಬಂದವು ಎಂದು ಅನೇಕ ಉಲ್ಲೇಖಗಳು ಹೇಳುತ್ತವೆ. ಆದಿ ಮಾನವನ ಅಂತರ್ ಭಿತ್ತಿಯ ಸಂವೇದನೆಗಳು ಚಿತ್ರ ರೂಪದಲ್ಲಿ ಪ್ರಕಟಗೊಳ್ಳುವಿಕೆಯ ಹಿನ್ನೆಲೆಯಲ್ಲಿ ತನ್ನ ಸುತ್ತಲಿನ ನಿಸರ್ಗ, ದೈನಂದಿನ ಬದುಕಿನ ರೂಪಣಗಳನ್ನೇ ಪುನರಾವರ್ತಿಸಿ ಕಲೆಯ ಮುಖೇನ ಭಾಷೆಯ ಸೃಷ್ಟಿಗೆ ತೊಡಗಿದ್ದು ದಿಟ.

ಆದಿ ಮಾನವನಿಗೆ ನಾಗರಿಕತೆಯ ಅರಿವು ಮುಡುತ್ತಿದ್ದಂತೆ ತನ್ನ ಸಂಸ್ಕೃತಿಯ ತುಡಿತಗಳ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಚಿತ್ರ ಬರೆಯುವಿಕೆಯನ್ನು ಮಾರ್ಪಡಿಸಿಕೊಂಡ. ಶತ ಶತಮಾನಗಳು ಸಂದಂತೆ ಕ್ರಮೇಣ ಚಿತ್ರಕಲೆ ಧಾರ್ಮಿಕ ವಿಧಿಕ್ರಿಯೆಯಾಗಿ ಒಡಮೂಡಿ, ನಂತರದಲ್ಲಿ ರಾಜಾಶ್ರಯ ಪಡೆದು ತನ್ನದೇ ಆದ ಪ್ರತ್ಯೇಕ ಪರಿಸರದಲ್ಲಿ ಚಿತ್ರಸೃಷ್ಟಿಯ ಕ್ರಿಯೆಗಳು ನಡೆದವು.

ಧಾರ್ಮಿಕ ಆಶ್ರಯದಲ್ಲಿ ಅಂದರೆ ಪಶ್ಚಿಮದ ದೇಶಗಳ ಚರ್ಚುಗಳಲ್ಲಿ ಕ್ರಿಸ್ತನ ಜೀವನ ಕುರಿತಾಗಿ ಬರೆದ ಚಿತ್ರಗಳು ಧಾರ್ಮಿಕ ಪ್ರಚಾರದ ಒಂದು ಪ್ರಬಲ ಆಂದೋಲನವನ್ನು ಮೊದಲಿಗೆ ಗುರುತಿಸುವುದು ಇಲ್ಲಿಂದಲೇ. ಕೇವಲ ಚಿತ್ರದ ಮೂಲಕವೇ ಅಷ್ಟೇ ಅಲ್ಲ ಶಿಲ್ಪಗಳ ಮೂಲಕವೂ ಧಾರ್ಮಿಕ ಆಂದೋಲನ ನಡೆದಿರುವುದರ ಮೇಲೂ ಪಶ್ಚಿಮದ ಕಲಾ ಇತಿಹಾಸ ಬೆಳಕು ಚೆಲ್ಲುತ್ತದೆ.

ಭಾರತದಲ್ಲಿಯೂ ರಾಜಾಶ್ರಯದ ಮೂಲಕ ಧಾರ್ಮಿಕ ಚಿತ್ರಗಳು ಗುಹೆಗಳ ಭಿತ್ತಿಯ ಮೇಲೆ ರಚಿಸಲ್ಪಟ್ಟವು ಉದಾಹರಣೆಗೆ ಅಜಂತಾ-ಎಲ್ಲೋರಾ, ಹಾಗೂ ಕರ್ನಾಟಕದ ಹಲವೆಡೆಗಳಲ್ಲಿ ಚಾಲುಕ್ಯರು ಮೊದಲ್ಗೊಂಡು ವಿಜಯನಗರದ ಆಳರಸರುಗಳು ನಿರ್ಮಿಸಿದ ದೇಗುಲಗಳಲ್ಲಿ ಕ್ರಮವಾಗಿ ಶೈವ, ವೈಷ್ಣವ, ಬೌದ್ಧ, ಜೈನ ಮುಂತಾದ ಧಾರ್ಮಿಕ ವಿಷಯಗಳ ದೃಶ್ಯ ಅಭಿವ್ಯಕ್ತಿಯು ಹೆಚ್ಚಾಗಿ ಭಿತ್ತಿಗಳ ಮೂಲಕವಾಗಿಯೇ ಮೂಡಿಬಂದವು. ಅಭಿವ್ಯಕ್ತಿ ಪ್ರಧಾನವಾದ ಚಿತ್ರಕಲೆಯನ್ನು ಎರಡು ರೀತಿಗಳಿಂದ ಪರಿಗಣಿಸಬೇಕಾಗುತ್ತದೆ. ಈಗಾಗಲೇ ರಚಿತವಾಗಿರುವ ಚಿತ್ರಕಲಾ ಕೃತಿಗಳನ್ನು ಇರಿಸಿ ಅವುಗಳ ಮೂಲಕ ಅಲ್ಲಿಯ ಸಂಸ್ಕೃತಿಯನ್ನು ನೋಡುವುದು ಒಂದಾದರೆ, ಒಂದು ಜನಾಂಗದ ಆಚರಣೆಯ ಸಂದರ್ಭದಲ್ಲಿ ರಚಿತವಾಗುವ ಕಲಾಕೃತಿಗಳಿಂದ ಅಲ್ಲಿಯೇ ಪರಿಶೀಲಿಸುವುದು ಇನ್ನೊಂದು.[೧]

ಸಂಸ್ಕೃತಿ ಮೂಲಕ ಪ್ರಕಟಗೊಳ್ಳುವ ಕಲೆಯ ಕುರಿತಾದ ವ್ಯಾಖ್ಯಾನಗಳು ವಿವಿಧ ರೀತಿಯಲ್ಲಿ ಇವೆ. ಕಲೆ ಎಂದರೆ ಏನು ? ಎಂಬ ಪ್ರಶ್ನೆ ಜೀವನ ಎಂದರೆ ಏನು ಪ್ರಶ್ನೆಯಷ್ಟೇ ಜಟಿಲವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಪಾಶ್ಚಾತ್ಯ ಮತ್ತು ಪೌರಾತ್ಯ ಕಲಾ ವಿದ್ವಾಂಸರು ಕಲೆಯ ಬಗ್ಗೆ ವ್ಯಾಖ್ಯಾನಗಳನ್ನು ನೀಡುತ್ತ ಬಂದಿದ್ದಾರೆ. ಆದರೆ ಇದನ್ನು ಸಂಪೂರ್ಣವಾಗಿ ಸ್ವೀಕರಿಸಬೇಕೆ ಬೇಡವೇ ಎಂಬ ಗೊಂದಲದಿಂದ ನಾವಿನ್ನೂ ಹೊರಬಂದಂತಿಲ್ಲ. ದೃಶ್ಯಕಲೆ ಎಂದರೇನು ? ಎನ್ನುವ ಬಗ್ಗೆ ಹಲವಾರು ಶತಮಾನಗಳಿಂದ ಚರ್ಚೆ ನಡೆಯುತ್ತಿದೆಯಾದರೂ ಈ ವರೆಗೆ ಸಮರ್ಪಕವಾದ, ಸರ್ವಸಮ್ಮತವಾದ ಉತ್ತರ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಕಲೆ ಎಂದರೇನು ? ಎನ್ನುವ ಬಗ್ಗೆ ಕೆಲವರ ಅಭಿಪ್ರಾಯಗಳನ್ನು ಚಿ.ಸು.ಕೃಷ್ಣಸೆಟ್ಟಿಯವರು ಚಿತ್ರ ಚಿತ್ತ ಗ್ರಂಥದಲ್ಲಿ ಹೀಗೆ ಸಂಗ್ರಹಿಸಿದ್ದನ್ನು ಇಲ್ಲಿ ಪುನರಾವರ್ತಿಸಲಾಗಿದೆ..

ವಾತ್ಸಾಯನನ ಕಾಮಸೂತ್ರಕ್ಕೆ ಟೀಕೆಯನ್ನು ಬರೆದ ಯಶೋಧರ ಪಂಡಿತನು ಒಂದು ಶ್ಲೋಕದ ಮೂಲಕ ಚಿತ್ರಕಲೆಯಲ್ಲಿರಬೇಕಾದ ಷಡಂಗಗಳು ಅಂದರೆ ಆರು ಅಂಗಗಳನ್ನು ಹೀಗೆ ಹೇಳಿದ್ದಾನೆ.

ರೂಪ ಭೇದಾ : ಪ್ರಮಾಣಾನಿ ಭಾವ ಲಾವಣ್ಯ ಯೋಜನಮ್
ಸಾದೃಶ್ಯಂ ವರ್ಣಿಕಾಭಂಗಂ ಇತಿ ಚಿತ್ರ ಷಡಂಗಕಮ್ ॥

ಇದರ ಭಾವಾರ್ಥ-

ರೂಪಭೇದ : ಅಂದರೆ ಜೀವ, ನಿರ್ಜೀವ ವಸ್ತುಗಳಲ್ಲಿನ ವ್ಯತ್ಯಾಸ
ಪ್ರಮಾಣ : ಅಂಗಾಂಗಗಳ ಪ್ರಮಾಣ, ತಾಳಮಾನ
ಭಾವ : ಅಭಿವ್ಯಕ್ತಿ ಗೊಳಿಸುವ ರಸಭಾವ

೧. ಡಾ. ಅ.ಲ.ನರಸಿಂಹನ್ : ಅಲೇಖ್ಯ, ಪುಟ ೩.

ಲಾವಣ್ಯ ಯೋಜನೆ : ಸೌಂದರ್ಯ ಯೋಜನೆ

ಸಾದೃಶ್ಯ : ಆಂತರಿಕ ಮತ್ತು ಪ್ರಾತಿನಿಧಿಕ ಅಂಗಗಳ ಹೋಲಿಕೆ

ವರ್ಣಿಕಾಭಂಗ : ವರ್ಣ ಸಂಯೋಜನೆ, ವರ್ಣ ವಿನ್ಯಾಸ

ಈ ಆರು ಅಂಗಗಳಿಂದ ಕಲೆಯು ಕೂಡಿರಬೇಕೆಂದು ಯಶೋಧರ ಪಂಡಿತ ಹೇಳುತ್ತಾನೆ.

ಪ್ಲೇಟೋವಿನ ಶಿಷ್ಯ ಅರಿಸ್ಟಾಟಲ್ (ಕ್ರಿ.ಪೂ.೩೮೪), ಕಲೆ ಮತ್ತು ಕಲಾವಿದರ ಬಗ್ಗೆ ಹಲವಾರು ವಿಚಾರಗಳನ್ನು ತಿಳಿಸಿದ. "ಸೃಷ್ಟಿ ಸೌಂದರ್ಯಕ್ಕೆ ಪೂರಕವಾಗುವ ಅಥವಾ ಅದರ ಸೌಂದರ್ಯಾನುಭೂತಿಗೆ ಹತ್ತಿರವಾಗುವ ಮಾನವ ನಿರ್ಮಿತ ಕಲಾಸೃಷ್ಟಿಯನ್ನು ಗ್ರಾಹ್ಯ ಮಾಡಬಹುದೆಂದು ಹೇಳಿದ'. "ಆದರೆ ಕೆಳದರ್ಜೆಯ ವಸ್ತುಗಳು ಉತ್ತಮವಾದುದನ್ನು ಅನುಕರಣೆ ಮಾಡಿದರೆ, ಅಥವಾ ಆ ಉತ್ತಮವಾದುದರ ಗುಣ ವಿಶೇಷಣವನ್ನು ತನ್ನಲ್ಲಿಯೇ ಪ್ರತಿಬಿಂಬಿಸಿದರೆ ಅದು ಕಲಾಕೃತಿಯಗುತ್ತದೆ." ಅಂದರೆ ಕಲಾಕೃತಿಗಳೆಲ್ಲ ದೈವ ಸೃಷ್ಟಿಯ ಅನುಕರಣವೆಂದು ಕರೆದು, ಮೂಲವಸ್ತು ಇರುವಂತೆಯೇ ಅಥವಾ ಅದಕ್ಕಿಂತ ಹೆಚ್ಚಿನ ಚೆಲುವಿನಲ್ಲಿ ಇಲ್ಲವೆ ಕಡಿಮೆ ಚೆಲುವಿನಿಂದ ರಚಿಸಬಹುದೆಂಬ ಈ ಸಿದ್ಧಾಂತವನ್ನು ಆನಂತರದವರು ಇನ್ನಷ್ಟು ವಿಸ್ತರಿಸಿದರು.

ಟಾಲ್‌ಸ್ಟಾಯ್ ಅವರ ಪ್ರಕಾರ "ಅನುಭವಿಸಿ ಆಗಿರುವ ಭಾವವನ್ನು ಒಬ್ಬಾತ ತನ್ನಲ್ಲಿ ಎಚ್ಚರಿಸಿಕೊಂಡು ಅದನ್ನು ಚಲನೆ, ರೇಖೆ, ಬಣ್ಣ, ನಾದ, ಆಕೃತಿ ಅತವಾ ಶಬ್ದಗಳ ಮೂಲಕ ಅಭಿವ್ಯಕ್ತಿಗೊಳಿಸಿ, ಆ ಭಾವವನ್ನು ಇನ್ನೊಬ್ಬನೆಡೆಗೆ ಪ್ರವಹಿಸಿದಾಗ ಎರಡನೆಯವನಲ್ಲೂ ಮೂಲದ ಭಾವನೆ ಸ್ಫುರಿಸುವಂತೆ ಮಾಡುವುದೇ ಕಲೆಯ ಕೆಲಸ." ಸೌಂದರ್ಯ ಶಾಸ್ತ್ರಜ್ಞ ಇಮ್ಯಾನುಯಲ್ ಕ್ಯಾಂಟ್ ಅವರ ಪ್ರಕಾರ "ಯಾವುದು ತಟಸ್ಥ ಚಿಂತನೆಯಲ್ಲಿ ಆನಂದವನ್ನು ಕೊಡಬಲ್ಲದೋ ಅದೇ ಕಲೆ. ತಟಸ್ಥ್ಯವು ಶುದ್ಧವಾದ ಚಿಂತನೆಯಾಗಿದ್ದು ಅದಕ್ಕೆ ವಸ್ತುವಿನ ಇರುವಿಕೆಯ ಅವಶ್ಯಕತೆಯಿಲ್ಲ. ವಸ್ತುವಿನ ಅಸ್ತಿತ್ವದ ಮೇಲಿರುವ ಆಸಕ್ತಿಯಿಂದಾಗಿ ಆ ವಸ್ತು ಒಳ್ಳೆಯದು, ಹಿತಕಾರಿ ಎಂಬ ಗುಣಗಳೂ ಸೇರಿರುತ್ತವೆ. ಆದರೆ ಯಾವುದು ಸುಂದರವಾಗಿದೆಯೋ ಅದು ಈ ಬಗೆಯ ಎಲ್ಲ ಆಸಕ್ತಿಗಳಿಂದ ಸ್ವತಂತ್ರವಾಗಿರುತ್ತದೆ." ಇನ್ನೊಬ್ಬ ಸೌಂದರ್ಯ ಶಾಸ್ತ್ರಜ್ಞ ಕ್ರೋಷೆ" ಕಲೆ ಎಂದರೆ ತಟಸ್ಥ ಅವಲೋಕನವೂ ಅಲ್ಲ, ಹಲಗುಗನಸು ಕಾಣುವುದೂ ಅಲ್ಲ, ಅದು ವ್ಯವಸ್ಥಾಪಿಸಲ್ಪಟ್ಟ ಪ್ರತಿಮೆಗಳ ಮೂಲಕ ಉಂಟಾಗುವ ಮಾನಸಿಕದೃಶ್ಯ ಎನ್ನುತ್ತಾನೆ.[೨]

ಹೀಗೆ ಕಲೆಯ ಕುರಿತು ವಿವಿಧ ಅಭಿಪ್ರಾಯಗಳು ನಮ್ಮ ಮುಂದೆ ಇದ್ದರೂ ಇದೇ ಸರಿಯಾದ ಉತ್ತರ ಎಂದು ನಾವು ಇನ್ನೂ ಸ್ವೀಕರಿಸಿಲ್ಲವಾದರೂ ಇತ್ತೀಚಿನ ಆಧುನಿಕ ಸಂದರ್ಭಗಳಿಗೆ ತಕ್ಕಂತೆ ಕಲೆಯ ವ್ಯಾಖ್ಯಾನ ತನ್ನ ಒಳ ಸ್ವರೂಪವನ್ನು

೨. ಜಿ.ಸು.ಕೃಷ್ಣಶೆಟ್ಟಿ : ಚಿತ್ರ ಚಿತ್ತ, ಪುಟ.೫೭-೫೮.

ಬದಲಿಸಿಕೊಳ್ಳುತ್ತಿರುವುದನ್ನು ನಾವು ಗಮನಿಸಬಹುದು.

ಇಷ್ಟೇ ಅಲ್ಲದೇ ಭಾರತೀಯರು ಬಳಸುತ್ತಿರುವ "ಕಲೆ" ಇಂಗ್ಲೀಷನ ART ಎಂಬ ಪದಗಳ ಬಗೆಗೆ ಇದುವರೆಗೂ ನಿಶ್ಚಿತವಾದ ಮತ್ತು ಸಮರ್ಪಕವಾದ ಸೂತ್ರ, ಅರ್ಥ ವಿವರಣೆ ಕೊಡಲು ಸಾಧ್ಯವಾಗಿಲ್ಲ ಎಂಬ ಅಭಿಪ್ರಾಯವನ್ನು ಡಾ. ಬಿ.ಕೆ. ಹಿರೇಮಠರು ತಮ್ಮ ಸೃಷ್ಠಿ ಗ್ರಂಥದಲ್ಲಿ ಉಲ್ಲೇಖಿಸುತ್ತಾರೆ. ಈ ಪದಗಳ ಬಳಕೆ ಎಷ್ಟು ನಿರಂಕುಶವಾಗಿ ಬೆಳೆದಿದೆಯೆಂದರೆ – ಅಡುಗೆ ಮಾಡುವದು ಒಂದು ಕಲೆ. ದಿನ ಪತ್ರಿಕೆ ಮಾರುವ ಹುಡುಗ ಪತ್ರಿಕೆ ಖರ್ಚಾಗಲು ಆಕರ್ಷಕವಾಗಿ ಕೂಗುತ್ತಿದ್ದರೆ ಅದೂ ಒಂದು ಕಲೆ, ಒಬ್ಬ ಭಿಕ್ಷಕ ದಾನಿಗಳ ಮನ ಕರಗುವಂತೆ, ಭಿಕ್ಷೆ ಬೇಡಿದರೆ ಅದೂ ಒಂದು ಕಲೆ, ಹೆಚ್ಚೇಕೆ, ಒಬ್ಬನು ಮೋಸ ಮಾಡಿದ್ದಾನೆಂದರೆ– ಮೋಸ ಮಾಡುವುದೂ ಕೂಡ ಒಂದು ಕಲೆ. ಎನ್ನುತ್ತೇವೆ.[೩] ಈ ಉಲ್ಲೇಖನಕ್ಕೆ ಪೂರಕವಾಗಿಯೇ ವಾತ್ಸಾಯನ ತನ್ನ ಕಾಮಸೂತ್ರದಲ್ಲಿ ಚೌಷ್ಠಿ ಕಾರ್ಯಗಳನ್ನು ಕಲೆ ಎಂದು ಉದ್ಘೋಷಿಸುತ್ತಾನೆ. ಅದರಲ್ಲಿಯೂ ಕೂಡ ಅರವತ್ತನಾಲ್ಕು ಕರ್ಮಗಳನ್ನು "ಕಲೆ" ಯೆಂದೇ ಕರೆಯುತ್ತಾನೆ. ಆ ಅರವತ್ತನಾಲ್ಕು ಕಲೆಗಳಲ್ಲಿ ಚಿತ್ರಕರ್ಮವನ್ನು "ಅಲೇಖ್ಯ" ಎಂದು ಹೆಸರಿಸುತ್ತಾನೆ. ಡಾ. ಬಿ. ಕೆ. ಹಿರೇಮಠರು "ಕಲೆ" ಪದದ ಬಗೆಗೆ ವಿಸ್ತೃತವಾದ ಚರ್ಚೆಯನ್ನು ಮಾಡಿದ್ದಾರೆ. "ಕಲೆ" ಈ ಪದದ ಮೂಲವು ಕೂಡ ಸಂದಿಗ್ಧವಾದುದು. "ಕಲ್" ಎಂಬ ದ್ರಾವಿಡ ಮೂಲದಿಂದ ಆರ್ಯರು ಎತ್ತಿ ಕೊಂಡಿರಬಹುದಾದ ಪದದ ಈ ಕಲೆ ಎಂಬುದು ಶ್ರೀ ಫಣೀಂದ್ರನಾಥ್ ಬೋಸರ ಅಭಿಪ್ರಾಯವಾಗಿದೆ.

ಕೆಲವು ವಿದ್ವಾಂಸರು "ಸ್ವಂದರ್ಯ" ಎಂಬುದನ್ನು ಸೂಚಿಸುವ Kalos ಎಂಬ ಗ್ರೀಕ ಪದಕ್ಕೂ "ಕಲೆ" ಎಂಬುದಕ್ಕೂ ಸಂಬಂಧ ಕಲ್ಪಿಸಲು ಪ್ರಯತ್ನ ಪಟ್ಟಿದ್ದಾರೆ. ಮೊನಿಯರ್ ವಿಲಿಯುಮ್ಸ್ ಅವರು "ಕಲೆ" ಎಂಬ ಈ ಪದದ ಮೂಲವೇ ಸಂಶಯಾಸ್ಪದವೆಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಕಲಾ ಅಥವಾ ಕಲೆ ಎಂಬುದಕ್ಕೆ ಮ್ಯಾಕ್‌ಡೊನೆಲ್ ಅವರು ಬೇರೆ ಬೇರೆ ಅರ್ಥಗಳನ್ನು ಕೊಡುವುದರ ಜೊತೆಗೆ Artistic skill, art (of which there are64) ಎಂಬುದಾಗಿ ಹೇಳುತ್ತಾರೆ. ಕಿಟಲ್‌ರು ಕಲೆ ಪದಕ್ಕಿರುವ ವಿವಿಧ ಅರ್ಥಗಳನ್ನು ಸೂಚಿಸುತ್ತ– 'any practical art, any mechanical of fine art; sixtyfour such are enumerated as carpentering, architecture, jevellary, farriery, acting, dancing, music, medicine, poetry etc' (ಶಿಲ್ಪವಿಕರ್ಮ, ಶಿಲ್ಪ ಕರ್ಮ) ಎಂಬುದಾಗಿ ವಿವರಿಸುತ್ತಾರೆ.[೪] ಇನ್ನು ಭಾರತೀಯ ದರ್ಶನಗಳಲ್ಲಿ ಕಲೆಯ ಕುರಿತಾದ ವ್ಯಾಖ್ಯಾನಗಳನ್ನು

೩. ಡಾ. ಬಿ.ಕೆ. ಹಿರೇಮಠ : ಸೃಷ್ಠಿ, ಪುಟ, ೨೧೨.
೪. ಡಾ.ಬಿ.ಕೆ. ಹೀರೇಮಠ : ಸೃಷ್ಠಿ, ಪುಟ.೨೧೨.

ಇಲ್ಲಿ ಹೇಳಲಾಗಿದೆ. ಋಗ್ವೇದದಲ್ಲಿ ಬರುವ "ಕಲೆ" ಎಂಬ ಪದಕ್ಕೆ ಅಂಶ ಅಥವಾ ಕತೃತ್ವ ಎಂಬುದಾಗಿ ಅರ್ಥೈಸುತ್ತಾರೆ. ಕಲೆ ಎಂದರೆ ದಿವ್ಯಶಕ್ತಿಯ ಅಥವಾ ಪರಮಾತ್ಮನ ಶಕ್ತಿಯ ಒಂದು ಕಿರಣ ಅಥವಾ ಪರಮಾತ್ಮನ ಸೃಷ್ಟ್ಯಾತ್ಮಕ ಶಕ್ತಿಯ ಒಂದು ಅಂಶ ಎಂಬುದೊಂದು ಅಭಿಪ್ರಾಯವಾದರೆ "ಕ" ಕಾರವು ಬ್ರಹ್ಮವಾಚಕ ಆದುದರಿಂದ ಸೃಷ್ಟಿಧರ್ಮವನ್ನು "ಲ" ಕಾರವು ಲಯವನ್ನೂ ಸೂಚಿಸುವುದರಿಂದ ಕಲೆಯು ಸೃಷ್ಟಿ-ಸ್ಥಿತಿ-ಲಲಿತಾ ತ್ರಿಪುರ ಸಂಹಾರರೂಪವಾದುದು ಎಂಬುದು ಇನ್ನೊಂದು ಅಭಿಪ್ರಾಯವಾಗಿದೆ. ಕ-ಲ ಎಂಬಕ್ಷರಗಳಲ್ಲಿ ಲಲಿತಾ ತ್ರಿಪುರ ಸುಂದರಿಯ ಸ್ವರೂಪವು ನಿರ್ದಿಷ್ಟವಾಗಿದೆ. ಶ್ರೀ ವಿದ್ಯೋಪಾಸನೆಯ ಬಹಿರ್ಯಾಗ ಕ್ರಮದಲ್ಲಿ ಚಂದ್ರ ಮಂಡಲದ ಹದಿನಾರು ಕಲೆಗಳನ್ನು ಉಪಾಸನೆ ಮಾಡುವಾಗ ಮುಖ್ಯವಾದುದು ಸಾದಾಖ್ಯ ಕಲೆಯೇ ತ್ರಿಪುರ ಸುಂದರೀ ಸ್ವರೂಪ. ಈ ಹದಿನಾರು ಕಲೆಗಳಿಂದ ನಾಲ್ಕು ನಾಲ್ಕು ಭಾಗಗಳಾಗಿ ಅರವತ್ತು ನಾಲ್ಕು ಕಲೆಗಳೂ ಅಕ್ಷರಗಳು ಹುಟ್ಟಿದವು ಎಂಬುದಾಗಿ ಪ್ರಪಂಚ ಸಾರ, ಮಾತೃಕಾರ್ಣವ ಗ್ರಂಥಗಳು ವಿವರಿಸುತ್ತವೆ.[೫] ಕಲೆಯ ಕುರಿತಾಗಿ ಇನ್ನೂ ಫ್ರೆಂಚ್, ಸ್ಪಾನಿಷ್, ಲಾಟಿನ್ ಬಗೆ ಬಗೆಯ ಅರ್ಥಗಳು ಇದ್ದರೂ ಭಾರತೀಯರ ದೃಷ್ಟಿಯಲ್ಲಿ ವಿದ್ಯೆ ಹಾಗೂ ಕಲೆಗಳ ಗುರಿ ಪರಮಾತ್ಮನನ್ನು ಅರಿಯುವುದು. ಆ ಬಗ್ಗೆ ಜ್ಞಾನ ಮಾಡಿಕೊಡುವುದು ಆಗಿದೆ. "ಕಲಾ" ಎಂಬ ಪದಕ್ಕೆ ಪಂಡಿತರು ನಾನಾ ಅರ್ಥವನ್ನು ಕೊಟ್ಟರೂ ಕಲಾ ಶಬ್ದಕ್ಕೆ ಸಾಮಾನ್ಯವಾದ ಅರ್ಥ ಉಪಾಯ ಅಥವಾ ಕೌಶಲ ನಮ್ಮ ಭಾವನೆಗಳನ್ನು ಆಲೋಚನೆಗಳನ್ನು ಮನಮುಟ್ಟುವ ರೀತಿಯಲ್ಲಿ ತಿಳಿಸಬಹುದೋ ಅಂತಹ ವಿಧಾನವೇ ಕಲೆ ಎನ್ನಬಹುದು.[೬]

ಸುಸ್ಯಾನ್ ಲ್ಯಾಂಗರ್ "ಕಲೆಗಳು ವ್ಯಕ್ತಿ ನಿಷ್ಠವಾದ ವಾಸ್ತವಿಕತೆಯನ್ನು ವಸ್ತುನಿಷ್ಠಗೊಳಿಸುತ್ತದೆ. ನಿಸರ್ಗದ ಬಾಹ್ಯಾನುಭವಗಳನ್ನು ವ್ಯಕ್ತಿಗತವಾನ್ನಾಗಿಸುತ್ತವೆ. ಕಲೆಯಲ್ಲಿ ಶೀಕ್ಷಣ ಎಂದರೆ ಅನುಭೂತಿಗಳ ಶಿಕ್ಷಣ, ಭಾವನೆಗಳ ಶಿಕ್ಷಣ: ಈ ಶಿಕ್ಷಣವನ್ನು ಅಲಕ್ಷ್ಯ ಮಾಡಿದ ಸಮಾಜ ಯಾವುದೇ ರೂಪ, ನಿಯಂತ್ರಣ ಇಲ್ಲದ ಭಾವನೆಯ ವಶವಾಗುತ್ತದೆ. ಕೆಟ್ಟಕಲೆ ಭಾವನೆಯನ್ನು ಹೊಲಗೆಡಿಸುತ್ತದೆ. ಆದ್ದರಿಂದ ಕೆಟ್ಟಕಲೆ ಇರುವುದಕ್ಕಿಂತ ಕಲೆಯೇ ಇಲ್ಲದಿರುವುದು ಉತ್ತಮ."[೭] ಎಂಬ ಹೇಳಿಕೆ ಕಲೆಯ ಕಿರಿತಾದ ನಿಷ್ಠುರ ಹಾಗೂ ಕಳಕಳಿಯನ್ನು ಪ್ರತಿನಿಧಿಸುತ್ತದೆ.

ಶತಮಾನಗಳಿಂದ ಕಲೆಯನ್ನು ಕುರಿತು ನುರಾರು ಹೇಳಿಕೆಗಳು, ವ್ಯಾಖ್ಯಗಳು, ಅಭಿಪ್ರಾಯಗಳು ಬಂದಿವೆ, ಬರುತ್ತಿವೆ. ಹೀಗೆ ಇವುಗಳನ್ನೆಲ್ಲ ಚರ್ಚಿಸುತ್ತ ಹೋದರೆ ಸಾಮಾನ್ಯರಲ್ಲಿ ಗೊಂದಲ ನಿರ್ಮಾಣವಾಗುವಷ್ಟು ಹೇಳಿಕೆಗಳಿವೆ, ವಿಶ್ಲೇಷಣೆಗಳಿವೆ. ಇವುಗಳನ್ನೆಲ್ಲ ಪಕ್ಕಕ್ಕಿಟ್ಟು

---

೫. ಡಾ.ಬಿ.ಕೆ. ಹಿರೇಮಠ : ಸೃಷ್ಠಿ, ಪುಟ.೨೧೨.
೬. ಡಾ.ಬಿ.ಕೆ. ಹಿರೇಮಠ : ಸೃಷ್ಠಿ, ಪುಟ.೨೧೨.
೭. ಡಾ.ಬಿ.ಕೆ. ಹಿರೇಮಠ : ಸೃಷ್ಠಿ, ಪುಟ.೨೧೨.

ಒಟ್ಟಿನಲ್ಲಿ "ಕಲಾವಿದನ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಯನ್ನು ಕಲೆ" ಎಂದು ಸರಳವಾಗಿ ಹೇಳ ಬಹುದೆನಿಸುತ್ತದೆ. ಅದರಂತೆಯೇ ಮುದ ನೀಡುವಂತಹ ಆಕೃತಿಗಳನ್ನು ಸೃಷ್ಟಿಸುವ ಕಲಾತ್ಮಕ ಪ್ರಯತ್ನವೇ ಕಲೆ ಎಂದೆನ್ನಲೂಬಹುದು. ಕಥೆಗಾರ ಯಶವಂತ ಚಿತ್ತಾಲರು ಹೀಗೆ ಹೇಳುತ್ತಾರೆ- "ಕಲೆ ಎಂದರೆ ಮುಖ್ಯವಾಗಿ ನಮ್ಮ ಸುಪ್ತಪ್ರಜ್ಞೆಗೆ ನಾವು ಜಾಗೃತ ಸ್ಥಿತಿಯಲ್ಲಿ, 'ಎಚ್ಚರ'ದ ಸ್ಥಿತಿಯಲ್ಲಿ ಆಕಾರ ಕೊಡುವ ವಿಧಾನ." ಈ ಎಚ್ಚರದ ಅಂಶದಿಂದಾಗಿಯೇ ಅದು ಮಾನವ ಮನಸ್ಸಿನ ಉಳಿದ ಅವಿಷ್ಕಾರಗಳಾದ ಪುರಾಣಗಳು ಕನಸುಗಳು ಹಾಗೂ ನ್ಯೂರೊಸಿಸ್ (ನರವ್ಯಾಧಿ) ಇವುಗಳಿಂದ ಬೇರೆಯಾಗುತ್ತದೆ. ಹೆಸರಾಂತ ಮನಶಾಸ್ತ್ರಜ್ಞ ಕಾರ್ಲ್ ಯೂಂಗನ ಪ್ರಕಾರ ಮನುಷ್ಯನ ಚಿತ್ತ ಎಲ್ಲ ಮಾನವೀಯ ಚಟುವಟಿಕೆಗಳಿಗೆ- ಸಂಸ್ಕೃತಿ ನಾಗರಿಕತೆಗಳಿಗೆ- ಕೇಂದ್ರ ಸ್ಥಾನವಾಗಿದೆ. ಈ ಚಟುವಟಿಕೆಗಳ ಮೂಲಕವಾಗಿಯೇ ಮನುಷ್ಯನ ಜಾಗೃತ ಪ್ರಜ್ಞೆಯು ಸುಪ್ತ ಪ್ರಜ್ಞೆಯ ತತ್ವಗಳನ್ನು ತನ್ನಲ್ಲಿ ನಿರಂತರವಾಗಿ ಅರಗಿಸಿಕೊಳ್ಳುತ್ತ ವಿಕಾಸ ಗೊಳ್ಳುತ್ತದೆ."[೮] ಹೀಗೆ ಕಲೆಯ ಕುರಿತಾದ ಹೇಳಿಕೆಗಳು ನುರಾರು ಬಂದರೂ ಕಲಾವಿದರ ಅಭಿವ್ಯಕ್ತಿಯ ಸ್ವರೂಪವನ್ನು ಬದಲಾವಣೆ ಮಾಡಿಲ್ಲ.

ಅದು ತನ್ನಿಂದ ತಾನಾಗಿಯೇ ಕಾಲಾನುಕ್ರಮವಾಗಿ ಬದಲಾವಣೆಯಾಗುತ್ತ ಕಲೆ ಎಂದರೇನು ? ಎಂಬ ಪ್ರಶ್ನೆಯ ಬಗೆಗೆ ಯಾವುದೇ ರೀತಿಯ ಸ್ಪಂದನೆಯನ್ನು ನೀಡಿಲ್ಲವೆಂಬುದಕ್ಕೆ ಇಂದಿನ ಕಲಾಸೃಷ್ಟಿಗಳೇ ಕಾರಣ. ಚಿತ್ರ ಒಂದು ದೇಶಬದ್ಧ ಕಲೆ ಎಂದೂ ಗುರುತಿಸಲಾಗುತ್ತದೆ. ಅದರಂತೆಯೇ ಸಂಗೀತ ನಾಟಕಗಳನ್ನು ಕಾಲಬದ್ಧ ಎಂದೂ ಗುರುತಿಸುತ್ತೇವೆ.[೯] ಚಲನರಹಿತವಾದ ಚಿತ್ರ ಕಾಲಬದ್ಧ ಕಲೆಗಿಂತ ಪ್ರಭಾವಿ ಎಂಬುದನ್ನು ಪ್ರಪಂಚದಲ್ಲಿ ಪ್ರಮುಖ ಚಿತ್ರ ನೆಲೆಗಳನ್ನು ಆಧರಿಸಿ ಹೇಳಬಹುದಾಗಿದೆ. ಗ್ರೀಕ್ ಕವಿ ಪ್ಲೊಟಾರ್ಕ್ ಅದಕ್ಕೆಂದೇ ಚಿತ್ರವನ್ನು ನಿಶಬ್ದವಾದ ಕವಿತೆ ಎಂದು ವರ್ಣಿಸುತ್ತಾನೆ. ಒಂದು ಚಿತ್ರ ಒಬ್ಬೊಬ್ಬ ನೋಡುಗನಿಗೆ ವೈವಿಧ್ಯಮಯ ಅನುಭವವನ್ನು ನೀಡಬಹುದಾದ ಸಾಧ್ಯತೆಗಳೇ ಹೆಚ್ಚು. ಅದರಲ್ಲೂ ಇತ್ತಿಚೆಗೆ ಆಧುನಿಕ ಚಿತ್ರಗಳ ಒಲವು ವಿಭಿನ್ನ ಅನುಭವಗಳನ್ನು ನೀಡುವಲ್ಲಿ ಮುಂಚೂಣಿಯಲ್ಲಿವೆ.

ನಮ್ಮ ಪ್ರಾಚೀನ ಚಿತ್ರಕಲೆಯ ಸ್ವರೂಪ ಇಂದು ಇಲ್ಲದಿದ್ದರೂ ಸಾಂಪ್ರದಾಯಿಕ ಸಂದರ್ಭದಲ್ಲಿ ಪ್ರಾಚೀನ ಕಲಾ ಶೈಲಿಯನ್ನು ಇಂದಿನ ಆಧುನಿಕ ಸಂದರ್ಬದಲ್ಲಿಯೂ ಆಗಾಗ ಪುನರಾವರ್ತಿಸಿಕೊಳ್ಳುತ್ತೇವೆ. ಹೇಗೆ ಎಂದರೆ ನಮ್ಮ ನಡುವಿನ ಆಧುನಿಕೋತ್ತರ ಕಲಾ ಚಳುವಳಿಯಲ್ಲಿ ಪ್ರಕಟಗೊಳ್ಳುತ್ತಿರುವ ಚಿತ್ರಗಳಲ್ಲಿ ಪ್ರಾಚೀನ ಎನ್ನುವಂತಹ ಸಾಂಪ್ರದಾಯಿಕ ರೂಪಾಂಶಗಳು ವಿಕೃತತೆಯ ರೂಪದಲ್ಲಿ ಆಧುನಿಕ ಸಂವೇದನೆಗಳನ್ನು ಹೊತ್ತು ಬರುತ್ತಿರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣಬಹುದಾಗಿದೆ.

---

೮. ಚಿ.ಸು. ಕೃಷ್ಣಶೆಟ್ಟಿ : ಚಿತ್ರ ಚಿತ್ತ, ಪುಟ ೫೯ ಹೆಚ್ಚಿನ ವಿವರಗಳಿಗೆ ನೋಡಿ.
೯. ಚಿ.ಸು. ಕೃಷ್ಣಶೆಟ್ಟಿ : ಚಿತ್ರಚಿತ್ತ, ಪುಟ.೫೩.

ಬಿ.ಪಿ. ಬಾಯಿರಿಯವರು ನೈಜಕಲೆ (ತದ್ರೂಪ ರಚನೆ)ಯಲ್ಲಿ ಆಸಕ್ತಿಯುಳ್ಳವರಾಗಿದ್ದರು. ತಮ್ಮ ಜೀವನದಲ್ಲಿ ಅವರು ನೈಜಕಲೆಗೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು. ಅದು ಶ್ರೇಷ್ಠವಾದದ್ದು, ಎಂಬುದು ಅವರ ಮಾತು ಅವರು ರಚಿಸಿದ ಚಿತ್ರಗಳಲ್ಲಿ ಹೆಚ್ಚಿನವು ಭಾವಚಿತ್ರ, ದೇವರ ಚಿತ್ರಗಳೆ, "ತೈಲವರ್ಣ" ಇವರ ನೆಚ್ಚಿನ ಬಣ್ಣ ಮಾಧ್ಯಮ ಪ್ರತಿಯೊಂದು ಚಿತ್ರವನ್ನು ರಚಿಸುವಾಗ ಅದು ಯಥಾಪ್ರತಿ ಆಗುವಂತೆ ರಚನೆ ಮಾಡುತ್ತಿದ್ದರು. ಬಣ್ಣಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿದರೂ, ಕೃತಿಯ ಹಾವ, ಭಾವವನ್ನು ಕಂಡು ಕೊಳ್ಳುವುದು ಅವರ ಪ್ರತಿಭೆಯಾಗಿತ್ತು. ಅವರ ಚಿತ್ರಗಳನ್ನು ವಿಕ್ಷಿಸಿದರೆ ಬಣ್ಣಗಳ ಬಳಕೆ ಅತೀ ಮನೋಹರ ಮತ್ತು ನೈಜಕತೆಗೆ ಸಮೀಪವಾಗಿರುತ್ತದೆ. ಕಲಾಕೃತಿಗಳಲ್ಲಿ ಬಣ್ಣಗಳ ಛಾಯೆಯ ಬಳಕೆ ತಿಳಿಯಾದ ಹಾಗೂ ದಪ್ಪವಾದ ಛಾಯೆಯ ಮೂಲಕ ತಮ್ಮ ಕೃತಿ ರಚನೆ ಮಾಡುವುದು ಸಹಜ. ಪಾಶ್ಚಾತ್ಯ ಚಿತ್ರಕಲೆ ತಂತ್ರಗಾರಿಕೆ ಪ್ರಕಾರ ನೆರಳು ಬೆಳಕಿನಡೆಗೆ ಇರುವ ಹೆಚ್ಚಿನ ಗಮನ ಕೊಡಲಿಲ್ಲ. ಆದರೆ ಕಲಾಕೃತಿಯಲ್ಲಿ ಲಾವಣ್ಯವನ್ನು ಮೂಡಿಸುವ ಪ್ರಯತ್ನವನ್ನು ಇವರ ಕಲಾಕೃತಿಯಲ್ಲಿ ಗಮನಿಸಬಹುದು. ಭಾವಚಿತ್ರಗಳ ರಚನೆಯ ಇವರ ನೆಚ್ಚಿನ ವಷಯವಾಗಿದೆ. ಕಾರಣ ಮದ್ರಾಸು ಸೆಂಟರಿನಲ್ಲಿ ತಮ್ಮ ಕಲಾ ಪರೀಕ್ಷೆಯಲ್ಲಿ ಸೆಂಟರಿನಲ್ಲಿ ಅತೀ ಹೆಚ್ಚು ಅಂಕಗಳನ್ನು ಭಾವಚಿತ್ರದಲ್ಲಿ ಪಡದಿದ್ದರು. ಅಂದರೆ ಇವರ ಭಾವಚಿತ್ರ ಕೃತಿಗಳಲ್ಲಿ ಹೇಗೆ ಹಿಡಿತ ಸಾಧಿಸಿದರು ಎಂದು ತಿಳಿಯುತ್ತದೆ. ಉಡುಪಿಯ ಪ್ರತಿಷ್ಠಿತ ವ್ಯಕ್ತಿಗಳ ಭಾವಚಿತ್ರಗಳನ್ನು ಸಾವಿರಾರು ಭಾವಚಿತ್ರಗಳನ್ನು ಕಾಣಬಹುದು.

ಈ ಅಧ್ಯಾಯದಲ್ಲಿ ಭಾವಚಿತ್ರಗಳೂ ಪೂರ್ಣ ಭಾವಚಿತ್ರಗಳೂ ಹಬು ಸಂಖ್ಯೆಯಲ್ಲಿದ್ದು ಪೌರಾಣಿಕ ಚಿತ್ರಗಳು ಇವೆ. ಈ ಹಿನ್ನೆಲೆಯಲ್ಲಿ ಬಾಯಿರಿಯವರು ತಮ್ಮ ಬದುಕಿನುದ್ದಕ್ಕೂ ರಚಿಸಿದ ವರ್ಣಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ ಪ್ರಮುಖವಾಗಿ ಇಲ್ಲಿರುವ ಕಲಾಕೃತಿಗಳು ಭಾವಚಿತ್ರಗಳು, ಪೂರ್ಣಭಾವಚಿತ್ರಗಳು, ಪೌರಾಣಿಕ ಚಿತ್ರಗಳು, ಐತಿಹಾಸಿಕ ವ್ಯಕ್ತಿಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಅಧ್ಯಯನದ ಸ್ಪಷ್ಟತೆಯ ದೃಷ್ಟಿಯಿಂದ ವಿಷಯಕ್ಕೆ ಅನುಗುಣವಾಗಿ ವರ್ಗೀಕರಿಸಿದೆ. ಈ ಕೆಳಗಿನಂತೆ ಮಾಧ್ಯಮವಾರು ಕಲಾಕೃತಿಗಳನ್ನು ಪ್ರತ್ಯೇಕಿಸಿ ಪ್ರತಿ ಕಲಾಕೃತಿಯ ವಿಶ್ಲೇಷಣೆಯನ್ನು ಮಾಡಿ ಕೊನೆಯಲ್ಲಿ ಆಯಾ ಮಾಧ್ಯಮದ ಕಲಾಕೃತಿಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

೧. ಪೌರಾಣಿಕ ಚಿತ್ರಗಳು

೨. ಐತಿಹಾಸಿಕ ವ್ಯಕ್ತಿಗಳ ಚಿತ್ರಗಳು

೩. ಗಣ್ಯವ್ಯಕ್ತಿಗಳ, ಕವಿಗಳ ಚಿತ್ರಗಳು

೪. ಶಿಕ್ಷಣ ತಜ್ಞರ ಚಿತ್ರಗಳು

೫. ಜ್ಞಾನಪೀಠ ಪ್ರಶಸ್ತಿ ವಿಜೇತರ ಚಿತ್ರಗಳು

ಈ ಮೇಲಿನ ವರ್ಗೀಕರಣದಂತೆ ಕಲಾಕೃತಿಗಳ ಅಧ್ಯಯನವನ್ನು ಈ ಮುಂದೆ ಮಾಡಲಾಗಿದೆ.

೧. ಪೌರಾಣಿಕ ಚಿತ್ರಗಳು

ಇತಿಹಾಸದಲ್ಲಿ ಭಾರತ ದೇಶವು ಸಾಂಸ್ಕೃತಿಕವಾಗಿ, ದೈವತ್ವದೊಡನೆ ಬೆಳೆದು ಬಂದ ದೇಶವಾಗಿದೆ. ಇಲ್ಲಿ ಅನೇಕ ದೇವತೆಗಳ ಉತ್ಸವ, ಜಾತ್ರೆ, ಹಬ್ಬ ಹರಿದಿನಗಳು ನಡೆದುಕೊಂಡು ಬಂದಿದ್ದು ಪೂಜೆಗಾಗಿ ದೇವ-ದೇವತೆಯರ ಮೂರ್ತಿಗಳನ್ನು ಚಿತ್ರಪಟಗಳನ್ನು ಪೂಜಿಸುವುದುಂಟು. ಆದರೆ ಸುಮಾರು ೪-೫ ದಶಕಗಳ ಹಿಂದೆ ಬಣ್ಣದ ದೇವರ ಪಟಗಳು ಸಿಗುತ್ತಿರಲಿಲ್ಲ. ಕಲಾವಿದ ಬಾಯರಿಯವರು ಇದನ್ನು ಬಳಸಿಕೊಳ್ಳಲು ದೇವರ ಚಿತ್ರಗಳನ್ನು ರಚಿಸಲು ಮುಂದಾದರು. ಶ್ರದ್ಧೆ, ಭಯ, ಭಕ್ತಿ, ಗೌರವ ಮುಂತಾದ ಗುಣಗಳುಳ್ಳ ವ್ಯಕ್ತಿತ್ವ ಹೊಂದಿರುವ ಇವರು ಅನೇಕ ಪೌರಾಣಿಕ ಹಿನ್ನೆಲೆ ಇರುವ ದೇವರ ಚಿತ್ರಗಳನ್ನು ರಚಿಸಿದ್ದಾರೆ.

ವಜ್ರ ಕವಚದಾರಿ ಶ್ರೀ ಕೃಷ್ಣ -

೧೯೫೮ ರಲ್ಲಿ ಪ್ರಸಿದ್ಧ ಉಡುಪಿಯ ಶ್ರೀಕೃಷ್ಣನ ಮೊಟ್ಟ ಮೊದಲ ಬಣ್ಣದ ಕಲಾಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಚಿತ್ರವನ್ನು ಬಿ. ಪಿ. ಬಾಯಿರಿಯವರು ರಚಿಸಿದ್ದರು. ಅದಕ್ಕಾಗಿ ಸ್ವತಃ ದೇವಾಲಯಕ್ಕೆ ಭೇಟಿ ನೀಡಿ, ಅಲ್ಲಿನ ರೂಪವನ್ನು ಕಂಡು ಮನೆಗೆ ಹಿಂತಿರುಗಿ ತಮ್ಮ ಭಾವನೆಯಲ್ಲಿ ಮೂಡಿದ ಕೃಷ್ಣನ ಕಲಾಕೃತಿ ರಚಿಸಿದ್ದುಂಟು. ಇವರು ಶ್ರೀ ವಜ್ರಕವಚದಾರಿ ಚಿತ್ರದಲ್ಲಿ ಬಂಗಾರದ ಹೊಳಪು ಅತೀ ಸುಂದರವಾಗಿ ಮತ್ತು ನೈಜವಾಗಿ ಕಾಣುತ್ತವೆ. ರವಿವರ್ಮನ ಪೌರಾಣಿಕ ಚಿತ್ರಗಳ ತಳಹದಿಯ ಮೇಲೆ ಈ ಚಿತ್ರಗಳು ಮೂಡಿ ಬಂದಿರುವುದು ಕಾಣುತ್ತವೆ. ಈ ಶ್ರೀಕೃಷ್ಣನ ಚಿತ್ರದಲ್ಲಿ ಬಂಗಾರದ ಹೊಳಪು ಅತೀ ಸುಂದರವಾಗಿ ಮತ್ತು ನೈಜವಾಗಿ ಕಾಣುತ್ತವೆ. ಹಿನ್ನೆಲೆಯ ಅವಕಾಶದಲ್ಲಿ ಅರ್ಧವೃತ್ತಾಕಾರ, ವೃತ್ತಾಕಾರವಾಗಿ, ಚೌಕಾಕಾರದಲ್ಲಿ ಸುತ್ತಲೂ ಪ್ರಭಾವಳಿ ರಚನೆ ಮಾಡಲಾಗಿದ್ದು, ಅದರಲ್ಲಿ ಮೂಡಿ ಬಂದ ಅಲಂಕಾರಿಕ ವಿನ್ಯಾಸ, ಅತೀ ಮನೋಹರವಾಗಿದೆ. ಅಲ್ಲದೇ ಪ್ರತಿಯೊಂದು ವಿನ್ಯಾಸದಲ್ಲಿ ಉಬ್ಬು-ತಗ್ಗುಗಳಲ್ಲಿ ಬಂಗಾರದ ಹೊಳಪು ಅತ್ಯಾಕರ್ಷಕವೆನಿಸಿದೆ. ಇದನ್ನು ಈ ಚಿತ್ರದಲ್ಲಿ ವಿಕ್ಷಿಸಬಹುದು. ಬೆಲೆ ಬಾಳುವ ವಜ್ರ

ಮತ್ತು ಹೂವಿನ ಅಲಂಕಾರ ದೇವರಿಗೆ ಸಮರ್ಪಿಸಿದ ಹೂವು, ಹಣ್ಣು ಹಂಪಲು ಮುಂತಾದವುಗಳನ್ನು ಚಿತ್ರದಲ್ಲಿ ಸೆರೆಹಿಡಿದಿದ್ದಾರೆ.

ಮಧ್ವಪೂಜಿತ ಶ್ರೀಕೃಷ್ಣ

ಬಿ. ಪಿ. ಬಾಯಿರಿಯವರು ಭಾರತೀಯ ಸಾಂಪ್ರದಾಯಿಕ ಶೈಲಿಯನ್ನು ಬಹಳ ಮೆಚ್ಚಿಕೊಂಡಿದ್ದರು. ಈ ಚಿತ್ರವನ್ನು ವಿಕ್ಷಿಸಿದರೆ ಅಜಂತಾದ ಭಿತ್ತಿಚಿತ್ರ ನೆನಪಿಗೆ ಬರುತ್ತದೆ. ಬುದ್ಧನು ಭಿಕ್ಷೆಗಾಗಿ ತನ್ನ ಅರಮನೆಯ ಮುಂದೆ ಬಂದಾಗ ರಾಣಿಯು ಭಿಕ್ಷೆ ಹಾಕಲು ಬಂದು ನೋಡಿ ತನ್ನ ಮಗನಾದ ರಾಹುಲ್‌ನನ್ನೆ ಭಿಕ್ಷೆ ನೀಡುವ ಸಂದರ್ಭದ ಚಿತ್ರದಲ್ಲಿ ಬುದ್ಧನನ್ನು ಬೃಹದಾಕಾರವಾಗಿ ಚಿತ್ರಿಸಿ ರಾಣಿ ಮತ್ತು ಮಗನನ್ನು ಚಿಕ್ಕ ಚಿಕ್ಕ ಆಕಾರದಲ್ಲಿ ಚಿತ್ರಿಸಿದ ಹಾಗೆ ಬಿ. ಪಿ. ಬಾಯಿರಿಯವರು ತಮ್ಮ ಮಧ್ವ ಪೂಜಿತ ಕೃಷ್ಣನ ಚಿತ್ರದಲ್ಲಿ ೧೯೫೮ರಲ್ಲಿ ಅಜಂತಾದ ಭಿತ್ತಿ ಚಿತ್ರದ ಶೈಲಿಗೆ ಹೋಲುವಂತೆ ರಚಿಸಿದ್ದಾರೆ. ಇಲ್ಲಿ ಅವರು ಶ್ರೀಕೃಷ್ಣನ ಆಕಾರವನ್ನು ಬಲು ದೊಡ್ಡದಾಗಿ, ಪೂಜಾರಿಯ ಆಕಾರವನ್ನು ಅತೀ ಚಿಕ್ಕದಾಗಿ ಚಿತ್ರಿಸಿದ್ದಾರೆ. ಶ್ರೀಕೃಷ್ಣನ ದೇಹಕ್ಕೆ ಶ್ಯಾಮ ವರ್ಣವನ್ನು ಮತ್ತು ದೇಹದಲ್ಲಿ ಧರಿಸಿದ ಆಭರಣಗಳನ್ನು ಅತೀ ವಿರಳವಾಗಿ, ಸಾಂಪ್ರದಾಯಿಕ ಶೈಲಿಗೆ ಹೋಲುವಂತೆ ಮಾಡಲಾಗಿದೆ.

ಮುಖ್ಯ ಪ್ರಾಣ ದೇವರು

೧೯೬೮ ರಲ್ಲಿ ಬಾಯಿರಿಯವರು ರಚಿಸಿದ ಮುಖ್ಯಪ್ರಾಣ ದೇವರ ಅವತಾರಗಳ ಕಲಾಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ರಾಮನ ಭಕ್ತನಾದ ಹನುಮಂತ, ಕೃಷ್ಣನ ಭಕ್ತನಾದ ಭೀಮ, ಋಷಿತ್ರಯರ ಭಕ್ತನಾಗಿ ಮಧ್ವಾಚಾರ್ಯ ಹೀಗೆ ತ್ರೇತಾಯುಗ, ದ್ವಾಪರಯುಗ, ಕಲಿಯುಗಗಳನ್ನು ಕಲಾಕೃತಿಯಲ್ಲಿ ಚಿತ್ರಿಸಿ ಇದನ್ನು ಒಬ್ಬ ಸಾಮಾನ್ಯ ವ್ಯಕ್ತಿ ನೋಡಿದಾಗ ಇಲ್ಲಿ ಅವನು ಮೂರು ಅವತಾರಗಳು ಒಟ್ಟಾಗಿ ಕಂಡು ಮುಖ್ಯಪ್ರಾಣ ದೇವರನ್ನು ಮನಗಾಣಬಹುದು. ಈ ಕಲಾಕೃತಿಯಲ್ಲಿ ಗಾಢಬಣ್ಣವನ್ನು ಸರಳವಾಗಿ ಬಾಹ್ಯ ಅಲಂಕಾರಿಕವಾಗಿ ಉಪಯೋಗಿಸಿದ್ದಾರೆ.

ಶ್ರೀ ಮಧ್ವಾಚಾರ್ಯರು

೧೯೫೮ ರಲ್ಲಿ ಶ್ರೀ ಮಧ್ವಾಚಾರ್ಯ ಅನಂತೇಶ್ವರ ದೇವಸ್ಥಾನ ಉಡುಪಿ, ಈ ಕಲಾಕೃತಿಯನ್ನು ರಚಿಸಿದರು. ಈ ಕಲಾಕೃತಿಯಲ್ಲಿ ಕಂದು ಮಿಶ್ರಿತ ಹಳದಿ ಬಣ್ಣವನ್ನು ಬಳಸಲಾಗಿದ್ದು, ಮೂರ್ತಿಯ ಪ್ರತಿಕೃತಿಯಾಗಿದ್ದು ಇಲ್ಲಿ ನೈಜತೆಗೆ ಹೆಚ್ಚು ಒತ್ತು ಕೊಟ್ಟಿರುವುದು ಕಾಣಬಹುದು. ಕಲಾಕೃತಿಯು ತೈಲವರ್ಣದ ಕಲಾಕೃತಿಯಾಗಿದ್ದು ಸುಂದರವಾಗಿ ಮೂಡಿಬಂದಿದೆ. ಹಿನ್ನೆಲೆಯಲ್ಲಿ ಪ್ರಭಾವಳಿಯನ್ನು ರಚಿಸಿದ್ದು ಅದರಲ್ಲಿ ನಕ್ಷೆಗಳನ್ನು ಬಳಸಲಾಗಿದೆ. ಪೀಠದ ಮೇಲೆ ಕುಳಿತಿರುವಲ್ಲಿ ಕಮಲದ ನಕ್ಷೆಯಿರುವದು ಕಂಡು ಬರುತ್ತದೆ.

ಆನೆಗುಡ್ಡೆ ಶ್ರೀ ಪ್ರಸನ್ನ ಸಿದ್ಧಿವಿನಾಯಕ

೧೯೬೫ ರಲ್ಲಿ ರಚಿಸಿದ ಚಿತ್ರದಲ್ಲಿ ವಿಗ್ರಹದ ಬಂಗಾರದ ಹಳದಿ ಮಿಶ್ರಿತ ಕಂದು ಬಣ್ಣದ ಹೊಳಪು ನೋಡುಗರಿಗೆ ಅಚ್ಚರಿಯನ್ನುಂಟು ಮಾಡುತ್ತದೆ. ಕಲಾಕೃತಿ ರಚನೆಯಲ್ಲಿ ವಸ್ತು ವಿಷಯ ಮುಖ್ಯವಾದುದರಿಂದ, ಮಧ್ಯದಲ್ಲಿ ವಿಗ್ರಹದ ಸಂಯೋಜನೆ ಮಾಡಲಾಗಿದೆ. ನಂತರ ಹಿನ್ನೆಲೆಯಲ್ಲಿ ತೂಗು ಉರಿಯುವ ದೀಪ, ಹೂವು, ಕಬ್ಬು ರಚಿಸಿರುವುದು ಇವರ ಕ್ರಮ ನೈಜತೆಯ ಕಲಾಕೃತಿಯ ಪ್ರಧಾನ. ತೆಂಗಿನಕಾಯಿಗಳನ್ನು ಕೆಳಗಡೆ ಸುಂದರವಾಗಿ ರಚಿಸಿದ್ದಾರೆ.

ಉಡುಪಿ ಶ್ರೀ ಶಾರದಾಂಬಾ

೧೯೬೫ ರಲ್ಲಿ ಶ್ರೀ ಶಾರದಾಂಬೆಯ ಬಂಗಾರದ ವಿಗ್ರಹದ ಚಿತ್ರವನ್ನು ರಚಿಸಿದ್ದಾರೆ. ಬಂಗಾರದ ಪ್ರಭಾವಳಿಯನ್ನು ಸಹ ಚಿತ್ರಿಸಿದ್ದು ದೇವಿಯ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಬಳಸಿದ್ದಾರೆ. ಕಲಾಕೃತಿಯಲ್ಲಿ ತದ್ರುಪತೆಯು ಬಹು ಸುಂದರವಾಗಿ ಮೂಡಿಬಂದಿದೆ. ವೀಣೆಯನ್ನು ನುಡಿಸುತ್ತಿರುವ ಶಾರದೆಯು ಕಮಲದ ಪೀಠದ ಮೇಲೆ ಕುಳಿತಿದ್ದಾಳೆ.

ಮುಲ್ಕಿ ಶ್ರೀ ದುರ್ಗಾ ಪರಮೇಶ್ವರಿ

೧೯೫೮ ರಲ್ಲಿ ರಚಿಸಿರುವ ಶ್ರೀ ದುರ್ಗಾ ಪರಮೇಶ್ವರಿ ಚಿತ್ರದಲ್ಲಿ ಸಿಂಹದ ಮೇಲೆ ಕುಳಿತಿರುವ ದುರ್ಗೆಯು ಬಂಗಾರದ ವರ್ಣದಲ್ಲಿ ಮಿಂಚುತ್ತಿದ್ದರೆ ಸಿಂಹವು ಬೆಳ್ಳಿಯ ಬಣ್ಣದಲ್ಲಿ ಚಿತ್ರಿಸಲ್ಪಟ್ಟಿದೆ. ಹಿನ್ನೆಲೆಯಲ್ಲಿ ತುಳಸಿಕಟ್ಟೆಯ ಆಕಾರದಲ್ಲಿ ಇರುವುದು. ಅವಶ್ಯಕತೆಗೆ ತಕ್ಕಷ್ಟೆ ಕೆಂಪು ವರ್ಣ ಹಳದಿ ಮಿಶ್ರಣ ಕೇಸರಿ ಬಿಳಿ ಹಾಗೂ ಕಪ್ಪು ಬಣ್ಣವನ್ನು ಬಳಸಿದ್ದಾರೆ ಕಂದು ಬಣ್ಣದ ಹಿನ್ನೆಲೆ ಬಳಸಿರುವುದು ಕಂಡುಬರುತ್ತದೆ.

ಶ್ರೀ ಚಂಡಿಕಾಂಬಾ ಬಾಳೆ ಬರೆ

೧೯೫೮ ರಲ್ಲಿ ರಚಿಸಿದ ಈ ವರ್ಣಚಿತ್ರದಲ್ಲಿ ದೇವಿಯ ಸಾಮಾನ್ಯ ವರ್ಣಗಳನ್ನು ಬಳಸಲಾಗಿದೆ. ಮೂಲ ವರ್ಣಗಳಿದ್ದರೂ ಅನ್ನಿಸದಿರುವುದೇ ಕಲಾಕೃತಿಯ ತಂತ್ರಗಾರಿಕೆಯ ಕಲಾವಿದನ ಜಾಣ್ಮೆ ಎದ್ದು ಕಾಣಿಸುತ್ತದೆ. ಸಂಯೋಜನೆಯ ಮೇಲಿನ ಪಟ್ಟಿಕೆಯೊಳಗೆ ಚಿತ್ರಿತವಾದ ದೇವಿಯ ಕ್ರೂರತನವನ್ನು ಮತ್ತು ಅವಳ ಸ್ವಭಾವವನ್ನು ಬಿಂಬಿಸುತ್ತದೆ. ಸಾಂಕೇತಿಕತೆಯೇ ಈ ಚಿತ್ರದ ಒಳತಿರುಳು. ಈ ಕಲಾಕೃತಿಯಲ್ಲಿ ಮೂಲವರ್ಣಗಳೇ ಪ್ರಧಾನ.

ಶ್ರೀ ಕೊಲ್ಲೂರ ಮೂಕಾಂಬಿಕಾ ದೇವಿ

೧೯೬೭ ಮತ್ತು ೧೯೬೪ ರಲ್ಲಿ ಕೊಲ್ಲೂರು ಶ್ರೀ ಮೂಕಾಂಬಿಕಾದೇವಿ ಚಿತ್ರವನ್ನು ರಚಿಸಿದ್ದು ಕಲಾಕೃತಿಯು ಆಯುತಾಕಾರದಲ್ಲಿದ್ದು ಈ ಕಲಾಕೃತಿಯಲ್ಲಿ ಬಣ್ಣಗಳನ್ನು ದಪ್ಪವಾಗಿ, ಹಂತವಾಗಿ ಪದರ ಪದರಾಗಿ ಬಳಸಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಚಿತ್ರದಲ್ಲಿ ಹಳದಿ ಕೆಂಪು ಹಸಿರು ಬಿಳಿ ಬಣ್ಣಗಳ ಬಳಕೆ ಹೆಚ್ಚಾಗಿದೆ. ವಿಗ್ರಹವು ವರ್ಣರಂಜಿತ ವಾಗಿರುವುದರಿಂದ ಸುಂದರವಾಗಿ ಕಾಣುತ್ತದೆ. ಹಿನ್ನೆಲೆಯಲ್ಲಿ ಕಪ್ಪು ವರ್ಣವೇ ಪ್ರಧಾನ ದೇವಿಯ ಹಿಂದಿನ ಮಲ್ಲಿಗೆ ಹೂವಿನ ಪ್ರಭಾವಳಿ ಸುಂದರವಾಗಿ ಮೂಡಿ ಬಂದಿದೆ. ದೀಪಗಳ ಸಾಲು, ಬಣ್ಣಗಳ ಸಂಯೋಜನೆ ಇಂತಹ ರಚನಾ ಕ್ರಮವನ್ನು ಬಾಯಿರಿಯವರು ವಿಶೇಷವಾಗಿ ಬಣ್ಣಗಳ ಮುಖಾಂತರವೇ ಚಿತ್ರದ ಉದ್ದೇಶವನ್ನು ಹೇಳಬೇಕಾದಲ್ಲಿ ಸಂಯೋಜನೆಯನ್ನು ವಿಂಗಡಿಸುವ ಕ್ರಮಕ್ಕೆ ಮುಂದಾಗುತ್ತಾರೆ. ಎನ್ನುವ ಅಂಶವನ್ನು ಇಂತಹ ಕಲಾಕೃತಿಗಳಿಂದ ತಿಳಿದು ಬರುತ್ತದೆ.

ಗೌತಮ ಬುದ್ಧ

೧೯೫೯ ರಲ್ಲಿ ರಚಿಸಿದ್ದ ಗೌತಮ ಬುದ್ಧ, ಕಲಾಕೃತಿಯಲ್ಲಿ ಜ್ಞಾನೋದಯದ ದೃಶ್ಯವನ್ನು ಚಿತ್ರಿಸಿ, ಹಿನ್ನೆಲೆಯಲ್ಲಿ ತಮ್ಮ ಕಲ್ಪನೆಯಿಂದ ಬೋಧಿವೃಕ್ಷ ಮತ್ತು ಪ್ರಾಣಿಗಳನ್ನು ರಚಿಸಿದ್ದಾರೆ. ಬಾಯಿರಿಯವರು ತಮ್ಮ ಈ ಚಿತ್ರದಲ್ಲಿ ಬುದ್ಧನ ಪ್ರಶಾಂತ ಭಾವದ ಮುಖ, ಜ್ಞಾನದ ಸಂಕೇತದ ಕೈಗಳನ್ನು ಪದ್ಮಾಸನ ಭಂಗಿಯನ್ನು ತುಂಬಾ ಆಕರ್ಷಿತವಾಗಿ ಚಿತ್ರಿಸಿದ್ದು, ಇದು ಬಾಯಿರಿಯವರ ಕೆಲವು ಕಪ್ಪು ಬಿಳುಪು ಚಿತ್ರಗಳಲ್ಲಿ ಅತ್ಯುತ್ತಮ ಉದಾಹರಣೆ. ಬುದ್ಧನ ಮುಖಭಾವ ದೇಹದ ಮೇಲೆ ಪ್ರಕಾಶಮಾನವಾದ ಬೆಳಕು ಬಿದ್ದಿವೆ. ಹಿನ್ನೆಲೆಯಲ್ಲಿರುವ ಪ್ರಾಣಿಗಳನ್ನು ಬೋಧಿವೃಕ್ಷವನ್ನು ಅಸ್ಪಷ್ಟ ಆಕೃತಿ ಇದೆ.

ಶ್ರಿ ಕೃಷ್ಣ ರಥೋತ್ಸವ

೧೯೫೯ ರಲ್ಲಿ ರಚಿತವಾದ ಶ್ರಿ ಕೃಷ್ಣ ರತೋತ್ಸವದ ದೃಶ್ಯ ತುಂಬಾ ಸುಂದರವಾಗಿ ಮೂಡಿ ಬಂದಿದೆ. ರಥ ಬೀದಿಯಲ್ಲಿ ಮೆರವಣಿಗೆಗೆ ಸಿದ್ದವಾಗಿ ಹೋಗುತ್ತಿರುವ ಚಿತ್ರದಲ್ಲಿ ಮೂರು ರಥಗಳನ್ನು ರಚಿಸಿದ್ದು ಸಾವಿರಾರು ರಥೋತ್ಸವದಲ್ಲಿ ಸೇರಿರುವುದನ್ನು ಚಿತ್ರಿಸಲಾಗಿದೆ. ವಿದ್ಯುತ್ ಅಲಂಕಾರ ಇಲ್ಲದೇ ಬೆಂಕಿಯ ಪಂಜಗಳನ್ನು ಆಗ ಉಪಯೋಗಿಸಿರುವುದನ್ನು ಬಳಸಿದ್ದಾರೆ. ಅವುಗಳನ್ನು ಸರಳ ಸಂಯೋಜನೆಯನ್ನು ಸುಂದರವಾಗಿ ರಚಿಸಿದ್ದಾರೆ. ಒಂದೇ ರೀತಿಯ ಆಳದ ಭ್ರಮೆಯನ್ನು ನೀಡುವ ಈ ಚಿತ್ರ ನೋಡುಗರಿಗೆ ಲಯದ ಅಥವಾ ಮನಸ್ಸಿಗೆ ಸಂಭ್ರಮದ ಸ್ಫೂರ್ತಿಯೊಂದಿಗೆ ಮತ್ತೆ ಮತ್ತೆ ಚಿತ್ರವನ್ನು ನೋಡಬೇಕೆಂಬ ಹಂಬಲವನ್ನು




ವಜ್ರ ಕವಚಧಾರಿ ಶ್ರೀ ಕೃಷ್ಣ



ಮದ್ವ ಪೂಜಿತ ಶ್ರೀ ಕೃಷ್ಣ



ಮುಖ್ಯ ಪ್ರಾಣದೇವರು



ಆನೆಗುಡ್ಡೆ ಶ್ರೀ ಪ್ರಸನ್ನ ಸಿದ್ದಿವಿನಾಯಕ




ಉಡಪಿ ಶ್ರೀ ಶಾರಾದಾಂಬಾ



ಶ್ರೀ ಮದ್ವಾಚಾರ್ಯರು



ಮುಲ್ಕಿ ಶ್ರೀ ದುರ್ಗಾಪರಮೇಶ್ವರಿ



ಶ್ರೀ ಚಂಡಿಕಾಂಬಾ ಬಾಳೆಬರೆ



ಗೌತಮ ಬುದ್ಧ



ಶ್ರೀ ಕೊಲ್ಲೂರ ಮೂಕಾಂಬಿಕೆದೇವಿ



ಉಡುಪಿ ಶ್ರೀ ಕೃಷ್ಣ ರಥೋತ್ಸವ

ಹುಟ್ಟುಹಾಕುತ್ತದೆ. ಬಾಯಿರಿಯವರು ಕೇವಲ ಆಕೃತಿ ಸಮೀಪದ ಚಿತ್ರಗಳನ್ನು ರಚಿಸಲು ತೋರಿಸಿದ ಆಸಕ್ತಿಯನ್ನೇ ಇಲ್ಲಿ ಇನ್ನೂ ಸುಂದರವಾಗಿ ಚಿತ್ರಿಸಲು ತೋರಿಸಿದ್ದಾರೆ.

೨. ಐತಿಹಾಸಿಕ ವ್ಯಕ್ತಿಗಳ ಚಿತ್ರಗಳು

ಕವಿ ಸರ್ವಜ್ಞ

ಬಾಯಿರಿಯವರ ಪ್ರಾರಂಭದ ವ್ಯಕ್ತಿಗಳ ಚಿತ್ರಗಳಲ್ಲಿ ಬಾಹ್ಯ ಚಹರೆಗಳಿಗೆ ಹೆಚ್ಚಿನ ಒತ್ತು ನೀಡಿದ್ದನ್ನು ಇಲ್ಲಿ ಕಲಾಕೃತಿಗಳಲ್ಲಿ ಕಾಣುತ್ತೇವೆ. ಹೆಚ್ಚಿನ ವಿವರಕ್ಕೆ ನಿಲುಕುವ ರೀತಿಯಲ್ಲಿ ರಚಿಸಲಾದ ಈ ಚಿತ್ರದಲ್ಲಿ ಕುಂಚದ ಬೀಸುಗಳು ನಿಯಮಿತವಾಗಿ ಓಡಾಡಿವೆ. ಚಿತ್ರದ ವರ್ಣಗಳು ರೂಪದರ್ಶಿಯ ವರ್ಣಗಳಿಗೆ ಹತ್ತಿರವಾಗುವ ಆಶಯದ ಪ್ರಯತ್ನ ಇಲ್ಲಿದೆ. ಹಿನ್ನೆಲೆಯ ದಟ್ಟ ವರ್ಣ ಪಶ್ಚಿಮ ದೇಶದ ಭಾವಚಿತ್ರಗಳ ಹಿನ್ನೆಲೆಯನ್ನು ನೆನಪಿಸುತ್ತವೆ. ಭಾವಚಿತ್ರವೂ ಸಹಿತ ಪಶ್ಚಿಮ ಶೈಲಿಯನ್ನು ಅನುಸರಿಸಿದರೂ ಅಲ್ಲಿನ ರಮಣೀಯ ಸೆಳಕುಗಳು ಇಲ್ಲಿನ ಕುಂಚದ ರಮಣೀಯ ಸೆಳಕುಗಳು ಇಲ್ಲಿವೆ. ಇಲ್ಲಿನ ಕುಂಚದ ಬೀಸುಗಳು ಮುಖದ ಉಬ್ಬು ತಗ್ಗುಗಳ ಅಕಾಡಮಿಕ್ ಶೈಲಿಯನ್ನು ಹೊಂದಿರುವ ಬಗೆಯಲ್ಲಿವೆ. ತೆಳು ವರ್ಣದ ಹಿನ್ನೆಲೆಯಲ್ಲಿ ಸರ್ವಜ್ಞನ ವಿಶಾಲ ಮುಖಭಾವವು ಗೋಚರಿಸುತ್ತದೆ. ಅವನ ವ್ಯಕ್ತಿತ್ವವನ್ನು ತಿಳುವರ್ಣಗಳಲ್ಲಿ ತೋರಿಸಲಾಗಿದೆ. ಹಸನ್ಮುಖಿಯಾಗಿರುವ ಮುಖಭಾವ ವರ್ಣ ಈ ಕಲಾಕೃತಿಯಲ್ಲಿ ತೆಳು ವರ್ಣಗಳನ್ನೆ ಹೆಚ್ಚು ಬಳಸಲಾಗಿದೆ.

ಮಹಾಕವಿ ಕುಮಾರವ್ಯಾಸರು

ಕುಮಾರವ್ಯಾಸನ ಈ ಚಿತ್ರದಲ್ಲಿ ಹಿನ್ನೆಲೆಯನ್ನು ಬಿಳಿ ವರ್ಣಗಳಿಂದ ತುಂಬಿಸಿದ್ದು ಪದ್ಮಾಸನ ಬಂಗಿಯಲ್ಲಿ ಕುಳಿತು ಕಾವ್ಯ ರಚನೆಯಲ್ಲಿ ನಿರತರಾಗಿರುವ ಕವಿ ಕುಮಾರವ್ಯಾಸನನ್ನು ಚಿತ್ರಿಸಲಾಗಿದ್ದು ತುಂಬಾ ನಿಧಾನಗತಿಯಲ್ಲಿ ರಚಿಸಿರುವ ಸಾಧ್ಯತೆಗಳನ್ನು ಈ ಚಿತ್ರದ ಗುಣಗಳೇ ಹೇಳುತ್ತವೆ. ಕುಂಚದ ಬೀಸುಗಳು ಚಿತ್ರಕ್ಕೆ ಹೆಚ್ಚಿನ ಜೀವಂತಿಕೆಯ ಭಾವವನ್ನು ತುಂಬುವೆ. ಹಿನ್ನೆಲೆಯಲ್ಲಿ ಏಕ ರೀತಿಯ ವರ್ಣವು ಚಿತ್ರದಲ್ಲಿನ ಕಾಂತಿಯುಕ್ತ ಮುಖದ ಭಾವನೆಗೆ ತಕ್ಕಂತೆ ಸಾಗಿರುವುದು ಕಂಡು ಬರುತ್ತದೆ.

ಆದಿಕವಿ ಪಂಪ

ಭಾರತೀಯ ವರ್ಣಗಳ ರಚನಾ ತಂತ್ರವನ್ನು ನೆನಪಿಸುವ ಈ ಚಿತ್ರ ಬಾಯಿರಿಯವರ ಚಿತ್ರ ರಚನಾ ಕೌಶಲ್ಯಕ್ಕೆ ಉತ್ತಮ ಉದಾಹರಣೆ ಸದೃಡ ಕಾಯದ ದೇಹವನ್ನು ಮುಖದಲ್ಲಿರುವ ವರ್ಣಗಳಿಗೆ ಪೂರಕವಾದ ಹಿನ್ನೆಲೆ ಚಿತ್ರಕ್ಕೆ ಮೃದುವಾದ ಭಾವವನ್ನು ತುಂಬಿವೆ. ಈ ರೀತಿಯ

ರಚನಾ ತಂತ್ರಗಳು ಬಾಯಿರಿಯವರ ಚಿತ್ರರಚನೆಯ ಮೂಲ ತಿರುಳು. ಹಿನ್ನೆಲೆಯ ವಸ್ತುಗಳನ್ನು ಮಬ್ಬಾಗಿ ಚಿತ್ರಿಸಿದ್ದು ಕಂಡು ಬರುತ್ತದೆ.

ಕನಕದಾಸರು

ಕನಕದಾಸರ ಈ ಚಿತ್ರದಲ್ಲಿ ಶ್ರೀಕೃಷ್ಣನ ಪರಮ ಭಕ್ತನನ್ನಾಗಿ ನಿರುಪಿಸಿರುವುದು ಕಂಡು ಬರುತ್ತದೆ. ಸರಳ ವ್ಯಕ್ತಿ ಚಿತ್ರಣ ರಚಿಸಿದ್ದು ಕಡಗೋಲು ಕೃಷ್ಣನನ್ನು ಹಿನ್ನೆಲೆಯಲ್ಲಿ ಕಪ್ಪು ಬಣ್ಣದಲ್ಲಿ ರಚಿಸಿದ್ದಾರೆ. ಬಹುಶಃ ಕನಕನ ಕಿಂಡಿಯನ್ನಾಗಿ ಈ ಚಿತ್ರದಲ್ಲಿ ಬಾಯಿರಿಯವರು ತೋರಿಸಿರುವುದು ಕಂಡು ಬರುತ್ತದೆ. ಕನಕದಾಸನ ಭಾವಕ್ಕೆ ಸರಿಸಮಾನವಾದ ಉಡುಪುಗಳನ್ನು ತುಂಬಿ ಸರಳವಾಗಿ ವಿವರ ಪೂರ್ಣವಾಗಿ ರಚಿಸುವಲ್ಲಿ ಕೌಶಲ್ಯ ಆಸಕ್ತಿಯನ್ನು ಅನಾವರಣಗೊಳಿಸಿದ್ದಾರೆ.

ಸಂತ ಶಿಶುನಾಳ ಶರೀಫರು

ಈ ಚಿತ್ರದಲ್ಲಿ ಉತ್ತರ ಕರ್ನಾಟಕದ ವೇಷಭೂಷಣದಲ್ಲಿ ಶಿಶುನಾಳ ಶರೀಫರನ್ನು ಚಿತ್ರಿಸಿದ್ದು ಹಿನ್ನೆಲೆಯಲ್ಲಿ ಬಯಲನ್ನು ತೋರಿಸಿದ್ದಾರೆ. ಅಲ್ಲಿ ಕೆಲವೇ ವರ್ಣಗಳಿದ್ದು, ಕಲಾಕೃತಿಯು ಜಲವರ್ಣದಲ್ಲಿ ರಚಿತವಾಗಿದೆ. ಬಾಹ್ಯ ರೇಖೆಗಳನ್ನು ಹಾಕಲಾಗಿದ್ದು ಇಲ್ಲಿ ಕಂಡು ಬರುತ್ತದೆ.

ಕವಿ ಲಕ್ಷ್ಮೀಶ

ವ್ಯಕ್ತಿಗಳ ಚಿತ್ರಣದಲ್ಲಿ ಸಿದ್ಧಹಸ್ತರಾದ ಬಾಯಿರಿಯವರು ಹಿಂದಿನ ಕಲಾಕೃತಿಗಳ ಪುನರಾವರ್ತಿಸಿಕೊಂಡ ಚಿತ್ರವಿದು. ವಿವರವಾದ ಗುಣಗಳು ಈ ಕಲಾಕೃತಿಯಲ್ಲಿವೆ. ನೆರಳು ಬೆಳಕು ವ್ಯತ್ಯಾಸಗಳಿಗೆ ತಕ್ಕಂತೆ ವರ್ಣದಲ್ಲೂ ಮೂಡಿರುವುದು ೧೯೬೦ ರಲ್ಲಿ ರಚಿಸಿರುವ ಕಲಾಕೃತಿಯಲ್ಲಿ ಮೂಡಿರುವ ಕವಿ ಲಕ್ಷ್ಮೀಶನ ಚಿತ್ರವು ಪುಸ್ತಕದ ಮುಖಪುಟ ರಚನೆಗಾಗಿ ಸಿದ್ದಗೊಂಡಿರುವ ಚಿತ್ರವಾಗಿದೆ. ಜೀವಂತಿಕೆಯ ಬಣ್ಣದ ರೇಖೆಗಳೆ ಚಿತ್ರದ ಜೀವಾಳ. ಪ್ರಖರ ವರ್ಣಗಳು ಇಲ್ಲಿ ಸೌಮ್ಯ ವರ್ಣಗಳಾಗಿ ಸಂಯೋಜನೆ ಗೊಂಡಿರುವುದು ಕಂಡು ಬರುತ್ತದೆ.

ತ್ಯಾಗ ರಾಜರು

ಪಿ. ಆರ್. ತಿಪ್ಪೇಸ್ವಾಮಿಯವರ ಅಭಿಪ್ರಾಯದಂತೆ ಬಾಯಿರಿಯವರ ಚಿತ್ರಗಳಲ್ಲಿ ಜನಸಾಮಾನ್ಯರ ಅಭಿರುಚಿಗಳನ್ನು ಮನಗೊಂಡು ಚಿತ್ರಿಸಿದ ಚಿತ್ರಗಳಿಂದ ಬಿ. ಪಿ. ಬಾಯಿರಿಯವರ ಹೆಸರು ಬಂದಿದ್ದು ಎಲ್ಲಾ ತರಹದ ಕಲಾಕೃತಿಗಳ ಬಗ್ಗೆ ಸರಾಗವಾಗಿ ಮಾತನಾಡಲು ಚಿತ್ರಿಸಲು ಬಲ್ಲವರಾಗಿದ್ದ ಬಿ. ಪಿ. ಬಾಯಿರಿಯವರು ಸಮಾಜಕ್ಕೆ ಬೇಕಾಗುವ ಕಲಾಕೃತಿಗಳಲ್ಲಿ ಹೆಚ್ಚು



ಕವಿ ಸರ್ವಜ್ಞರು



ಮಹಾಕವಿ ಕುಮಾರವ್ಯಾಸರು



ಆದಿಕವಿ ಪಂಪ



ಶ್ರೀ ಕನಕದಾಸರು







ಸಂತ ಶಿಸುನಾಳ ಸರೀಫ್‌ರು



ಕವಿ ಲಕ್ಷ್ಮೀಶ



ಕವಿ ಕುಮಾರವ್ಯಾಸರು



ತ್ಯಾಗರಾಜರು

ಒತ್ತು ಕೊಟ್ಟಿದ್ದನ್ನು ಕಾಣಬಹುದು. ಆದರೆ ಈ ರೀತಿಯ ಬೆಳವಣಿಗೆಯು ಹಿನ್ನೆಲೆಯನ್ನು ನಾವು ಸೂಕ್ಷ್ಮವಾಗಿ ಅವಲೋಕಿಸುವ ಅಗತ್ಯತೆ ಇದ್ದರೂ ನಿರ್ದಿಷ್ಟ ಕಾರಣವನ್ನು ಈ ರೀತಿಯಾಗಿಯೇ ಹೇಳಬಹುದು. ತ್ಯಾಗರಾಜರ ಈ ಚಿತ್ರವು ಸರಳ ದೇಹ ರಚನೆಯಿಂದ ಹೊಂದಿದ್ದು ವೀಣೆಯನ್ನು ಹಿಡಿದುಕೊಂಡು ತ್ಯಾಗರಾಜರು ದೇವರ ಧ್ಯಾನದಲ್ಲಿ ಮಗ್ನರಾಗಿರುವುದನ್ನು ತೋರಿಸಲಾಗಿ ಹಿನ್ನೆಲೆಯಲ್ಲಿ ಗಾಢ ಕಪ್ಪು ವರ್ಣಗಳನ್ನು ಬಳಸಿದ್ದಾರೆ. ದೇಹ ರಚನೆ ವಯಸ್ಸಿಗನುಗುಣವಾಗಿ ತೋರಿಸಲಾಗಿದ್ದು ತಂತ್ರವು ತುಂಬಾ ಸುಂದರವಾಗಿದೆ.

೩. ಗಣ್ಯವ್ಯಕ್ತಿಗಳ ಕವಿಗಳ ಚಿತ್ರಗಳು

ಪೋಟೋಗ್ರಾಫಿಯ ಅನ್ವೇಷಣೆಯ ಮೊದಲಿಗೆ ಭಾವಚಿತ್ರಗಳು ಹೆಚ್ಚು ರೂಢಿಯಲ್ಲಿದ್ದವು ರಾಜ ಮಹಾರಾಜರ, ರಾಣಿಯರ, ಸೈನ್ಯಾಧಿಕಾರಿಗಳ, ಅಧಿಕಾರಿ ಈ ಮುಂತಾದ ಸಮಾಜದ ಉನ್ನತ ವರ್ಗದವರು ಮಾತ್ರ ಹಣ ತೆತ್ತು ತಮ್ಮ ಭಾವಚಿತ್ರವನ್ನು ಕಲಾವಿದನಿಂದ ಬರೆಯಿಸಿ ಕೊಳ್ಳುತ್ತಿದ್ದರು. ರೆನಾಯಸಾನ್ಸ ಕಾಲದಿಂದ ಯೂರೋಪ್ ಹಾಗೂ ಅಮೇರಿಕೆಯ ದೇಶದಲ್ಲಿ ಈ ಪ್ರಕಾರ (Genve) ರೂಢಿಗೆ ಬಂದಿತು. ಭಾವ ಚಿತ್ರ ವ್ಯಕ್ತಿಯು (Model) ತದ್ರೂಪ ಚಿತ್ರಣಕ್ಕೆ ಸಹಾಯಕವಾಯಿತು

ಕಲಾವಿದರು ತಮ್ಮ ನೆಂಟರಿಷ್ಟರನ್ನು ಅನೇಕ ಬಾರಿ ಚಿತ್ರಿಸಿದ್ದುಂಟು ಇಂಪ್ರೆಷಿಯನಿಸಂ ಕಾಲದಲ್ಲಿ ಹಿಂದೆಂದೂ ಆಗಿರದಷ್ಟು ವಿಪುಲವಾಗಿ ಸ್ನೇಹಿತರ, ಕಲಾವಿದರ, ಕಲಾವಿದೆಯರ ಸ್ನೇಹಿತರ, ಪತ್ನಿ-ಮಕ್ಕಳ ಭಾವಚಿತ್ರಗಲೂ ಮೂಡಿಬಂದವು ಅಲ್ಲದೇ ಸ್ವಚಿತ್ರ, ಗಣ್ಯವ್ಯಕ್ತಿಗಳ, ಕವಿಗಳ ಚಿತ್ರ, ಸ್ವತಂತ್ರ ಹೋರಾಟಗಾರರ ಚಿತ್ರಗಳನ್ನು ಕೂಡಾ ಬಿ. ಪಿ. ಬಾಯಿರಿಯವರು ರಚಿಸಿದರು.

ಸರದಾರ ವಲ್ಲಭಾಯಿ ಪಟೇಲ್

ಈ ಭಾವಚಿತ್ರಣವನ್ನು ೧೯೫೭ ರಲ್ಲಿ ಬಾಯಿರಿಯವರು ರಚಿಸಿದ್ದು ಭಾವಚಿತ್ರವನ್ನು ತುಂಬಾ ಏಕತಾನತೇಯ ಮೇಲೆ ರಚಿಸಿದ ಸಾಧ್ಯತೆಗಳನ್ನು ಈ ಚಿತ್ರದ ಗುಣಗಳೇ ಹೇಳುತ್ತವೆ. ತೆಳುವಾದ ಕುಂಚದ ಬೀಸುಗಳು ಚಿತ್ರಕ್ಕೆ ಹೆಚ್ಚಿನ ಜೀವಂತಿಕೆಯ ಭಾವವನ್ನು ತುಂಬಿವೆ. ಭಾವಚಿತ್ರವೇ ವ್ಯಕ್ತಿಯ ವಯೋಮಾನವನ್ನು ಹೇಳುವ ಸಾಮರ್ಥ್ಯವನ್ನು ಪಡೆದಿರುವುದೂ ಈ ಚಿತ್ರದ ವಿಶೇಷತೆ. ಪಟೇಲರ ಬಾಹ್ಯ ಚಹರೆಯನ್ನು ಸೆರೆಹಿಡಿಯಲು ಪ್ರಯತ್ನಿಸಿ ಹಿಂದಿನ ಚಿತ್ರದಂತಹ ಹಿನ್ನೆಲೆ ಬದಲಾವಣೆಯ ಗತಿಯನ್ನು ಪಡೆದಿದೆ. ಅಲ್ಲಿನ ದಟ್ಟತೆ ಇಲ್ಲಿ ತೆಳು ವರ್ಣವನ್ನು ಕಂಡಿವೆ. ಹಿನ್ನೆಲೆಯಲ್ಲಿ ಏಕ ರೀತಿಯ ವರ್ಣವು ಭಾವಚಿತ್ರದ ಮುಖವನ್ನು ಮೃದುತ್ವದ ಭಾವನೆಯನ್ನು ತರಲು ಸಹಕರಿಸಿದೆ. ಕುಂಚದ ಬೀಸುಗಳು ಮುಖದಲ್ಲಿನ

ಚರ್ಮದ ಸುಕ್ಕುಗಳ ಗತಿಗೆ ಪೂರಕವಾಗಿಯೇ ಸಾಗಿರುವುದರಿಂದ ಭಾವಚಿತ್ರ ವಾಸ್ತವಕ್ಕೆ ಹತ್ತಿರವಾಗುತ್ತದೆ. ಹಿನ್ನಲೆಯಲ್ಲಿ ತಿಳಿ ಹಳದಿ ಬಣ್ಣವನ್ನು ತುಂಬಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ

ಬಾಯಿರಿಯವರು ಈ ವರ್ಣಚಿತ್ರದಲ್ಲಿ ಮಹಾತ್ಮಾ ಗಾಂಧೀಜಿಯವರ ಚಿತ್ರವನ್ನು ಪೂರ್ಣ ಭಾವಚಿತ್ರದಲ್ಲಿ ರಚಿಸಿದ್ದು, ಗಾಂಧೀಜಿಯ ಮುಗ್ಧತನವನ್ನು ಮಿತವಾದ ವರ್ಣಗಳ ಪ್ಯಾಚ್‌ಗಳನ್ನು ಏಕರೀತಿಯಿಂದ ದುಡಿಸಿಕೊಳ್ಳಲಾಗಿರುವುದರಿಂದ ಗಾಂಧೀಜಿಯ ಮುಖಭಾವಗಳು ಇಲ್ಲಿ ಮೃದುವಾಗಿ ಮೂಡಿವೆ. ಅಂಗಾಂಗಗಳ ರಚನೆಯನ್ನು ನೆರಳು ಬೆಳಕಿನ ಮೂಲಕ ಸ್ಪಷ್ಟಪಡಿಸಲಾಗಿದೆ. ಗಾಂಧೀಜಿಯ ವರ್ಣಮೇಳಕ್ಕೆ ಹೊಂದುವಂತೆ ಹಿನ್ನೆಲೆಯನ್ನು ಅಸ್ಪಷ್ಟ ಬೀಸುಗಳ ಮುಖಾಂತರ ಪಾರದರ್ಶಕವಾಗಿ ರಚಿಸಿದ ಕ್ರಮ ಇಲ್ಲಿದೆ. ಮುಖದ ನೆರಳಿನಲ್ಲಿ ಉಡುಪು ಮತ್ತು ಹಿನ್ನೆಲೆಯ ಪ್ರತಿಫಲನಗಳು ಸೂಕ್ಷ್ಮವಾಗಿ ಮೂಡಿರುವುದು ಈ ಪೂರ್ಣಭಾವಚಿತ್ರದ ಉತ್ತಮ ಗುಣವಿಶೇಷಣಗಳಲ್ಲಿ ಒಂದು.

ರವಿಂದ್ರನಾಥ ಟ್ಯಾಗೂರ

ಕಾವಿ ಬಟ್ಟೆಯನ್ನು ತೊಟ್ಟು ಕುಳಿತಿರುವ ಶ್ವೇತವರ್ಣದ ಕೂದಲು ತೀಕ್ಷ್ಣ ನೋಟಹೊಂದಿರುವ ರವಿಂದ್ರನಾಥ ಟ್ಯಾಗೂರರ ಚಿತ್ರ ೧೯೫೬ ರಲ್ಲಿ ರಚನೆಯಾಗಿದೆ. ಇದು ಬಾಯಿರಿಯವರ ಮುಕ್ಕಾಲು ದೇಹದ ಭಾವಚಿತ್ರಗಳಲ್ಲಿ ಪಕ್ವಯುತವಾದ ಅಕಾಡಮಿಕ್ ಸತ್ವಗಳನ್ನು ಒಳಗೊಂಡ ಉತ್ತಮ ಕೃತಿ. ವಿವರವಾದ ಭಾವಚಿತ್ರ ರಚನೆಯ ತತ್ವಗಳನ್ನು ಯಥಾವತ್ತಾಗಿ ಪಾಲಿಸಲಾದ ಕಲಾಕೃತಿ ಇದು. ತೈಲವರ್ಣವನ್ನು ಅವಶ್ಯಕತೆಗನುಗುಣವಾಗಿ ಪಾರದರ್ಶಕವಾಗಿ ಮತ್ತು ಅಪಾರದರ್ಶಕವಾಗಿ ಬಳಸಿಕೊಳ್ಳುತ್ತ ರೂಪದರ್ಶಿಯ ಬಾಹ್ಯ ಚಹರೆಗೆ ಪ್ರಾಧಾನ್ಯತೆ ನೀಡಿದ ಉತ್ತಮ ನಿರ್ವಹಣೆಯ ಭಾವಚಿತ್ರವಿದು. ಆಯತಾಕೃತಿಯ ಕ್ಯಾನ್ವಾಸಿನಲ್ಲಿ ಚಿತ್ರವನ್ನು ಸಂದರ್ಭೋಚಿತವಾಗಿ ಸಂಯೋಜಿಸಿದ ಕ್ರಮವನ್ನು ಇಲ್ಲಿ ಕಾಣುತ್ತೇವೆ. ಹಿನ್ನೆಲೆಯಲ್ಲಿ ಬಳಸಿದ ಕಪ್ಪು ವರ್ಣ ಪ್ರಖರವಾಗಿರುವ ಗುಣವನ್ನು ಹೊಂದಿದ್ದರೂ ಟ್ಯಾಗೂರರ ಚಿತ್ರಕ್ಕೆ ಹೊಂದಾಣಿಕೆಯಾಗುತ್ತಲಿದೆ. ರೂಪದರ್ಶಿಯ ಒಟ್ಟೆಯ ನೀರಿಗೆಗಳನ್ನು ವರ್ಣದಲ್ಲಿ ತೋರಿಸುವ ಸಾಧ್ಯತೆಗಳನ್ನು ಇಲ್ಲಿ ಕಾಣಬಹುದಾಗಿದೆ.

ಪಂಜೆ ಮಂಗೇಶ ರಾಯರು

ಕಲಾಕೃತಿಯ ಆಯ್ಕೆಯಲ್ಲಿ ಬಾಯಿರಿಯವರು ಭಾವಚಿತ್ರದ ಸೌಂದರ್ಯದ ಕಲ್ಪನೆಯನ್ನು ಇಟ್ಟುಕೊಂಡೇ ದುಂಡು ದುಂಡಾದ ಕಪ್ಪು ಅಥವಾ ಕಂದು ಕೆಂಪು ಚರ್ಮದ ಹೊಳಪುಳ್ಳ

ಗಟ್ಟಿಯಾದ ತಮ್ಮ ಭಾವಚಿತ್ರದಲ್ಲಿ ಆಕೃತಿಯನ್ನಾಗಿಸಿದ ಅಂಶಗಳನ್ನು ಇಲ್ಲಿನ ಅಧ್ಯಯನದ ಚಿತ್ರಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತವೆ. ಈ ಭಾವಚಿತ್ರದಲ್ಲಿ ಮೂಗು, ತೀಕ್ಷ್ಣಕಣ್ಣುಗಳು, ಮಿಸೆ ತುಟಿಗಳು ಮುಂತಾದ ವರ್ಣಗಳ ಸ್ಪರ್ಶವನ್ನು ಕೊಡುತ್ತಾರೆ. ರೂಮಾಲಿನಲ್ಲಿರುವ ನೇರಿಗೆಗಳನ್ನು ತುಂಬಾ ನೈಜವಾಗಿ ತೋರಿಸಿದ್ದಾರೆ. ಭಾವಚಿತ್ರದಲ್ಲಿ ಬದಿಯ ಮುಖ ಚಹರೆಯನ್ನು ಹೊಂದಿದೆ.

ಬಿ. ಎಂ. ಶ್ರೀಕಂಠಯ್ಯ

೧೯೬೨ ರಲ್ಲಿ ರಚಿಸಿರುವ ವೇಗದ ಗತಿಯೇ ಇರದ ಕುಂಚದ ಬೀಸುಗಳು ವ್ಯಕ್ತಿಯ ಭಾವಾಭಿವ್ಯಕ್ತಿಯನ್ನಿಟ್ಟುಕೊಂಡೆ ಚಿತ್ರಿಸಿದ ಕಲಾಕೃತಿಯಾಗಿದೆ. ಭಾವಚಿತ್ರಣದ ಬಗ್ಗೆ ಬಾಯಿರಿಯವರ ಉಲ್ಲೇಖ, ವ್ಯಕ್ತಿ, ಭಾವಚಿತ್ರಣ ಮಾಡಬೇಕಾದರೆ ಅವನ ಸಮಾಜದಲ್ಲಿನ ಸ್ಥಾನಮಾನಗಳನ್ನು ಆ ವ್ಯಕ್ತಿಯ ನೇರ ಸಂಬಂಧಗಳನ್ನು ಕಲ್ಪಿಸಿಕೊಂಡೆ ಭಾವಚಿತ್ರ ಮಾಡುತ್ತೇನೆ ಎಂದು ಹೇಳುತ್ತಾರೆ. ಬಾಯಿರಿಯವರ ಕಲಾಕೃತಿಗಳಲ್ಲಿ ರೋಮ್ಯಾಂಟಿಕ್ ಸೆಳಕುಗಳಿಗೆ ಆದ್ಯತೆಯಿರುವುದು ಕಂಡು ಬರುತ್ತದೆ. ಕೃತಿಯಲ್ಲಿನ ಮೈವಳಕೆ ಸುಂದರವಾಗಿ ಮೂಡಿ ಬಂದಿದೆ.

ಕಡೆಕಾರು ರಾಜಗೋಪಾಲಕೃಷ್ಣರಾಯರು

೧೯೬೯ ರಲ್ಲಿ ರಚಿಸಲಾದ ಈ ತೈಲವರ್ಣ ಚಿತ್ರವು ಸಾಂಪ್ರದಾಯಿಕ ಉಡುಗೆಗಳಿಂದ ಕುಡಿದುದಾಗಿದೆ. ವ್ಯಕ್ತಿಯ ಪ್ರಮಾಣ ಬದ್ಧತೆ ಸರಿಯಾಗಿದ್ದು ವ್ಯಕ್ತಿಯ ನೋಟದ ತೀಕ್ಷ್ಣತೆ, ದೊತರದ ನೆರಿಗೆಗಳು, ಕೈಯಲ್ಲಿನ ಬೊಕ್ಕೆ, ಎಲ್ಲವನ್ನು ಎಳೆಯುಳೆಯಾಗಿ ಚಿತ್ರಿಸಿದ್ದು ಶುಬ್ರ ಬಿಳಿ ಬಣ್ಣದ ಬಟ್ಟೆಗಳ ಚಿತ್ರವನ್ನು ತೋರಿಸಲಾಗಿದೆ. ರಾಜಗೋಪಾಲಕೃಷ್ಣರಾಯರ ಬಾಹ್ಯ ಚಹರೆಗೆ ಬಾಯಿರಿಯವರು ಪ್ರಾಧ್ಯಾನತೆಯನ್ನು ನೀಡಿದ್ದಾರೆ. ಮುಖದಲ್ಲಿನ ಚರ್ಮದ ಸುಕ್ಕುಗಳು ಪೂರಕವಾಗಿಯೇ ಸಾಗಿರುವುದರಿಂದ ಪೂರ್ಣ ಭಾವಚಿತ್ರ ವಾಸ್ತವಕ್ಕೆ ಹತ್ತಿರವಾಗುತ್ತದೆ.

ಟಿ. ಪಿ. ಕೈಲಾಸಂ

೧೯೫೮ ರಲ್ಲಿ ರಚಿತವಾದ ಈ ತೈಲವರ್ಣ ಪೂರ್ಣಭಾವಚಿತ್ರವು ಕಂದು ಬಣ್ಣದ ಸೂಟು ತೊಟ್ಟು ನಿಂತ ಸದೃಡ ಕಾಯದ ದೇಹದ ಟಿ. ಪಿ. ಕೈಲಾಸಂ ಚಿತ್ರವು ಸುಂದರವಾಗಿದೆ. ಇಲ್ಲಿ ಗಾಢವರ್ಣಗಳನ್ನು ಸೂಟನಲ್ಲಿ ಬಳಸಿ ಹಿನ್ನೆಲೆಯಾಗಿ ತೆಳು ವರ್ಣಗಳನ್ನು ಬಳಸಲಾಗಿದೆ. ಉಡುಪು ರಚನೆಗೆ ಮೊದಲ ಆಧ್ಯತೆಯನ್ನು ಬಾಯಿರಿಯವರು ತಮ್ಮ ಕಲಾಕೃತಿಗಳಲ್ಲಿ ನೀಡಿದ್ದಾರೆ.



ಸರದಾರ ವಲ್ಲಭಾಯಿ ಪಟೇಲ್‌ರು



ರಾಷ್ಟ್ರಪಿತ ಮಹಾತ್ಮ ಗಾಂಧೀಜಿ



ಶ್ರೀ ಪಂಜೆ ಮಂಗೇಶ ರಾಯರು



ವಿಶ್ವಕವಿ ರವೀಂದ್ರನಾಥ ಟ್ಯಾಗೂರರು




ಬಿ. ಎಂ. ಶ್ರೀಕಂಠಯ್ಯನವರು



ಶ್ರೀ ಕಡೆಕಾರು ರಾಜಗೋಪಾಲಕೃಷ್ಣ ರಾಯರು



ಟಿ. ಪಿ. ಕೈಲಾಸಂ



ಶ್ರೀ ಶಂಭಾ ಜೋಶಿ

ಶಂಭಾ ಜೋಶಿ

ತೆಳು ಮೈಕಟ್ಟಿನ ಸದೃಡ ಕಾಯದ ಹಸನ್ಮುಖಿ ಮೊಗದ ಈ ಭಾವಚಿತ್ರವು ಸೂಕ್ಷ್ಮ ಕುಂಚದ ಬೀಸುಗಳು ಸುಂದರವಾಗಿ ಮೂಡಿ ಬಂದಿವೆ. ಶಾಲು ಹೊದ್ದಿರುವ ಈ ಚಿತ್ರದಲ್ಲಿ ನಗುಮುಖದ ವಿಶಿಷ್ಟ ನೋಟವನ್ನು ಇಲ್ಲಿ ಚಿತ್ರಿಸಲಾಗಿದೆ. ಹಿನ್ನೆಲೆ ದಟ್ಟ ವರ್ಣಗಳನ್ನು ಮುನ್ನೆಲೆ ತೆಳು ವರ್ಣಗಳನ್ನು ಬಳಸಲಾಗಿದೆ.

ಆಲೂರು ವೆಂಕಟರಾಯರು

೧೯೫೭ ರಲ್ಲಿ ರಚಿತವಾದ ಈ ಕೃತಿ ನೆರೆದ ಗಡ್ಡ, ಹಿನ್ನೆಲೆ ನೆರಳೆ ಬಣ್ಣ ಹಸಿರು ವರ್ಣದ ಶಾಲು ಹೊದ್ದಿರುವ ಆಲೂರು ವೆಂಕಟರಾಯರ ಚಿತ್ರವು ಮುಖದ ವರ್ಣಗಳಿಗೆ ಪೂರಕವಾದ ಹಿನ್ನೆಲೆ ಚಿತ್ರಕ್ಕೆ ಮೃದುವಾದ ಭಾವವನ್ನು ತುಂಬಿವೆ. ಇಲ್ಲಿಯೂ ಕೂಡಾ ಭಾವಚಿತ್ರದ ರಚನಾ ತಂತ್ರ ಬಾಯಿರಿಯವರ ಮೂಲ ತಿರುಳು.

ಪಂಡಿತ ತಾರಾನಾಥರು

೧೯೫೩ ರಲ್ಲಿ ರಚಿಸಲಾದ ತೈಲವರ್ಣ ಚಿತ್ರ ದಟ್ಟ ಕಪ್ಪು ಕೂದಲು ಹೊಂದಿದ್ದು ಬಿಳಿ ನೆಹರು ಬಟ್ಟೆ ತೊಟ್ಟ ಚಿತ್ರದಲ್ಲಿ ಹಿನ್ನೆಲೆ ಕಪ್ಪು, ವರ್ಣ ಬಳಸಲಾಗಿದೆ. ವರ್ಣಗಳು ಚೈತನ್ಯಯುಕ್ತವಾಗಿರುವುದಲ್ಲದೇತಾಜಾತನ ಸತ್ವವನ್ನು ಹೊಂದಿರುವುದರಿಂದ ಇದೊಂದು ಯಶಸ್ವಿ ಭಾವಚಿತ್ರವಾಗಿರುವುದು.

೪. ಶಿಕ್ಷಣ ತಜ್ಞರ ಚಿತ್ರಗಳು

ಕೋಟಿಕರ ಪದ್ಮನಾಭ ಪೈ

ಈ ತೈಲವರ್ಣಚಿತ್ರವನ್ನು ಬಾಯಿರಿಯವರು ೧೯೬೮ ರಲ್ಲಿ ರಚಿಸಿದ್ದು ಕನ್ನಡಕದ ಹಿಂದಿನ ತೀಕ್ಷ್ಣಕಣ್ಣುಗಳು, ಗಾಂಧಿಟೋಪಿಯು ಸರಳ ರಚನೆಯಾಗಿದ್ದು, ತೆಳು ವರ್ಣಗಳನ್ನೆ ಪೂರ್ಣವಾಗಿ ತೋರಿಸಿದ್ದಾರೆ. ಕಂದು ಗೆಂಪು ಬಣ್ಣದ ಮುಖಚಹರೆಯನ್ನು ಚಿತ್ರಿಸಿ ಭಾವದಲ್ಲಿ ಮಿಂಚಿನಂತೆ ಸ್ಪಷ್ಟತೆ ಇದೆ. ಭಾವ ಚಹರೆಗೆ ಒತ್ತು ಕೊಟ್ಟಿರುವುದನ್ನು ಕುಂಚದ ಬೀಸುಗಳಿಂದ ತಿಳಿದುಕೊಳ್ಳಬಹುದು. ಸ್ಪಷ್ಟ ಮುಖ ಭಾವದಲ್ಲಿ ಗುಣ ಸ್ವಭಾವಗಳು ಸ್ಪಷ್ಟ ವರ್ಣಗಳನ್ನು ತಾರತಮ್ಯ ರೀತಿಯಲ್ಲಿ ದುಡಿಸಿಕೊಂಡಿದ್ದಾರೆ.

ಶ್ರೀಪತಿ ಆಚಾರ್ಯ

ಈ ತೈಲ ಭಾವಚಿತ್ರವನ್ನು ೧೯೮೯ರಲ್ಲಿ ರಚಿತವಾಗಿದ್ದು ವ್ಯಕ್ತಿಯ ಮುಖಭಾವಕ್ಕೆ

ತಕ್ಕಂತೆ ಉಡುಪಿಗೆ ಬಣ್ಣವನ್ನು ಲೇಪಿಸಿದ್ದಾರೆ. ಬಿಳಿ ಬಣ್ಣದ ಉಡುಪು ತೊಟ್ಟಿದ್ದ ನಗುಮುಖದ ತುಟಿ ಮತ್ತು ನೋಟವನ್ನು ತೋರಿಸಲಾಗಿದೆ. ಚಾಳಿಸಿನ ಪಾರದರ್ಶಕವನ್ನು ವಿವರವಾಗಿಯೇ ನಿರ್ವಹಿಸಿದ್ದಾರೆ.

ಡಾ. ಕೆ. ಲಕ್ಷ್ಮೀನಾರಾಯಣ ಐತಾಳ

ಈ ತೈಲ ಚಿತ್ರ ೧೯೮೪ ರಲ್ಲಿ ರಚಿತವಾಗಿದೆ ಬಿಳಿ ಅಂಗಿ ನೀಲಿ ಕೋಟನ್ನು ತೊಟ್ಟಿರುವ ಈ ಚಿತ್ರವಲ್ಲಿ ಗಾಂಧಿ ಟೋಪಿಯನ್ನು ತೋರಿಸಲಾಗಿದೆ. ನೋಟವು ನೇರವಾಗಿದ್ದು ಹಿನ್ನೆಲೆಯಲ್ಲಿ ತಿಳಿ ನೀಲಿ ಹಸಿರು ಬಣ್ಣವನ್ನು ಬಳಸಲಾಗಿದೆ. ಈ ಎಲ್ಲ ಶಿಕ್ಷಣ ತಜ್ಞರ ಭಾವಚಿತ್ರಗಳು ಎಮ್.ಜಿ.ಎಮ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿದವರದಾಗಿದ್ದು ತುಂಬಾ ಸರಳವಾಗಿ ಮೂಡಿಬಂದಿವೆ.

ಅಶೋಕ ಲಕ್ಷ್ಮೀನಾರಾಯಣರಾವ್

೧೯೭೪ ರಲ್ಲಿ ರಚಿತವಾದ ಈ ತೈಲ ಭಾವಚಿತ್ರದ ಹಿನ್ನೆಲೆ ಮುನ್ನಲೆಗಳನ್ನು ಸಂಯೋಜನೆಗೊಳಪಡಿಸಿ ಚಿತ್ರಿಸಲಾಗಿದ್ದು ಪಾಶ್ಚಾತ್ಯರ ಭಾವಚಿತ್ರ ನಿರೂಪಣಾ ಶೈಲಿಯಿರುವುದು ಕಂಡು ಬರುತ್ತದೆ. ಕಣ್ಣುಗಳು ಅರ್ಧ ಮುಚ್ಚಿದ ಆಕಾರದಲ್ಲಿದ್ದು ಮುಖದ ನೆರಳಿನಲ್ಲಿ ಉಡುಪು ಮತ್ತು ಹಿನ್ನೆಲೆಯ ಪ್ರತಿಫಲಗಳು ಸೂಕ್ಷ್ಮವಾಗಿ ಮೂಡಿರುವುದು ಈ ಭಾವಚಿತ್ರದ ಉತ್ತಮ ಗುಣ ವಿಶೇಷ. ಮುಖದ ಕಂದು ಕೆಂಪು ಚರ್ಮದ ವರ್ಣವನ್ನು ಯಥಾವತ್ತಾಗಿ ಮೂಡಿರುವ ಬಗೆಯು ಇಲ್ಲದೆ.

ಪ್ರೊ. ಕೆ. ಕೆ. ಈಶ್ವರನ್

ಶುಬ್ರ ಬಿಳಿ ಬಣ್ಣದ ಬಟ್ಟೆ ತೊಟ್ಟಿರುವ ಕಾಂತಿಯುಕ್ತ ಕಣ್ಣು ಹಿನ್ನೆಲೆ ಕೂಡ ತಿಳಿ ಬಿಳಿ ವರ್ಣದಿಂದ ಕೂಡಿದೆ. ಕಂದು ಬಣ್ಣದ ಮುಖಭಾವ ಮುಗುಳು ನಗುವಿನ ತುಟಿ ಕುಂಚದ ಬೀಸುಗಳು ಸೀಮಿತವಾಗಿವೆ. ಆದರೆ ಅದೇ ಕುಂಚದ ಬೀಸುಗಳು ಸೀಮಿತವಾಗಿವೆ. ಸಾಂದರ್ಭಿಕ ಭಾವಕ್ಕೆ ಹೊಂದಿಕೊಂಡಿರುವ ವರ್ಣಗಳು ಇವೆ.

ಡಾ. ಸುಂದರಂ ಪೈ

೧೯೬೩ ರಲ್ಲಿ ರಚಿಸಲಾದ ಈ ಭಾವಚಿತ್ರದಲ್ಲಿ ನೇರ ದೃಷ್ಟಿಯನ್ನು ತೋರಿಸಲಾಗಿದ್ದು ಕಪ್ಪು ಕೋಟನ್ನು ತೊಟ್ಟಿರುವುದನ್ನು ತೋರಿಸಿ ತೆಳು ಕಂದು ಬಣ್ಣದ ಮುಖಚಹರೆಯನ್ನು ಹೊಂದಿದೆ. ದುಂಡನೆಯ ಮುಖಭಾವ ಹಸಿರು ವರ್ಣದ ಹಿನ್ನೆಲೆಯನ್ನು ಹೊಂದಿರುವುದನ್ನು ಕ್ಷಿಪ್ರವಾಗಿರುವುದರೊಂದಿಗೆ ನೀಳ ಕೂದಲಿನ ಹರವನ್ನು ತೋರಿಸಲಾಗಿದೆ.

ಪ್ರೊ : ಹೆಚ್. ಸುಂದರರಾವ್

ಬಾಯಿರಿಯವರ ಭಾವಚಿತ್ರಗಳಲ್ಲಿ ರೂಪದರ್ಶಿಗಳು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿರುವುದಕ್ಕೆ ಇಲ್ಲಿನ ಭಾವಚಿತ್ರದಂತಹ ಅನೇಕ ಭಾವಚಿತ್ರಗಳು ನಿದರ್ಶನವಾಗುತ್ತವೆ. ವಿವರಕ್ಕೆ ನಿಲುಕುವ ಇಲ್ಲಿನ ಭಾವಚಿತ್ರದಲ್ಲಿ ರಮಣೀಯ ಸೆಳಕುಗಳಿವೆ. ಭಾವದಲ್ಲಿ ಮಿಂಚಿನಂತ ಸ್ಪಷ್ಟತೆ ಇದೆ. ಮುಖದಲ್ಲಿನ ಮಂದಹಾಸದ ನಗು ಹಿನ್ನೆಲೆಯಲ್ಲಿ ಅಚ್ಚುಕಟ್ಟಾಗಿ ಜೋಡಿಸಲ್ಪಟ್ಟ ಪುಸ್ತಕಗಳನ್ನು ಕಪ್ಪು ವರ್ಣದ ಹಿನ್ನೆಲೆಯಲ್ಲಿ ತೋರಿಸಿದ್ದಾರೆ.

ಮಂಜೇಶ್ವರ ಗೋವಿಂದ ಪೈ

೧೯೫೭ರಲ್ಲಿ ರಚಿತವಾದ ಈ ಭಾವ ಚಿತ್ರಣವು ಸದ್ಯ ಗೋವಿಂದ ಪೈ ಸಂಶೋಧನಾ ಸಂಸ್ಥೆಯಲ್ಲಿ ಸಂಗ್ರಹಗೊಂಡಿದೆ, ಬಾಯಿರಿಯವರು ಭಾವಚಿತ್ರಕ್ಕೆ ಹೆಚ್ಚಿನ ಸೌಂದರ್ಯ ಕಲ್ಪನೆಯನ್ನು ನೀಡಲು ಮೂಗು, ಕನ್ನಡಕದ ಹಿಂದಿನ ಕಣ್ಣುಗಳು, ಕೆನ್ನೆ, ತುಟಿ, ಮೀಸೆ ಬಿಳಿಕೂದಲು, ಕೆಂಪು ಶಾಲು ಮುಂತಾದವುಗಳನ್ನು ವಿವರವಾದ ರಚನೆಗಳಲ್ಲಿ ತೋರಿಸಿದ್ದಾರೆ.

ಬಿ. ನಾರಾಯಣ ಆಚಾರ್ಯರು

೧೯೭೬ ರಲ್ಲಿ ರಚಿತವಾದ ಗಂಭೀರ ನೋಟವನ್ನು ಹೊಂದಿರುವ ಈ ತೈಲ ಭಾವ ಚಿತ್ರವನ್ನು ಬಿಳಿ ಬಣ್ಣದ ವಸ್ತ್ರವಿನ್ಯಾಸದಲ್ಲಿ ಬಿಡಿಸಿದ್ದಾರೆ. ಹಿನ್ನೆಲೆಯಲ್ಲಿ ಗ್ರೆ ಬಣ್ಣವನ್ನು ಬಳಸಲಾಗಿದೆ.

ತೋನ್ಸೆ ಅನಂತ ಪೈ ಮಣಿಪಾಲ

ಬಾಯಿರಿಯವರು ಮುಖಚಹರೆಯ ಮೇಲೆ ತೆಳು ಹಳದಿ ಬಣ್ಣವನ್ನು ಬಳಸಿದ್ದಾರೆ. ಕನ್ನಡಕದ ಹಿಂದಿನ ಹಸನ್ಮುಖಿ ಕಣ್ಣುಗಳು ಅಗಲವಾದ ಮುಖ ಕಂದು ಬಣ್ಣದ ಕೋಟು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ನೀಲಿಬಣ್ಣವನ್ನು ಭಾವಚಿತ್ರಕ್ಕೆ ಸಂಯೋಜನೆಯಾಗಿ ಬಳಸಲಾಗಿದೆ. ತುಂಬಾ ಸರಳವಾಗಿ ರಚಿಸಿರುವ ಸಾಧ್ಯತೆಗಳನ್ನು ಈ ಚಿತ್ರದ ಗುಣಗಳೇ ಹೇಳುತ್ತವೆ. ಕುಂಚದ ಬೀಸುಗಳು ಚಿತ್ರಕ್ಕೆ ಹೆಚ್ಚಿನ ಜೀವಂತಿಕೆಯ ಭಾವವನ್ನು ತುಂಬಿವೆ. ಸಾಮಾನ್ಯವಾಗಿ ಬಾಯಿರಿಯವರು ತಮ್ಮ ಭಾವಚಿತ್ರಗಳಲ್ಲಿ ವ್ಯಕ್ತಿಯ ವ್ಯಕ್ತಿತ್ವವನ್ನು ತಮ್ಮ ಕಲಾಕೃತಿಗಳಲ್ಲಿ ತುಂಬಲು ಬಳಸಿದ್ದಾರೆ. ತೆಳು ವರ್ಣಗಳನ್ನು ಹೆಚ್ಚು ಬಳಸಿಕೊಂಡು ಬಂದಿದ್ದಾರೆ. ಇಂತಹ ಭಾವಚಿತ್ರದಂತಹ ಭಾವಚಿತ್ರಗಳು ಅನೇಕ ನಿದರ್ಶನವಾಗುತ್ತವೆ. ವಿವರಕ್ಕೆ ನಿಲುಕುವ ಇಲ್ಲಿನ ಭಾವಚಿತ್ರದಲ್ಲಿ ರಮಣೀಯ ಸೆಳಕುಗಳಿವೆ. ಭಾವದಲ್ಲಿ ಮಿಂಚಿನಂತಹ ಸ್ಪಷ್ಟತೆ ಇದೆ. ಈ ಕಲಾಕೃತಿಯಲ್ಲಿ ಜೀವಂತಿಕೆಯ ರೇಖೆಗಳು ಬಣ್ಣಗಳ ಜೊತೆಗೆ ಮೆಳೈಸಿಕೊಂಡಿವೆ.



ಕೋಚಿಕರ ಪದ್ಮನಾಭ ಪೈ



ಪಿ. ಶ್ರೀಪತಿ ಆಚಾರ್ಯ



ಡಾ. ಕೆ. ಲಕ್ಷ್ಮೀನಾರಾಯಣ ಐತಾಳ



ಅಶೋಕ ಲಕ್ಷ್ಮೀನಾರಾಯಣರಾವ್



ಪ್ರೊ. ಕೆ.ಕೆ. ಈಶ್ವರನ್



ಡಾ. ಸುಂದರಂ ಪೈ



ಪ್ರೊ. ಹೆಚ್. ಸುಂದರರಾವ್



ರಾಷ್ಟ್ರಕವಿ. ಮಂಜೇಶ್ವರ ಗೋವಿಂದ ಪೈ





ಶ್ರೀ ಬಿ. ನಾರಾಯಣ ಆಚಾರ್ಯರು



ಶ್ರೀ ತೋನ್ಸೆ ಅನಂತ ಪೈ ಮಣಿಪಾಲ



ಶ್ರೀ ಕೆ. ಸಂಜೀವ ಸೆಟ್ರು

ಕೆ. ಸಂಜೀವ ಸೆಟ್ರು

೧೯೬೦ ರಲ್ಲಿ ರಚಿತವಾದ ಈ ಕಲಾಕೃತಿಯು ಗಂಭೀರ ಸ್ವಭಾವದ ಭಾವಚಿತ್ರವಾಗಿದೆ. ಹಿನ್ನೆಲೆ ಮುನ್ನೆಲೆಗಳೆರಡರಲ್ಲಿಯೂ ತಿಳಿ ವರ್ಣಗಳನ್ನು ಬಳಸಲಾಗಿದೆ. ತಲೆ ಕೂದಲಿನ ವಿನ್ಯಾಸ ಕಣ್ಣುಗಳು ಈ ಕಲಾಕೃತಿಯಲ್ಲಿ ಸುಂದರವಾಗಿ ಮೂಡಿ ಬಂದಿದೆ.

ಪ್ರೊ. ಕೆ. ರಾಮದಾಸ

೧೯೮೯ ರಲ್ಲಿ ಕಲಾಕೃತಿಯೂ ಮೂಡಿ ಬಂದಿದೆ. ಈ ಮೇಲಿನ ಎಲ್ಲ ಕಲಾಕೃತಿಗಳಲ್ಲಿ ಮೂಡಿ ಬಂದಿರುವ ರೇಖಾವಿನ್ಯಾಸ, ಬಣ್ಣಗಳ ವೈವಳಿಕೆ, ತೀಕ್ಷ್ಣ ಕಣ್ಣುಗಳು, ತಂತ್ರ, ರಚನಾ ವಿಧಾನ ಕುಂಚದ ಬೀಸುಗಳು, ಮುಖದಲ್ಲಿನ ಚರ್ಮದ ಸುಕ್ಕುಗಳನ್ನು ನೈಜವಾಗಿ ಚಿತ್ರಿಸಿದ್ದಾರೆ.

೫. ಜ್ಞಾನಪೀಠ ಪ್ರಶಸ್ತಿ ವಿಜೇತರ ಚಿತ್ರಗಳು

ರಾಷ್ಟ್ರಕವಿ ಕುವೆಂಪು

೧೯೭೯ ರಲ್ಲಿ ರಚಿತವಾದ ಈ ತೈಲವರ್ಣಚಿತ್ರವು ಆಕರ್ಷಕವಾಗಿದೆ. ಕುವೆಂಪುವಿನ ಮುಖದಲ್ಲಿ ಕೇಸರಿ ಮಿಶ್ರಿತ ಕಂದು ಬಣ್ಣವನ್ನು ಬಳಸಲಾಗಿದ್ದು, ಗುಂಗುರು ಕೂದಲು, ಮಂದಹಾಸದ ನಗೆ ಬಿಳಿ ಉಡುಪು ತುಂಬಾ ನೈಜತೆಯಲ್ಲಿ ರಚಿಸಿದ್ದುದಾಗಿದೆ. ಹಿನ್ನೆಲೆಯಲ್ಲಿ ಕಪ್ಪು ಮಿಶ್ರಿತ ಬಿಳಿ ವರ್ಣವು ಆಕೃತಿಗೆ ಹೊಂದಿಕೆಯಾಗುವಂತೆ ಬಳಸಿದ್ದು ಕಂಡು ಬರುತ್ತದೆ. ನೆರಳು ಬೆಳಕಿನ ಮಿಶ್ರಣ ಕಂಡು ಬರುತ್ತದೆ.

ಶಿವರಾಮ ಕಾರಂತರು

ಕಡಲ ಭಾರ್ಗವ ಕೋಟ ಶಿವರಾಮ ಕಾರಂತರ ಈ ತೈಲವರ್ಣ ಚಿತ್ರವನ್ನು ೧೯೭೯ ರಲ್ಲಿ ಚಿತ್ರಿತವಾಗಿದ್ದು ಹಿನ್ನೆಲೆಯಲ್ಲಿ ದಟ್ಟವರ್ಣ ದೇಹರಚನೆಯಲ್ಲಿ ಸದೃಡ ಕಾಯ ರಚಿಸಿದ್ದು ಮುಖದಲ್ಲಿ ನೆರಿಗೆಗಳನ್ನು ನೈಜವಾಗಿ ರಚಿಸಿದ್ದಾರೆ. ನೆರಳು ಬೆಳಕುಗಳನ್ನು ಸರಳವಾಗಿ ಸಂಯೋಜಿಸಲಾಗಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ

ಈ ಕಲಾಕೃತಿಯು ೧೯೭೯ ರಲ್ಲಿ ರಚಿತವಾಗಿದ್ದು, ಭಾವಚಿತ್ರವೇ ರೂಪದರ್ಶಿಯ ವಯೋಮಾನವನ್ನು ಹೇಳುವ ಸಾಮರ್ಥ್ಯವನ್ನು ಪಡೆದಿದೆ. ಇಲ್ಲಿನ ಭಾವಚಿತ್ರದಲ್ಲಿ ರಮಣೀಯ ಸೆಳಕುಗಳಿವೆ. ಮುಖದ ಮೇಲಿನ ಸುಕ್ಕುಗಳನ್ನು ವಾಸ್ತವಕ್ಕೆ ಹತ್ತಿರವಾಗಿದೆ.

ವರಕವಿ ದ. ರಾ. ಬೇಂದ್ರ

ಹಸಿರು ಮಿಶ್ರಿತ ಕಂದು ಬಣ್ಣವನ್ನು ಈ ತೈಲವರ್ಣ ಚಿತ್ರದಲ್ಲಿ ಬಳಸಿದ್ದು ಈ ಕಲಾಕೃತಿಯು ೧೯೭೪ ರಲ್ಲಿ ರಚಿತವಾಗಿದೆ. ಬಿಳಿ ಬಟ್ಟೆ ತೊಟ್ಟಿದ್ದು, ಕಣ್ಣಿನ ಮಂದಹಾಸ ಕುಡಿನೋಟ, ತೋರಿಸಲಾಗಿದೆ. ಕೂದಲನ್ನು ನೈಜವಾಗಿ ಚಿತ್ರಿತವಾಗಿದೆ. ಹಿನ್ನೆಲೆಯಲ್ಲಿ ಬಿಳಿ ವರ್ಣವನ್ನು ಇಲ್ಲಿ ಬಳಸಲಾಗಿದೆ.

೧೫ನೇ ಶತಮಾನದಲ್ಲಿ ಮುಖವನ್ನು ಮಾತ್ರ ಭಾವಚಿತ್ರವೆಂದು ಚಿತ್ರಿಸಿದರೆ, ೧೬ನೇ ಶತಮಾನದಲ್ಲಿ ಇದೇ ದೇಹವನ್ನು ಭಾವಚಿತ್ರವೆಂದು ಪರಿಗಣಿಸಿದರು.[೧]

ಎಂಬ ಉಲ್ಲೇಖವನ್ನು ಈ ಹಿಂದೆ ಹೇಳಲಾಗಿದೆ. ಇಲ್ಲಿಯೂ ಕೂಡ ಅದೇ ಉಲ್ಲೇಖದಂತೆ ಇಡಿಯಾಗಿ ಅಥವಾ ಮೂರ್‍ನಾಲ್ಕು ಅಂಶ ಭಾಗದ ಭಾವಚಿತ್ರದ ಸಾಲಿನಲ್ಲಿಯೇ ಸೇರಿಸಿ ಅಧ್ಯಯನ ಮಾಡಲಾಗಿದೆ.

ನಮ್ಮ ಕಲಾಶಿಕ್ಷಣದಲ್ಲಿ ಮುಖವನ್ನು ಮಾತ್ರ ಚಿತ್ರಿಸುವುದಕ್ಕೆ ಭಾವಚಿತ್ರ ಎಂಬ ಪದವನ್ನು ಉಪಯೋಗಿಸುತ್ತಾರೆ. ಇಡೀ ದೇಹ ಚಿತ್ರದ ಅಧ್ಯಯನಕ್ಕೆ ಜೀವನ ಚಿತ್ರಣ (Life Painting) ಎಂಬ ಪದವನ್ನು ಉಪಯೋಗಿಸುತ್ತಾರೆ. ಈ ಪದಗಳ ವಿಂಗಡನೆಯು ಶಿಕ್ಷಣದ ಮತ್ತು ಕಲಾ ಶಿಕ್ಷಣದ ಪರೀಕ್ಷೆಗಳ ಅನುಕೂಲಕ್ಕಾಗಿ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಕೆಲವರು ಕಲಾ ಸಾಹಿತ್ಯದಲ್ಲಿ "ವ್ಯಕ್ತಿ"ಚಿತ್ರಗಳೆಂದು ಎರಡು ರೀತಿಯ ಚಿತ್ರಗಳಿಗೆ ಅನ್ವಯಿಸುವುದನ್ನು ನಾವು ಅಲ್ಲಲ್ಲಿ ಕಾಣುತ್ತೇವೆ. ಇದು ಸಮಂಜಸವಾದ, ಯೋಗ್ಯವಾದ ಅರ್ಥವನ್ನು ಕೊಡುವುದೆಂದೂ ಇದನ್ನು ಕೂಡ ಸ್ವೀಕಾರಾರ್ಹವೆಂದು ಪರಿಗಣಿಸಬಹುದು. ಇಲ್ಲಿನ ಅಧ್ಯಯನದಲ್ಲಿ "ಭಾವಚಿತ್ರ" ಎಂಬ ಶೀರ್ಷಿಕೆಯಡಿ ಎರಡು ರೀತಿಯ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

೧೯೫೦ ರ ದಶಕದಲ್ಲಿ ರಚಿಸಿರುವ ಪೌರಾಣಿಕ ಚಿತ್ರಗಳು, ದೇವರ ಚಿತ್ರಗಳನ್ನು ಹೆಚ್ಚು ರಚಿಸಿದ್ದು ಶ್ರೀಕೃಷ್ಣನ ಚಿತ್ರ, ಸಿದ್ಧಿವಿನಾಯಕ, ಶ್ರೀ ಶಾರದಾಂಬಾ, ಕೊಲ್ಲೂರು ಶ್ರೀ ಮೂಕಾಂಬಿಕ ಅತ್ಯುತ್ತಮ ಉದಾಹರಣೆಗಳಾಗಿವೆ. ಭಕ್ತರಿಗಾಗಿಯೇ ರಚಿಸಿದ ಚಿತ್ರಗಳಾಗಿವೆ.


೧೯೬೦ ರ ದಶಕದಲ್ಲಿ ರಚಿಸಿದ ಭಾವಚಿತ್ರಗಳು, ಐತಿಹಾಸಿಕ ವ್ಯಕ್ತಿಗಳ ಚಿತ್ರಗಳು, ಗಣ್ಯ ವ್ಯಕ್ತಿಗಳ, ಕವಿಗಳ ಚಿತ್ರಗಳಲ್ಲಿ ಕುಂಚದ ಬೀಸುಗಳನ್ನು ತೈಲವರ್ಣದಲ್ಲಿ ಹಂತ ಹಂತ (Leare by Leare) ವಾಗಿ ರಚನೆ ಮಾಡಿರುವುದರ ಜೊತೆಗೆ ಸ್ಪಷ್ಟತೆಯು ಪಡದುಕೊಂಡಿರುವುದು ಈ ಚಿತ್ರಗಳಲ್ಲಿ ಕಾಣಬಹುದು.

---

೧. ಎನ್. ಮರಿಶಾಮಾಚಾರ್ (ಸಂ) ಕಲಾಕೋಶ. ಪುಟ ೨೩೭



ರಾಷ್ಟ್ರಕವಿ ಕುವೆಂಪು



ಕೋಟ ಶಿವರಾಮ ಕಾರಂತರು



ಮಾಸ್ತಿವೆಂಕಟೇಶ ಅಯ್ಯಂಗಾರ್



ವರಕವಿ ದ. ರಾ. ಬೇಂದ್ರೆ

೧೯೭೦ ರ ದಶಕದಲ್ಲಿ ರಚಿಸಿದ ಕಲಾಕೃತಿಗಳಲ್ಲಿ ಪ್ರಮುಖವಾದವುಗಳು ಜ್ಞಾನಪೀಠ ಪ್ರಶಸ್ತಿ ವಿಜೇತ ಚಿತ್ರಗಳು ಉತ್ಕೃಷ್ಟ ಮಟ್ಟದಲ್ಲಿ ರಚಿಸಿದವುಗಳಾಗಿವೆ. ಕುವೆಂಪು, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ, ದ.ರಾ.ಬೇಂದ್ರ ಮುಂತಾದವುಗಳು.

ಬಿ. ಪಿ. ಬಾಯಿರಿಯವರು ತಮ್ಮ ಈ ಎಲ್ಲ ಕಲಾಕೃತಿಗಳನ್ನು ೧೯೫೬ ರಿಂದ ೧೯೮೨ ರ ವರೆಗೆ ರಚಿಸಿದವುಗಳಾಗಿದ್ದು, ೩ ದಶಕಗಳಲ್ಲಿ ಚಿತ್ರಿಸಿದ ಈ ಎಲ್ಲ ಕಲಾಕೃತಿಗಳು ಜನ ಮೆಚ್ಚುಗೆಗಾಗಿ ರಚಿಸಿದವುಗಳಾಗಿವೆ. ಕಲಾವಿದರು ಆಗೀನ ಸಮಯದಲ್ಲಿ ಸಮಾಜದ ಗಣ್ಯ ವ್ಯಕ್ತಿಗಳ, ಶಿಕ್ಷಣ ತಜ್ಞರ ಭಾವಚಿತ್ರಗಳನ್ನು ನೈಜ ರೀತಿಯಲ್ಲಿ ಒಂದೊಂದು ಭಾವಚಿತ್ರವು ವಿಭಿನ್ನ ರೀತಿಯ ಆ ವ್ಯಕ್ತಿಯ ಭಾವಗಳನ್ನು ವರ್ಣಗಳಲ್ಲಿ ಲೇಪನ ಮಾಡಿರುವುದು ಇವುಗಳಲ್ಲಿ ಕಂಡು ಬರುತ್ತದೆ.

ಬಿ. ಪಿ. ಬಾಯಿರಿಯವರ ಮನೆಯ ಆರ್ಥಿಕ ಪರಿಸ್ಥಿತಿಯ ನಿಭಾಯಿಸುವ ಉದ್ದೇಶವನ್ನಿಟ್ಟುಕೊಂಡು ಅವರು ಭಾವಚಿತ್ರಗಳನ್ನು ರಚಿಸಲು ಜನರ ಮನಸ್ಸನ್ನು ಅವರ ಕಲಾಕೃತಿಗಳ ಮುಖಾಂತರ ಆಕರ್ಷಿತಗೊಳಿಸಲು ತೊಡಗಿದರು. ಇವರಿಗೆ ಸ್ವದೇಶಿ ಕಲಾವಿದರಲ್ಲದೇ ಪಾಶ್ಚಿಮಾತ್ಯ ಕಲಾವಿದರುಗಳಾದ ರಂಬ್ರಾಂಟ್, ವೆಲಾಸ್ಕ, ವ್ಯಾನ್‌ಗೋ, ಗೊಗಿನ್, ಜೆಕ್‌ಮನ್, ಡ್ಯೂರರ್ ಮುಂತಾದ ಕಲಾವಿದರ ಪ್ರಭಾವವನ್ನು ಕಾಣಬಹುದು. ಈ ಪಶ್ಚಿಮದ ವರ್ಣಗಳನ್ನು, ರಚನಾ ತಂತ್ರವನ್ನು ನೆನಪಿಸುವ ಈ ಭಾವಚಿತ್ರ ಬಾಯಿರಿಯವರ ಭಾವಚಿತ್ರ ಕೌಶಲ್ಯಕ್ಕೆ ಉತ್ತಮ ಉದಾಹರಣೆ. ರೂಪದರ್ಶಿಯ ಮುಖದ ವರ್ಣಗಳಿಗೆ ಪೂರಕವಾದ ರಚನಾ ತಂತ್ರಗಳು ಬಾಯಿರಿಯವರ ಭಾವಚಿತ್ರದ ಮೂಲ ತಿರುಳು.

ಈ ರೀತಿಯಾಗಿ ಬಾಯಿರಿಯವರ ಕಲಾಕೃತಿಗಳನ್ನು ಅಧ್ಯಯನದ ಸಿಮೀತಾವಧಿಯಲ್ಲಿ ಅಧ್ಯಯನ ದೃಷ್ಟಿಯಿಂದ ಕೆಲವೇ ಕಲಾಕೃತಿಗಳೊಂದಿಗೆ ಅಲ್ಪ ಪರಿಚಯಕ್ಕೆ ಸೀಮಿತಗೊಂಡಿದೆ. ಬಾಯಿರಿಯವರ ಕಲಾಕೃತಿಗಳ ಕುರಿತು ಸಮಗ್ರವಾಗಿ ಅಧ್ಯಯನ ನಡೆಸುವುದರ ಅವಶ್ಯಕತೆ ಇದೆ.

* * * * *








ಶ್ರೀ ಬಿ. ಎನ್. ಆಚಾರ್ಯ



ಶ್ರೀ ರಾಕ್ವಿ ಫರ್ನಾಂಡಿಸ್




ಶ್ರೀ ವಿ. ಆರ್. ಬೀಡು



ರೇವೆರೆಂಡ್ ಎಫ್. ಕಿಟ್ಟಲ್




ಶ್ರೀ ಆಲೂರ ವೆಂಕಟರಾಯರು



ದಿ. ಪಂಡಿತ ತಾರಾನಾಥರು



ಕವಿ ಮುದ್ದಣ



ಶ್ರೀ ಪಂಜೆ ಮಂಗೇಶ್ವರಾಯರು





ಪ್ರೊ. ಕೆ. ರಾಮದಾಸ





ಸ್ವರಚಿತ ಭಾವಚಿತ್ರ ಶ್ರೀ ಬಿ. ಪಿ. ಬಾಯಿರಿ.

ಅಧ್ಯಾಯ ಐದು

ಬಿ. ಪಿ. ಬಾಯಿರಿಯವರ ರಂಗೋಲಿ ಸಾಹಿತ್ಯ ಚಿತ್ರವಿನ್ಯಾಸಗಳು

ರಂಗೋಲಿಯು ಸೃಜನಶೀಲ ಕಲಾ ಆಯಾಮ, ಭಾರತೀಯ ಸಂಸ್ಕೃತಿಯಲ್ಲಿ ರಂಗೋಲಿಗೆ ಧಾರ್ಮಿಕ ಸಾಮಾಜಿಕ ಮಹತ್ವ, ಶಾಸ್ತ್ರ, ಸಂಪ್ರದಾಯ, ಪರಂಪರೆಯ ತತ್ವಗಳೇ ಅಡಕವಾಗಿರುವ ಈ ಲಲಿತಕಲೆ ಮಂಗಲಕರ ಅಲಂಕಾರಿಕ, ಶುಭ, ಸೌಭಾಗ್ಯದ ಸಂಕೇತ, ಶ್ರದ್ಧೆ, ಭಕ್ತಿಯನ್ನು ದೇವರಿಗೆ ತೊಡಿಕೊಳ್ಳುವ ಮಧ್ಯವರ್ತಿ, ಹೊರನೋಟದಿಂದಲೇ ಬಗೆಹೊಕ್ಕು, ಮನಸ್ಸನ್ನು ಮಾರ್ದವಗೊಳಿಸಿ, ಸೌಂದರ್ಯಪ್ರಜ್ಞೆಯನ್ನು ತತ್ವಚಿಂತನೆಯನ್ನೂ ಜಾಗೃತಗೊಳಿಸುವ ರೇಖಾಕಲೆ, 'ರಂಗೋಲಿ' ರಂಗವಲ್ಲಿ'ಯ ತದ್ಭವವಾಗಿ ತೋರುತ್ತದೆ. ರಂಗ ಎಂಬುದಕ್ಕೆ ಬಣ್ಣ. ಸೊಗಸು ಎಂಬುದೇ ಪ್ರಕೃತಾರ್ಥಗಳು "ವಲ್ಲಿ" ಎಂದರೆ ಬಳ್ಳಿ, ಬಣ್ಣದ ಅಥವಾ ಬೆಣಚುಗಲ್ಲಿನ ಪುಡಿಯನ್ನು ಇಲ್ಲವೇ ಸೇಡಿಯ ಕರ್ದಮದಿಂದ ಬೊಟ್ಟುಗಳನ್ನೋ, ಗೆರೆಗಳನ್ನೋ ಹಾಕಿಕೊಂಡು ಬಗೆ ಬಗೆಯ ಬಳ್ಳಿಗಳ, ಹೂಗಳ, ಆಕೃತಿಗಳ ರೂಪವನ್ನು ಕಾಣಿಸುವ ಈ ಕಲೆ ಚಿತ್ರಕಲಾಂತರ್ಗತವಾದುದು. ರಂಗವಲ್ಲಿ ಕಲೆಯನ್ನು ಕೆಲವರು ಜಾನಪದರು "ಹುಲಿ ಬರೆಯುವುದು" ಎಂತಲೂ ಹೇಳುತ್ತಾರೆ. ಮನೆಯ ಮುಂದೆ ಮಾಡುವ ಅಲಂಕಾರಗಳಲ್ಲಿ ರಂಗವಲ್ಲಿಗೆ ಪ್ರಥಮ ಸ್ಥಾನ, ಬಯಲು ಸೀಮೆಯ ಜಿಲ್ಲೆಗಳಲ್ಲಿ ರಂಗೋಲಿ ಹಾಕುವ ಸಂಪ್ರದಾಯವಿದ್ದರೂ ಮಲೆನಾಡಿನಲ್ಲಿ ಅದಕ್ಕೊಂದು ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡಂತೆ ಇಲ್ಲಿ ಇಲ್ಲ. ವಿಶೇಷ ಸಂದರ್ಭಗಳಲ್ಲಿ ಅಕ್ಕಿ ಹಿಟ್ಟಿನಿಂದಲೇ ರಂಗೋಲಿ ಇಡುತ್ತಾರೆ. ಸೀಮೆ

ಸುಣ್ಣದಿಂದ, ಇದ್ದಿಲಿನಿಂದ ರಂಗೋಲಿ ಬರೆಯುವುದಿಲ್ಲ. ನಾನಾ ತರದ ಬಳ್ಳಿ, ಮರ, ಪ್ರಾಣಿ, ಪಕ್ಷಿಗಳನ್ನು ಸೊಗಸಾಗಿ ಬಿಡಿಸಿರುವುದನ್ನು ಕರ್ನಾಟಕದಲ್ಲಿ ಕಾಣಬಹುದು ಕೆಲವು ವಿಶಿಷ್ಟ ಸಂದರ್ಭಗಳ ರಂಗೋಲಿಗಳ ಹೆಸರುಗಳಿವು ನಾಗಮಂಡಲ, ಆರತಿ ರಂಗೋಲಿ, ಮದುವೆ ರಂಗೋಲಿ, ವ್ಯಾಧಿ ನಿವಾರಣೆ ರಂಗೋಲಿ, ಭೂತ ಬಿಡಿಸುವ ರಂಗೋಲಿ, ಮಣಿ ರಂಗೋಲಿ ಮುಂತಾದವು ರಂಗೋಲಿಯು ಸುಭ ಸಂಕೇತ, ರಂಗೋಲಿಯನ್ನು ದಾಟಿ ಭೂತ ಪ್ರೇತಗಳು ಬರುವುದಿಲ್ಲ ಎನ್ನುವ ನಂಬಿಕೆ ಇದೆ. ರಂಗೋಲಿಯು ಮುಖ್ಯವಾಗಿ ಮಹಿಳೆಯರ ಕಲೆ. ಭಗವದ್ಭಕ್ತರು, ಗಂಡಸರು ರಂಗೋಲಿ ಹಾಕುತ್ತಿದ್ದ ಉದಾಹರಣೆಗಳೂ ಉಂಟು. ರಂಗೋಲಿಗೆ ಮುಖ್ಯವಾಗಿ ಬೇಕಾಗುವ ಸಾಧನೆಗಳು- ಶೇಡಿ, ಕುಂಕುಮ ಮತ್ತು ಅರಿಶಿಣ.

ರಂಗೋಲಿಯಲ್ಲಿ ಎರಡು ಪ್ರಕಾರಗಳನ್ನು ಗುರುತಿಸಬಹುದು.

೧) ಶೇಡಿ ಅಥವಾ ಬೆಣಚು ಕಲ್ಲನ್ನು ಚೆನ್ನಾಗಿ ಪುಡಿ ಮಾಡಿ, ಸಾಣಿಸಿ ನುಣುಪಾದ ಒಣ ಶೇಡಿ ಹಿಟ್ಟು ಅಥವಾ ಜಿಣಚುಕಲ್ಲಿನ ಪುಡಿಯಿಂದ ರಂಗೋಲಿ ಬರೆಯುವುದು ಒಂದು ವಿಧಾನ. ೨) ನುಣುಪಾದ ಶೇಡಿ ಹಿಟ್ಟನ್ನು ಒಂದು ಪಾತ್ರೆಯಲ್ಲಿ ಅಥವಾ ಗೆರಬೆಯಲ್ಲಿ ಹಾಕಿ ಸ್ವಲ್ಪ ನೀರನ್ನು ಹೊಯ್ದು ಶೇಡಿಯನ್ನು ಕದಡಿ ಒಂದು ಬಟ್ಟೆಯ ತುಂಡನ್ನು ಹೊಸೆದು ನೆಣೆ (ಬತ್ತಿ) ಮಾಡಿ, ಅದನ್ನು ಶೇಡಿ ಕದಡಿದ ನೀರಲ್ಲಿ ಅದ್ದಿ, ಗೆರೆಗಳನ್ನು ಎಳೆಯುವುದು ಇನ್ನೊಂದು ಪ್ರಕಾರ. ಈ ಎರಡೂ ಪ್ರಕಾರಗಳು ಇಂದಿಗೂ ರೂಢಿಯಲ್ಲಿವೆ. ಹೆಂಗೆಳೆಯರು ಸೂರ್ಯೋದಯಕ್ಕೆ ಮುಂಚೆಯೇ ಎದ್ದು, ಮುಖ ತೊಳೆದು, ಬಾವಿಯಿಂದ ನೀರನ್ನು ತಂದು ಮಾಡುವ ಕೆಲಸವೇ "ಶೇಡ್ಗೋಮಯ" ಎಂದರೆ ನೀರಿನಲ್ಲಿ ಗೋಪಿಯುವನ್ನು ಕದಡಿ ಮನೆಯ ಒಳಗೆ ಹೊರಗೆ ಸಿಂಪಡಿಸುತ್ತಾರೆ. ದೇವರ ಮುಂದೆ, ಹೊಸ್ತಿಲಿಗೆ, ತುಳಿಸಿ ಮುಂದೆ, ಬಾವಿಕಟ್ಟೆಗೆ ಗೋಮಯದ ನೀರನ್ನು ಸಿಂಪಡಿಸಿ ಅಥವಾ ಸಾರಿಸಿ ಶೇಡಿಯಿಂದ ಗೆರೆಗಳನ್ನು ಎಳೆದು ಸುಂದರಗೊಳಿಸುತ್ತಾರೆ.

ಹಬ್ಬ ಹುಣ್ಣಿಮೆಗಳಲ್ಲಿ

ಪ್ರತಿ ಹಬ್ಬ ಹುಣ್ಣಿಮೆಗಳಿಗೂ ವಿಶಿಷ್ಟವಾದ ರಂಗೋಲಿಗಳು ಇವೆ. ದನ ಬಿಡುವ ಹಬ್ಬ, ಸುಗ್ಗಿ ಹಬ್ಬ, ನಾಗಪಂಚಮಿ, ದೀಪಾವಳಿ ಮುಂತಾದ ಹಬ್ಬಗಳಲ್ಲಿ ರಂಗೋಲಿಯ ಬೆಡಗನ್ನು ಸವಿಯಬಹುದು. ದನ ಬಿಡುವ ಹಬ್ಬವನ್ನು ಹೆಚ್ಚಾಗಿ ದೀಪಾವಳಿ ಪಾಢ್ಯದಂದು ಆಚರಿಸುತ್ತಾರೆ. ಅಂದು ಕೊಟ್ಟಿಗೆಯ ಬಾಗಿಲುಗಳಿಗೆ, ಬಾಗಿಲ ಮುಂದೆ ಮತ್ತು ಗೋಪೂಜೆ ಮಾಡುವಲ್ಲಿ ಗೋವಿನ ಪಾದಗಳನ್ನು ಶೇಡಿಯಿಂದ ಬರೆಯುತ್ತಾರೆ. ಕೆಲವು ಬಾರಿ ಹುಲಿಯಿಂದ ರಕ್ಷಿಸಿಕೊಳ್ಳುವ ಗೋವುಗಳ ಸುಂದರ ನಕ್ಷೆಗಳನ್ನು ಬರೆಯುವುದುಂಟು. ಶೇಡಿಯಿಂದ ಮೂರು ನಾಲ್ಕು ವರ್ತುಲಗಳನ್ನು ಸೃಷ್ಟಿಸಿ ಗೊವಿನ ಚಿತ್ರಕ್ಕೆ ಅರಿಶಿನ ಹಚ್ಚುವುದು, ಹುಲಿಗೆ ಮಸಿಯನ್ನು ಹಚ್ಚುವುದು ಉಂಟು. ನಾವು ಇಲ್ಲಿಯ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಹುದು.

ಚರಿತ್ರೆ.

[1]ರಂಗವಲ್ಲಿಗೆ ೫,೦೦೦ ವರ್ಷಗಳ ಪ್ರಾಚೀನತೆಯಿದೆ ಎಂದು ಹೇಳುತ್ತಾರೆ. ಮಾನವ ಸಂಸ್ಕೃತಿಯ ಆರಮುಭದಲ್ಲಿ ಕಂಡು ಬರುವ ಚಿತ್ರ ಲಿಪಿಯಲ್ಲಿ ಚಿತ್ರಕಲೆಯ ಮಹತ್ವವು ವ್ಯಕ್ತವಾಗುವಂತೆ, ರಂಗೋಲಿಯ ಮೂಲ ಪ್ರೇರಣೆಯೂ ಕಂಡು ಬರುತ್ತದೆ. ಕ್ರಿ. ಶ. ೧೦ನೇ ಶತಮಾನದ ಪಂಪ ಭಾರತದಲ್ಲಿ ಪೂವಾಲಿಗಳ ವರ್ಣನೆಯಿದೆ. ಹರಿಹರ (ಕ್ರಿ.ಶ.೧೨೨೦)ನ ಗಿರಿಜಾ ಕಲ್ಯಾಣದ ಸಿಂಗಾರದ ಕಡೆಗಳು ಎಂಬ ಉಲ್ಲೇಖದಲ್ಲಿ ರಂಗೋಲಿಯ ಪ್ರಾಚೀನ ಹೆಸರು ತಿಳಿಯುತ್ತದೆ. ೧೩-೧೪ನೇ ಶತಮಾನದ ಶಾಸನಗಳಲ್ಲಿ ಪ್ರತಿದಿನ ರಂಗವಲ್ಲೆಯ ಹಾಕುವುದಕ್ಕೆ (೫-೩೨೨-೩೨೯) ದೇವರ ಮುಂದಣ ರಂಗವಲ್ಲಿಗೆ ನಡೆವ ಭತ್ತದ ಮೂಡೆ೨೪"೭-೩೨೯) ಎಂದಿದ್ದು ಇಲ್ಲಿ ರಂಗೋಲಿಗೆ ನೀಡಿದ ಪ್ರಾಶಸ್ತ್ಯ ಅರಿವಾಗುತ್ತದೆ. ನಡುಗನ್ನಡ ಕಾವ್ಯಗಳಲ್ಲಿ ರಂಗೋಲಿಯ ಪ್ರಸ್ತಾವನೆ, ವರ್ಣನೆಗಳನ್ನು ಕಂಡಾಗ ನಮ್ಮ ಸಂಸ್ಕೃತಿಯ ಅವಿನಾಭಾವ ಮನವರಿಕೆಯಾಗುತ್ತದೆ. ನೋಡಿ :

ಮುತ್ತಿನ ಚೂರ್ಣವೀ ದಿನಕೆ ರಂಗವಾಲಿಗೆ ಸಲ್ಲಿಸಬೇಕು (ಭೀಮಕವಿ-ಬಸವಪುರಾಣ)

ಸೌರಭದ ಪೂವಲಿಗಳ ಶೃಂಗರಿಸಿದ ಬೀದಿಗಳ (ಚಾಮರಸ-ಪ್ರಭುಲಿಂಗ ಲೀಲೆ) ಪರಿಚಯ

ಕಡೆಕಾಲ ಪರಿವಿಸ್ತರದ - (ಕುಮಾರ ವಾಲ್ಮೀಕಿ-ತೊರವೆ ರಾಮಾಯಣ)

ಬಗೆ ಬಗೆ ವೃಂದಾವನ ರಂಗವಲ್ಲಿಯನ್ನಿಟ್ಟು (ಪುರಂದರ ದಾಸ)

ಮಂಡಲಗಳ ಮಾಡಿ ರಂಗವಲಿಗಳ ಹಾಕಿ (ಪುರಂದರ ದಾಸ)

ಪರಿದೆಸೆವ ಮುತ್ತಿನ ರಂಗವಲಿಯನಿಕಕಿದರು (ಲಕ್ಷ್ಮೀಶ-ಜೈಮಿನಿ-ಭಾರತ)

ಮರುದಿನ ಸಾರಣೆ ತೋರಣ ಗುಡಿಕೇತು

ನೆರೆರಂಗವಲ್ಲಿ ಪುಷ್ಪವತಿಯ (ರತ್ನಾಕರವರ್ಣಿ- ಭರತೇಶ ವೈಭವ)

ಬಿಡುಮುತ್ತಿನ ರಂಗವಲ್ಲಿಗಳು ಕೆದರ್ದ ಸುರಕೆಂಜರಲರ ಪೂವಲಿಗಳಿಂ (ಷಡಕ್ಷರ ದೇವ_ಶಬರ ಶಂಕರ ವಿಳಾಸ)

ಸಾರನಿಗೈದು ರಂಗವಲ್ಲಿ ಯನ್ನಿಟ್ಟು ಪೂವಲ್ಲಿಗಳ ಬಿಟ್ಟು (ಮುದ್ರಣ-ಅದ್ಭುತ ರಾಮಾಯಣ)

ಹೀಗೆ ಚರಿತ್ರೆಯಲ್ಲಿ ರಂಗೋಲಿಯ ಸಾಂಸ್ಕೃತಿಕ ಅನಿವಾರ್ಯತೆಯನ್ನು ಕಾವ್ಯದ ಸಾಲುಗಳು ಸಾರುತ್ತವೆ. ೨೦ ನೆಯ ಶತಮಾನದಲ್ಲಿ ರಂಗೋಲಿಯು ಶೈಕ್ಷಣಿಕ ಕ್ಷೇತ್ರವನ್ನು ಪ್ರವೇಶಿಸಿತು.. ರವೀಂದ್ರನಾಥ ಠಾಕೋರರ ಶಾಂತಿ ನಿಕೇತನದಲ್ಲಿ ರಂಗೋಲಿಯ ಪ್ರಾದೇಶಿಕ ರೂಪವಾದ 'ಅಲ್ಪನಾ" ಅಭ್ಯಾಸದ ವಿಷಯವಾಯಿತು. ಧಾರ್ಮಿಕ ಆಚರಣೆ ಹಾಗೂ ಶೃಂಗಾರದ ಪ್ರಕಾರಗಳಲ್ಲಿ ಒಂದೆನಿಸಿದ ರಂಗೋಲಿ ವೃತ್ತ ಪತ್ರಿಕೆಗಳ ಮೂಲಕ ಪ್ರಚಾರ ಪಡೆಯಿತು. ಕರ್ನಾಟಕದಲ್ಲಿ

೧. ಭಾರತಿ ಮರವಂತೆ : ರಂಗೋಲಿ, ಪುಟ:೧೨-೧೩.


ರಂಗೋಲಿಯ ಹೊಸ ಹೊಸ ಪ್ರಯೋಗಗಳನ್ನು ಪ್ರಕಟಿಸಿ, ವಿಶಾಲ ಹೊಸ ಆಯಾಮವನ್ನು ನೀಡಿದವರು. ಬಿ.ಪಿ.ಬಾಯಿರಿ. (ಬಾರ್ಕೂರು ಪರಮೇಶ್ವರ ಬಾಯಿರಿ) ರಂಗೋಲಿಯ ಮೂಲ ಆಶಯಕ್ಕೆ ಭಂಗ ಬಾರದಂತೆ ಹೊಸ ಹೊಸ ಸಾಧ್ಯತೆಗಳನ್ನು ಚಿತ್ರಿಸುತ್ತಾ ಒಟ್ಟು ೧೨ ಭಾಗಗಳಲ್ಲಿ ಸುಮಾರು ೨೦೦೦ ಕ್ಕೂ ಹೆಚ್ಚು ರಂಗೋಲಿಯ ವೈವಿಧ್ಯಗಳನ್ನು ಕಲಾ ಪ್ರಪಂಚಕ್ಕೆ ನೀಡಿದ್ದಾರೆ. ಸಂಪ್ರದಾಯ ಮತ್ತು ನವ್ಯತೆಯನ್ನು ಸಮರಸಗೊಳಿಸಿದ್ದಾರೆ. ಪತ್ರಿಕಾ ಮಾಧ್ಯಮದ ಮೂಲಕ ರಂಗೋಲಿ ಕಲೆಯನ್ನು ಜನಪ್ರಿಯಗೊಳಿಸಲು ಹಾಗೂ ಅದರ ಬಗ್ಗೆ ಜನರಿಗೆ ಅರಿವು ಮೂಡಿಸುವಲ್ಲಿ ದುಡಿದ ಅದ್ವಿತೀಯ ಕಲಾವಿದರು.


ಬಿ. ಪಿ. ಬಾಯಿರಿಯವರಿಗೆ ರಂಗವಲ್ಲಿ ಸದಾ ಕಾಡುತ್ತಿದ್ದ ಕಲಾ ವಸ್ತು ಬಾಲ್ಯದಿಂದಲೇ ಇವರಿಗೆ ರಂಗೋಲಿಯಲ್ಲಿ ಆಸಕ್ತಿ ರಂಗವಲ್ಲಿ ಕುರಿತಾಗಿ ತಮ್ಮಲ್ಲಿ ಆಸಕ್ತಿ ಮೂಡುವುದಕ್ಕೆ ತಮ್ಮ ಪರಿಸರವೇ ಕಾರಣವೆನ್ನುತ್ತಾರೆ. ಬಾಯರಿಯವರು ಹಿಂದೆ ಬಾರ್ಕೂರಿನಲ್ಲಿ ಪ್ರತಿವಾರವು ಸಾರ್ವಜನಿಕ ಭಜನೆ ನಡೆಯುತ್ತಿತ್ತು. ಆಗ ಸುತ್ತ ಮುತ್ತಲಿನ ಮನೆಗಳ ಅಂಗಳದಲ್ಲಿ ರಂಗವಲ್ಲಿ ಇಟ್ಟು ಸಿಂಗರಿಸುವುದು ಸಂಪ್ರದಾಯ. ಇದಕ್ಕೆ ಪ್ರತಿಯಾಗಿ "ಸುಧಾ" ವಾರ ಪತ್ರಿಕೆ ಪ್ರತಿ ವಾರವೂ ಇವರ ರಂಗವಲ್ಲಿ ರಚನೆಗಳನ್ನು ಪ್ರಕಟಿಸ ತೊಡಗಿತು. ನಂತರ ಬಾಯಿರಿಯವರು ನಿವೃತ್ತರಾದ ನಂತರ ತಮ್ಮನ್ನು ರಂಗವಲ್ಲಿ ಕಲೆಗೆ ಗಂಭೀರವಾಗಿ ತೊಡಗಿಸಿಕೊಂಡರು ಬೇರೆ ಬೇರೆ ರಾಜ್ಯಗಳ ನುರಾರು ಮಂದಿ ಆಸಕ್ತರೊಡನೆ ಅವರು ಪತ್ರವ್ಯವಹಾರ ಬೆಳೆಸಿದರು ಬದುಕಿರುವ ಹಳೆಯ ತಲೆಗಳನ್ನು ಬೇಟಿಮಾಡಿ ಅಮೂಲ್ಯವಾದ ರಂಗವಲ್ಲಿ ಮಾದರಿಗಳನ್ನು ಸಂಗ್ರಹಿಸ ತೊಡಗಿದರು. ನಂತರ ಇವು ಸಾಹಿತ್ಯ ಕೃತಿಗಳಲ್ಲಿ, ಧಾರ್ಮಿಕ ಗ್ರಂಥಗಳಲ್ಲಿ ಜಾನಪದ ರಚನೆಯಲ್ಲಿ ರಂಗವಲ್ಲಿಯ ವಿಚಾರವನ್ನು ಇವರು ಟಿಪ್ಪಣಿಯಾಗಿ ಬರೆಯ ತೊಡಗಿದರು. ಬಾಯರಿಯವರಿಗೆ ರಂಗವಲ್ಲಿಯ ಕುರಿತು ಮಾತನಾಡಿದಷ್ಟೂ ತೃಪ್ತಿ ಇಲ್ಲ. ರಂಗವಲ್ಲಿ ಸಾಂಕೇತಿಕವೂ ಹೌದು. ಅಮೂಲ್ಯ ಕಲೆಯು ಹೌದು ಎನ್ನುತ್ತಾರೆ. ಅವರು ಶ್ರೀ ಚಕ್ರ ನಾಗಮಂಡಲಗಳಲ್ಲಿ ರಂಗವಲ್ಲಿಯ ಮೂಲ ಕಾಣಬಹುದು. ಸಂತೋಷ ಕೊಡುವುದರೊಂದಿಗೆ ಕಲೆ ಹೇಳುವುದು ರಂಗವಲ್ಲಿ ಅದನ್ನು ಸೊಗಸಾಗಿ ಮಾಡುತ್ತದೆ. ಎನ್ನುವುದು ಬಾಯಿರಿಯವರ ಮತ ಬಾಯಿರಿಯವರ ರಂಗೋಲಿ ಕಲೆಯೂ ಕಲೆಯಲ್ಲ ಎಂದು ಪ್ರತಿಪಾದಿಸಿದ ಕಲಾವಿದರ ಸಂಖ್ಯೆಗೆ ಕೊರತೆಯಿಲ್ಲ. ಇವರು ರಂಗೋಲಿಯ ಬಗ್ಗೆ ಸಮಗ್ರ ಮಾಹಿತಿ ತಿಳಿದವರಾಗಿದ್ದರು. ರಂಗೋಲಿಯಲ್ಲಿ ಅಡಕವಾಗಿರುವ ಸಾಮಾಜಿಕ ಸಾಂಸ್ಕೃತಿಕ ನವ್ಯಕಲಾ ಅಂಶಗಳನ್ನು ವಿವರಿಸಿ ರಂಗೋಲಿ ಒಂದು "ಜಾಗತೀಕ ಕಲೆ" ಎಂದು ಪ್ರತಿಪಾದಿಸುತ್ತಿದ್ದರು. ಇತರ ಕಡೆಗಳಿಗೆ ಹೋಲಿಸಿದರೆ ನಮ್ಮಲ್ಲಿ ರಂಗವಲ್ಲಿ ಕುರಿತು ನಡೆದ ಸಂಶೋಧನೆಗಳು ಏನೂ ಸಾಲದು ಎಂದು ವಿಷಾಧಿಸುತ್ತಿದ್ದರು. ಬಾಯರಿ ಪ್ಯಾರಿಸ್, ಡೆನ್ಮಾರ್ಕ್, ಇಟಲಿ, ಅಮೇರಿಕಾದಿಂದ ತಮಗೆ

ಬಂದಿರುವ ಪತ್ರಗಳನ್ನು ತೋರಿಸಿ ನಮಗೇಕೆ ಈ ಸುಂದರ ಕಲೆಯ ಬಗ್ಗೆ ಆಸಕ್ತಿ ಇಲ್ಲ ಎಂದು ಪ್ರಶ್ನಿಸುತ್ತಾರೆ.

೧೯೬೦ ರಲ್ಲಿಯೇ ರಂಗವಲ್ಲಿಯನ್ನು ಅಧ್ಯಯನ ಮಾಡಿದ ಇವರು "ರಂಗವಲ್ಲಿ" ಎಂಬ ಶಿರ್ಷಿಕೆಯಡಿಯಲ್ಲಿ ಭಾಗ ಒಂದರಿಂದ, ಭಾಗ ಹನ್ನೆರಡರವರೆಗೆ ೧೯೬೭ ರಿಂದ ೧೯೯೨ ರ ವರೆಗೆ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ರಂಗೋಲಿ ಹೂವುಗಳು








ಅಕ್ಕಿ ರಂಗೋಲಿ


ಪ್ರಸ್ತುತ, ರಂಗೋಲಿಯ ಹೂವುಗಳು, ಒಂದು ಮೂಲಾಂಶದಿಂದ ಹೊಸ ಹೊಸ ಹಸೆ ಸಹಸ್ರಾರು, ಹೂವಿನ ಉಯ್ಯಾಲೆ, ಅಕ್ಕಿ ರಂಗೋಲಿ, ಶ್ರೀ ಚಕ್ರ ನಕ್ಷೆ, ರಂಗೋಲಿ ವೃಕ್ಷಗಳು, ನಿರೂಪಣೆ ಇದೆ.
















ಹುಟ್ಟಿದ ಹಬ್ಬ, ವಿವಾಹ, ದೇವತಾ ಪೂಜೆ ಮುಂತಾದ ಶುಭಕಾರ್ಯಗಳಲ್ಲಿ ಜಾಗವು ಪವಿತ್ರವಾಗಿರಬೇಕು. ಅದಕ್ಕಾಗಿ ಅಲ್ಲಿ ಹಸೆ ಹಾಕಬೇಕು. ಹಸೆ ಎಂದರೆ ರಂಗೋಲಿ. ಅದರ ಮೇಲೆ ಮಣೆ ಇಡಬೇಕು. ಮದುಮಕ್ಕಳು, ದೇವರು ಆಸೀನರಾಗಲು ಅದು ಪವಿತ್ರ ಪೀಠ. ಸ್ವಾಗತದ ಚಿಹ್ನೆ. ಆ ಶುಭ ಕಾರ್ಯಕ್ಕಾಗಿ ಬೇಕಾಗುವ ಮಂಗಳ ದ್ರವ್ಯ, ಫಲಪುಷ್ಪಾದಿಗಳನ್ನು ಇಡಲು ಕೂಡಾ ಹಸಮಣೆ ಬೇಕು. ಹಸಮಣೆಯಲ್ಲಿ ಏರು ತಗ್ಗು ಕಾಠಿಣ್ಯ ಭಾವನೆ ಕಾಣಿಸುವ ನಕ್ಷೆಗಳನ್ನು ಬಿಡಿಸುವುದಿಲ್ಲ. ಅಲ್ಲಿ ಮೃದು, ನೆಮ್ಮದಿ, ಭಾವನೆಗಳನ್ನು ಮೂಡಿಸುವ ಪ್ರಧಾನವಾದ ಎಡದಿಂದ ಬಲಕ್ಕೆ ಸಾಗುವ ರೇಖಾ ವಿನ್ಯಾಸಗಳು ಇರುತ್ತದೆ.

ಮನುಷ್ಯಾಕೃತಿಯ ರಂಗೋಲಿ



ಉತ್ತರ ಕನ್ನಡ ಮತ್ತು ಉತ್ತರ ಭಾರತದಲ್ಲಿ ಬರೆಯುವ ರಂಗೋಲಿಯಲ್ಲಿ ನಾವು ಇಂಥಹ ಮನುಷ್ಯಾಕೃತಿಗಳೂ ಇರುತ್ತವೆ.






ಸುರುಗಿ ಹೂವಿನ ಮೊಗ್ಗುಗಳಲ್ಲಿ ಲವಂಗದ ಹಾಗೆ ದಂಟಿನ ತುದಿಯಲ್ಲಿ ದೊಡ್ಡ ಮುತ್ತಿನಂತಹ ಉಂಡೆ ಇರುತ್ತದೆ. ಅದನ್ನು ಹೋಲುವುದರಿಂದ ಈ ನಕ್ಷೆಯನ್ನು "ಸುರಗಿ ರಂಗೋಲಿ" ಎಂದು ಕರೆಯುವುದುಂಟು. ಕೆಲವರಿಗೆ ಹವಳದ ಗೊಲ್ಲೆಗಳಾಗಿವೆ. ಚಿತ್ರದಲ್ಲಿ ತೋರಿಸಲಾದ ೧,೨ ಅಂಕೆಗಳನ್ನು ಬರೆದಿರುವುದು ಈ ಎಲ್ಲಾ ನಕ್ಷೆಗಳ ಮೂಲ ಘಟಕಗಳು, ಅವುಗಳನ್ನೂ ಶಿಸ್ತುಬದ್ಧವಾಗಿ ಹೊಂದಿಸಿ ಬೃಹತ್ತಾದ, ಮಹತ್ತಾದ, ಹಲವು ವಿವಿಧ ರಚನೆಗಳನ್ನು ನಾವು ಮಾಡಬಹುದು.




ಬುಲಾಕು ಮೂಗಿನ ಆಭರಣ. ಅದರಲ್ಲಿ ಮುತ್ತು ರತ್ನಗಳನ್ನು ಕೂಡಿಸುತ್ತಿದ್ದರು. ಅದು ತುಟಿಯ ಮೇಲೆ ಮೂಗಿನ ಕೆಳಗೆ ಅಂದವಾಗಿ ಮಿನುಗುತ್ತಿತ್ತು. ಇಲ್ಲಿ ಕೇಲವೇ ಚುಕ್ಕಿಗಳಿಂದ ಎಷ್ಟು ಬಗೆಯ ಬುಲಾಕುಗಳನ್ನು ರಚಿಸಬಹುದು ಇನ್ನೂ ಹಲವು ನಮೂನೆಗಳನ್ನು ರಚಿಸಬಹುದು ದೇವತಾನುಗ್ರಹ ಪಡೆಯಲು ಆಭರಣ ಪುಷ್ಪಗಳನ್ನು ಅರ್ಪಿಸಬಹುದು. ಹಣ ಇಲ್ಲದವರು ಫಲಪುಷ್ಪ. ಪೂಜಾ ಸಾಮಗ್ರಿ ಅಮೂಲ್ಯ ವಸ್ತುಗಳ ರಂಗೋಲಿ ಬರೆದು ತಮ್ಮ ಕಾಣಿಕೆಗಳೆಂದು ಅರ್ಪಿಸುತ್ತಿದ್ದರು. ರಂಗೋಲಿಗಳಿಗೆ ರಂಗನು ಒಲಿದು ಇಷ್ಟಾರ್ಥಗಳನ್ನು ಅನುಗ್ರಹಿಸಿದ ಕಥೆಗಳಿವೆ.

೧


೨




೩

೪



೫

ಬಂಗಾಳದ ರಂಗೋಲಿಯನ್ನು ಆಲ್ಪನಾ ಎಂದು ಕರೆಯುತ್ತಾರೆ. ಚಿತ್ರ ೧ ರಂಗೋಲಿಗೆ ಆನೆಯ ಆಕೃತಿಯು ಮೂಲವಾಗಿದೆ. ಚಿತ್ರ ೨ ಮತ್ತು ೩ ಲಕ್ಷ್ಮೀ ದೇವಿಗೆ ಗೂಬೆ ವಾಹನ ಆದುದರಿಂದ ಈ ರಂಗೋಲಿಯನ್ನು ಲಕ್ಷ್ಮೀ ಪೂಜೆಗೆ ಬರೆಯುತ್ತಾರೆ. ಚಿತ್ರ ೪ ಮತ್ತು ೫ ಮೀನಿನ ರಂಗೋಲಿಗಳು. ಮೀನು ಅಭಿವೃದ್ಧಿಯ ಸಂಕೇತವಾಗಿದೆ. ಇವುಗಳನ್ನು ಲಕ್ಷ್ಮೀ ಪೂಜೆಗೆ ಮಾತ್ರವಲ್ಲ ಇತರ ಪೂಜೆಗಳಲ್ಲೂ ಬರೆಯುತ್ತಾರೆ.






ರಾಜಸ್ಥಾನದಲ್ಲಿ ರಂಗೋಲಿಗೆ "ಮಾಂಡನಾ" ಎಂದು ಹೇಳುತ್ತಾರೆ. ಅಲ್ಲಿಯ ನಕ್ಷೆಗಳು ಇತರ ಪ್ರದೇಶಗಳಿಗಿಂತ ಬೇರೆ ರೀತಿಯವು. ಇಲ್ಲಿ ಕೊಟ್ಟಿರುವ ನಮೂನೆಗಳಿಗೆ ಸಾಮಾನ್ಯವಾಗಿ ಲಕ್ಷ್ಮೀ ದೇವಿಯ ಹೆಜ್ಜೆ ಗುರುತುಗಳು ಎಂದು ಕರೆಯುತ್ತಾರೆ.

ಚಿತ್ರ ೧ ಇದಕ್ಕೆ ಹಿಂದಿಯಲ್ಲಿ "ಪಂಖೇಕಾ ಪಗಲ್ಯಾ" ಎಂದು ಹೆಸರು. ಇದನ್ನು ಬಾಗಿಲ ಹತ್ತಿರ ಬರೆಯುತ್ತಾರೆ. ಚಿತ್ರ ೨ ಇದನ್ನು "ಫಲಕಾ ಪಗಲ್ಯಾ" ಎಂದು ಕರೆಯುತ್ತಾರೆ. ಇದನ್ನು ಶ್ರಾವಣ ಮಾಸದ ಅಮಾವಾಸ್ಯೆ ದಿನ ಮನೆಯ ಹೊಸ್ತಿಲು ಮುಂದೆ ಬರೆಯುತ್ತಾರೆ. ಚಿತ್ರ ೩ "ಕಾಪದಾ ಹರಿಯಾಲ" ಇದನ್ನು ಶ್ರಾವಣ ಅಮವಾಸ್ಯೆ ದಿನ ಮನೆಯ ಅಂಗಳದಲ್ಲಿ ರಚಿಸುತ್ತಾರೆ. ಚಿತ್ರ ೪ ಅಂವಲಿ ಪೂನೀಕಾ ಚಂಗ್. ಇದನ್ನು ಹೋಳಿ ಹಬ್ಬದ ವೇಳೆ ಚಿತ್ರಿಸುತ್ತಾರೆ. ಆ ಹಬ್ಬದ ಸಮಯ ಚಂಗ್ ಎಂಬ ವಾದ್ಯ ಬಾರಿಸುತ್ತಾ ಪದ ಹೇಳುತ್ತಾರೆ. ರಾಜಸ್ಥಾನದಲ್ಲಿ ಅಳಿಯ ಮಾವನ ಮನೆಗೆ ಹೋದಾಗ ಕೆಲವು ಒಗಟುಗಳಿಗೆ ಉತ್ತರಿಸಬೇಕಾಗುತ್ತದೆ. ಮಾಂಡಲಾ ವಿಷಯದಲ್ಲಿ ಒಂದು ಒಗಟು ಹೀಗದೆ, ಸೂಜಿ ನೂಲು ಬಳಸದೆ ಮಾಡಿದ ಗೋದಡಿಗೆ ಐವತ್ತೂ ಹೂವುಗಳು ? ಉತ್ತರ : ರಂಗೋಲಿ.



ಕಡವಾ ಚೌಥ್ ರಂಗೋಲಿ




ಭಾರತದ ಮಹಿಳೆಯರು ಶುಭವನ್ನು ಕೋರಿ ಅನೇಕ ವೃತಗಳನ್ನು ಆಚರಿಸುತ್ತಾರೆ. ಅಂಥವುಗಳಲ್ಲಿ ಉತ್ತರ ಭಾರತದಲ್ಲಿ ಕಡವಾ ಚೌಥ್ ಎಂಬ ಪತ್ರಕ್ಕೆ ವಿಶೇಷ ಮಹತ್ವವಿದೆ. ಅದನ್ನು ಕಾರ್ತಿಕ ಮಾಸದ ಚೌತಿ ದಿನ ಆಚರಿಸುತ್ತಾರೆ. ಆ ಸಂದರ್ಬದಲ್ಲಿ ಈ ರಂಗೋಲಿಯನ್ನು ಬರೆದು ಪೂಜಿಸುತ್ತಾರೆ. ಇದರಲ್ಲಿ ಕಂಡು ಬರುವ ಆಕೃತಿಗಳು ಅನೇಕ ವಿಷಯಗಳನ್ನು ಸಂಕೇತಿಸುತ್ತದೆ.

ಆ ವೃತ್ತದ ವಿಷಯದಲ್ಲಿ ಹೀಗೊಂದು ಕಥೆಯು ರೂಢಿಯಲ್ಲಿದೆ. ಒಬ್ಬ ರಾಜನಿಗೆ ಏಳು ಮಂದಿ ಪುತ್ರರು. ಒಬ್ಬ ಪುತ್ರಿ ಇದ್ದರು. ಸೋದರರಿಗೆ ಸೋದರಿಯೆಂದರೆ ಪ್ರಾಣ. ಎಲ್ಲರಿಗೂ ಒಟ್ಟಿಗೆ ಕುಳಿತು ಊಟ ಮಾಡಲೇಬೇಕು. ವಿವಾಹ ನಂತರ ಆಕೆ ಕಡವಾ ಚೌಥ್ ವೃತವನ್ನು ಆಚರಿಸ ತೊಡಗಿಸದಳು. ಆ ದಿನ ರಾತ್ರಿ ಆಕೆ ಚೌತಿ ಚಂದ್ರನನ್ನು ನೋಡಿ ಅರ್ಘ್ಯ




ಬಿಟ್ಟು ಊಟ ಮಾಡಬೇಕಾಗಿತ್ತು. ರಾಜಕುಮಾರರಿಗೆ ಹಸಿವೆಯನ್ನು ಸಹಿಸಲಾಗಲಿಲ್ಲ. ಆಕೆಯನ್ನು ಬಿಟ್ಟು ಊಟ ಮಾಡಲಾರರು. ಅದಕ್ಕಾಗಿ ಒಂದು ಮರದ ಆಚೆ ಒಂದು ಜ್ವಾಗೆಗೆ ಸಾರಣೆಗೆಯನ್ನು ಅಡ್ಡ ಹಿಡಿದು ಚಂದ್ರೋಯುದದಂತೆ ಕಾಣಿಸಿದರು. ಸೋದರಿಯು ಅದು ತನಗೆ ಚಂದ್ರನ ದರ್ಶನವೆಂದು ನಂಬಿ ಸೋದರರೊಡನೆ ಕುಳಿತು ಊಟ ಮಾಡಿದಳು. ವೃತ ಭಂಗವಾದ ಕಾರಣ ಆಕೆಯು ಗಂಡನಿಗೆ ಕಷ್ಟಪ್ರಾಪ್ತವಾಯಿತು. ಆದ್ದರಿಂದ ಆಕೆಗೆ ಅತೀವ ದುಃಖವಾಯಿತು. ಅದನ್ನು ಕಂಡು ಪಾರ್ವತಿಯು ಬಂದು “ನೀನು ಅಪರಾಧ ಮಾಡಲಿಲ್ಲ, ಬ್ರಿತ್ಯಾತಿಶಯದಿಂದ ನಿನ್ನ ಸೋದರರು ಮಾಡಿದ ಉಪಾಯದ ದೆಸೆಯಿಂದ ನಿನ್ನ ವೃತ ಭಂಗವಾಯಿತು ಎಂದು ಹೇಳಿ ಅದಕ್ಕಾಗಿ ಪರಿಹಾರ ವಿಧಾನವನ್ನು ಸೂಚಿಸಿದಳು. ಆ ಪ್ರಕಾರ ಆಚರಿಸಿ ರಾಜಕುಮಾರಿಯು ವ್ರತವನ್ನು ಪೂರ್ತಿಗೊಳಿಸಿದಳು. ಆದ್ದರಿಂದ ಕಷ್ಟ ನಿವಾರಣೆಯಾಗಿ ಮುಂದೆ ಬಹುಕಾಲ ಸುಖದಲ್ಲಿದ್ದಳು.

ಎಳೆ ರಂಗೋಲಿ



ಮಲೆನಾಡಿನಲ್ಲಿ ಹೆಚ್ಚಾಗಿ ಹುಡಿಗಳಿಂದ, ಹಿಟ್ಟುಗಳಿಂದ, ಎಳೆ ರಂಗೋಲಿಗಳನ್ನು ಬಿಡಿಸುತ್ತಾರೆ. ರಂಗೋಲಿ ಹುಡಿಗಳನ್ನು ಮುಷ್ಟಿ ತುಂಬ ಹಿಡಿದುಕೊಂಡು ಬೆರಳು ಸಂದುಗಳಿಂದ






ರಂಗೋಲಿ ವಿನ್ಯಸಗಳು

ಇಳಿಬಿಟ್ಟು ಏಕಕಾಲದಲ್ಲಿ ಎರಡು ಮುರು ಗೆರೆಗಳನ್ನು ಕೈಬೀಸಿ ಎಳೆಯುತ್ತಾರೆ. ಯಾವ ಉಪಕರಣಗಳನ್ನು ಬಳಸದೆ ನೇರವಾಗಿ ಸಮಾನಾಂತರವಾಗಿ ಬಿಡುಗೈಯಿಂದ ತ್ವರಿತವಾಗಿ ಇಂತಹ ರಂಗೋಲಿ ನಕ್ಷತ್ರಗಳನ್ನು ರಚಿಸುವಂತವರ ಕಲಾಕೌಶಲ್ಯವನ್ನು ಎಷ್ಟು ಮೆಚ್ಚಿದರೂ ಸಾಲದು. ಕರಾವಳಿಯಲ್ಲಿ ಎಳೆ ರಂಗೋಲಿಗಳಿಗಿಂತ ಚುಕ್ಕಿ ರಂಗೋಲಿಗಳು ಹೆಚ್ಚು ರೂಢಿಯಲ್ಲಿವೆ.

ಎಡಬದಿಯ ಮೇಲು ಭಾಗದಲ್ಲಿರುವುದನ್ನು ತಮಿಳಿನಲ್ಲಿ ಮಾಣಕ ಕೋಲಂ" ಎನ್ನುತ್ತಾರೆ. ಅದರ ಅರ್ಥ ಮದುವೆ ರಂಗೋಲಿ. ಅವಿವಾಹಿತರು ಆ ರಂಗೋಲಿಯನ್ನು ಶ್ರದ್ಧೆಯಿಂದ ಕೆಲವು ಕಾಲ ಬರೆದರೆ ವಿವಾಹಯೋಗ ಬರುವುದು ಎಂದು ಹೇಳುವವರಿದ್ದಾರೆ. ಕೆಲವು ರೇಖೆ, ಬಣ್ಣಗಳ ಮಿಲನದಿಂದ ಒಂದು ದೈವಶಕ್ತಿ ನಿರ್ಮಾಣವಾಗುವುದು. ಅದು ನಮ್ಮ ಮೇಲೆ ಪ್ರಭಾವ ಬೀರಬಲ್ಲದು ಎಂದು ನಂಬುತ್ತಾರೆ.



ರಂಗೋಲಿ ಕಲಾಕೃತಿ ರಚನೆಯಲ್ಲಿ ನಿರತರಾಗಿರುವ ಕಲಾವಿದರು.

ಹೀಗೆ ಅವರು ಭಾರತದಾದ್ಯಂತ ತಿರುಗಾಡಿ, ರಂಗೋಲಿ ಕಲೆಯ ಬಗ್ಗೆ ಸಮಗ್ರ ಜ್ಞಾನವನ್ನು ಹೀಗೆ ಅವರು ರಂಗೋಲಿ ಕಲೆಯು ಅಪ್ಪಟ ಜಾನಪದ ಕಲೆ ಎಂದು ಕರೆದಿದ್ದಾರೆ. ಅಲ್ಲದೆ ಇದು ಮನಸ್ಸಿನ ಮದವನ್ನು ಕೊಡುತ್ತದೆ. ಅದರ ಅರ್ಥ ಪೂರ್ಣತ್ವ ಸಂಕೇತಗಳನ್ನು ಹಲವಾರು ದೇಶ ವಿದೇಶಗಳಲ್ಲಿ ಆಸಕ್ತಿಯಿಂದ ಅಭ್ಯಸಿಸಿರುತ್ತಾರೆ. ಕರ್ನಾಟಕದಲ್ಲಿ ಮಾತ್ರ



ಈ ಕಲೆ ಸರಕಾರ ಹಾಗೂ ಅಕಾಡೆಮಿಯಿಂದ ಕಡೆಗಣಿಸಲ್ಪಟ್ಟಿವೆ. ರಂಗೋಲಿಯನು ನಮ್ಮ ಆಧುನಿಕ ಕಲಾವಿದರು, ಕರ್ನಾಟಕದ ಲಲಿತಕಲಾ ಅಕಾಡೆಮಿಯು ಒಂದು ಕಲಾ ಮಾಧ್ಯಮವೆಂದು ಒಪ್ಪಿಕೊಳ್ಳಲೇ ಇಲ್ಲ.

ಆ ದುಃಖ ಅವರನ್ನು ಕೊನೆಯವರೆಗೂ ಭಾದಿಸುತ್ತಿತ್ತು. ಬಂಗಾಳ, ಗುಜರಾತ್, ರಾಜಸ್ಥಾನ್, ತಮಿಳುನಾಡು, ಆಂಧ್ರ ಮೊದಲಾದ ಕಡೆಗಳಲ್ಲಿ ರಂಗೋಲಿಯನ್ನು ಒಂದು ಕಲಾ ಮಾಧ್ಯಮ ಎಂದು ಅಲ್ಲಿಯ ಕಲಾ ಅಕಾಡೆಮಿಗಳು ಒಪ್ಪಿಕೊಂಡಿವೆ ಮಾತ್ರವಲ್ಲಾ ಹಲವು ಪುಸ್ತಕಗಳನ್ನು ಪ್ರಕಟಿಸಿ, ಈ ಕಲೆ ಉಳಿಸುವಂತೆ ಪ್ರಯತ್ನಿಸಿದೆ. ಆದರೆ ಕರ್ನಾಟಕದಲ್ಲಿ ಬಾಯಿರಿ ಒಬ್ಬರೇ ಏಕಾಂಗಿಯಾಗಿ ಕಿಸೆಯಿಂದ ಕಾಸು ಹಾಕಿಕೊಂಡು ರಂಗೋಲಿ ಕಲೆಯನ್ನು ಪ್ರಚಾರ ಮಾಡುತ್ತಿದ್ದರು. ಕನ್ನಡದ ಹೆಚ್ಚಿನ ಪತ್ರಿಕೆಗಳಲ್ಲಿ ಹಲವು ವರ್ಷಗಳಿಂದ ಅವರ "ಚಿತ್ರ ಕುಟೀರ", "ಚಿತ್ರ ಜೀವಿ", "ಚಿತ್ರ ಪ್ರೇಮಿ" ಹೆಸರುಗಳಲ್ಲಿ ಸತತವಾಗಿ ಮುದ್ರಿಸಲಾಯಿತು. ಎರಡು ಬಾರಿ ತರಂಗವು ರಂಗೋಲಿ ವಿಶೇಷಾಂಕಗಳನ್ನು ಮಾಡಿದಾಗ ಬಾಯಿರಿಯವರ ಮಾರ್ಗದರ್ಶನ ಪಡೆದಿತ್ತು. ಅವರ ನೂರಾರು ರಂಗೋಲಿಗಳು, ಹಲವಾರು ಕಲಾ ಲೇಖನಗಳು ತರಂಗದಲ್ಲಿ ಪ್ರಕಟವಾಗಿವೆ. ಇಲ್ಲದೆ ಇವು ಮುಂದಿನ ರಂಗೋಲಿ ಕಲಾವಿದರಿಗೆ ಮಾರ್ಗದರ್ಶಕವಾಗಿವೆ. ಬಾಯಿರಿಯವರು ರಚಿಸುತ್ತಿದ್ದ ರಂಗೋಲಿಯು ಮೂಲ ಆಶಯಕ್ಕೆ ಭಂಗಬಾರದಂತೆ ಹೊಸ ಹೊಸ ಸಾಧ್ಯತೆಗಳನ್ನು ಚಿತ್ರಿಸುತ್ತಾ ಒಟ್ಟು ೧೨ ಭಾಗಗಳಲ್ಲಿ ಸುಮಾರು ೨೦೦೦ ಕ್ಕೂ ಹೆಚ್ಚು ವೈವಿಧ್ಯಗಳನ್ನು ಕಲಾ ಪ್ರಪಂಚಕ್ಕೆ ನೀಡಿದ್ದಾರೆ.

ಬಿ. ಪಿ. ಬಾಯಿರಿಯವರು ತಮ್ಮ ರಂಗೋಲಿ ಪುಸ್ತಕಗಳಲ್ಲಿನ ಪೀಠಿಕೆಗಳಲ್ಲಿ ಈ ರೀತಿ ವಿವರಿಸುತ್ತಾ ...


The execution of these designs is done by simple materials which are found in local areas and cost next to nothing. The ingredients used are rice powder mixed with water or powdered quartz a kind of white stone. It is therefore generally white in colour. On special occasions different colour and materials are used. They are dry colour powders produced from soils of different coulours, leaves, charcoal, plant roots, burnt earth, bark of trees, colour stones, corns etc., available locally and easily. It is an interesting feature of some festivals. Rangavalli Patterns are made by the beautiful natural objects like flowers, leaves, cereals, vegetables, grains, fruits, Not only it takes very little time to execute Rangavalli with these ingredients but also they add colour and beauty to the designs. If a little quantity of glue is mixed with the powder or ready-made paints are used the designs any be made to last longer. Such permanent designs can be seen on ceiling also at some place.


Rangavalli means creepers painted in colours. The expressions Rangarekhavali meaning a group of coloured lines. Rangavalli- a group of colours, Rangoli must have been derived from the word Rangavalli. It is practised in all parts of the country. It is interesting to observe how the design forms, names and techniques also vary from region to region and place to place. In Uttar Pradesh it is called Sanjhi. The reason for this may be that these decorations are meant for exhibition in the evening. It is named in Rajastan as Mandana, in Bengal as Alpana, in Maharasta as Rangavalli and so on by different names in other provinces. In the Bengal women folk draw a tree with the rice powder, sit around it and sing devotional songs for the grace of God. In Keral during the "Onam" natural things like multicoloured flowered, flower petals are abundantly used.


Rangavalli is a part of our culture, an art useful and applicable also in engineering designs. This is matter of pride for lovers of art and culture. It is hoped that this book will be useful to social educational organisers for the use at the social ceremonies, art students, art students, various skilled artisans and craftsmen as these designs can be adapted for many wooden concrete and iron article, domestic decorations, embroidery, brick etc., and various manufacture of industrial products. If this volume is appreciated and encouraged by the public the thiord volume will be published in colours in due course. Suggestions to make this publication better and more useful will be gratefully accepted. We could develop an approach that will bring fresh life to this old art. In tagore's Shantinikethan the Rangavalli patterns are drawn not only daily by some students but also on such suspicious days as the New Year's day, Vasanta Utsava, Tagore's Birthday, Shilpa Utsava (Industry festival), vriksharopana Utsava (Tree planting festival) and occasions of the visits of dignitaries by the teacher and students of the Kala Bhavan. It desirale the the students in the educational institutions be made to take interest in this art.


My grateful thanks are due to the sisters and brothes who have been helpful in collecting the traditional patterns and encouraging my publish.


ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು






































ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು













ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು












ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು







ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು





ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು





ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು
















ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು

















ಬಿ. ಪಿ. ಬಾಯಿರಿಯವರ ಕೆಲವು ವಿಶಿಷ್ಟ ರಂಗೋಲಿ ವಿನ್ಯಾಸಗಳು







ಅಧ್ಯಾಯ ಆರು

ಬಿ. ಪಿ. ಬಾಯಿರಿಯವರ ಕಲಾ ಸಾಹಿತ್ಯ ಕೃತಿಗಳು

ಒಬ್ಬ ಕಲಾವಿದನಿಗೆ ತನ್ನ ಕಲೆಯಲ್ಲಿಯೇ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ದಿನಗಳನ್ನು ಕಳೆಯುಲು ಬಯಸುತ್ತಾನೆ. ಅದರಲ್ಲೂ ಚಿತ್ರಕಲಾವಿದನು ಚಿತ್ರಬರೆಯುವುದರಲ್ಲೆ ತನ್ನ ಪ್ರಪಂಚವನ್ನು ಸೃಷ್ಟಿಸುತ್ತಾನೆ. ಒಂದು ರೀತಿಯಲ್ಲಿ ಓದುವುದು, ಬರೆಯುವುದು ತುಂಬಾ ಕಡಿಮೆಯುಂದೇ ಹೇಳಬಹುದು. ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕೆಲಸವನ್ನು ಮಾಡುವವರು ತುಂಬಾ ಅಪರೂಪವೆನ್ನಬಹುದು. ಅಂತಹ ಅಪರೂಪದ ಕೆಲಸವನ್ನು ಹುಟ್ಟುಹಾಕಿದವರು ಬಿ. ಪಿ. ಬಾಯಿರಿಯನ್ನಬಹುದು. ಬಿ. ಪಿ. ಬಾಯಿರಿಯವರು ಒಬ್ಬ ಕಲಾ ಶಿಕ್ಷಕರಾಗಿ, ಚಿತ್ರಕಲಾವಿದರಾಗಿ, ವಿಶೇಷವೆಂದರೆ ಒಬ್ಬ ಕಲಾಸಾಹಿತಿಗಳಾಗಿ, ಗುರುತಿಸಿಕೊಂಡವರು. ಶಿಕ್ಷಣ ಕ್ಷೇತ್ರದಲ್ಲಿ ಇದ್ದಿರುವುದರಿಂದಲೋ ಸಾಹಿತಿಗಳ ಪರಿಚಯದಿಂದ ಕಲಾ ಸಾಹಿತ್ಯದ ಪರಿಚಯವನ್ನು ಕಂಡು ಕೊಂಡಿರಬಹುದು. (ಬೆಳೆಸಿಕೊಂಡಿರುವರು) ಇವರು ಕಲಾ ಸಾಹಿತ್ಯಕ್ಕೆ ಒಂದು ಹೊಸ ಚೈತನ್ಯವನ್ನು ಕೊಟ್ಟವರು. ಬರವಣಿಗೆ ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಮೀಸಲಾಗಿರುವುದರಿಂದಲೋ ಏನೋ ಈ ಕ್ಷೇತ್ರದವರೇ ಕಲಾ ಸಾಹಿತ್ಯವನ್ನು ಸೃಷ್ಟಿಸಿದವರು ಆದರೇ ಬಾಯಿರಿಯವರು. ಚಿತ್ರ ಬರೆಯುವುದೊಂದೇ ಅಲ್ಲ ಕಲೆಯ ಇತಿಹಾಸ ಕಲಾ ಚಿಂತನೆ, ಇದರ ಹರವು ಕಲಾವಿದರ ನೋವು, ನಲಿವು, ಇತ್ಯಾದಿಯುನ್ನು ಬರವಣಿಗೆಯ ಮೂಲಕ ಹೊರತಂದರು. ಕರ್ನಾಟಕದಲ್ಲಿ ಆ ಸಂದರ್ಭದಲ್ಲಿ ಕಲಾ ಸಾಹಿತ್ಯ ಬೆಳೆವಣಿಗೆಯಾಗಿದ್ದಿಲ್ಲವೆಂದೇ ಹೇಳಬಹುದು. ಶಿವರಾಮ

ಕಾರಂತರು, ಅ.ನ.ಕೃಷ್ಣರಾಯರಂತಹ ಸಾಹಿತಿಗಳೇ ಕಲೆಯ ಕುರಿತಾದ ಕೆಲವು ಲೇಖನಗಳನ್ನು ಹೊರತಂದಿದ್ದಾರೆ. ಕಲೆಯ ಕುರಿತಾಗಿಯೇ ಗಂಭೀರ ಅಧ್ಯಯನಗಳು ಆ ಸಂದರ್ಭದಲ್ಲಿ ನಡೆಯುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಬಾಯಿರಿಯವರು, ಹಿರಿಯ ಸಾಹಿತಿಗಳ ಒಡನಾಟವಿಟ್ಟುಕೊಂಡು ಕಲೆಯ ಕುರಿತಾಗಿ ೧೯೭೦-೮೦ ರ ದಶಕದಲ್ಲಿ ಅನೇಕ ಪುಸ್ತಕಗಳನ್ನು ಹೊರತಂದಿದ್ದಾರೆ.

ಬಿ. ಪಿ. ಬಾಯೇರಿಯವರು ಭಾರತೀಯ ಹಾಗೂ ಪಾಶ್ಚಿಮಾತ್ಯ ಕಲೆಯ ಕುರಿತು ಅಧ್ಯಯನ ಮಾಡಿ, ಕೆಲವು ಪುಸ್ತಕಗಳನ್ನು ಪ್ರಕಟಿಸಿದರು. ಇದರಲ್ಲಿ ಕಲಾವಿದರು, ಚಿಕ್ಕಮಕ್ಕಳ ಚಿತ್ರಕಲೆ, ಮತ್ತು ರಂಗೋಲಿ ಚಿತ್ರಕಲೆಯ ಕುರಿತಾದ ಪುಸ್ತಕಗಳಾಗಿವೆ. ಬಿ. ಪಿ. ಬಾಯಿರಿಯವರು ಚಿತ್ರಕಲಾ ಕ್ಷೇತ್ರಕ್ಕೆ ಮಹತ್ತರ ಕೊಡುಗೆಯನ್ನೇ ಕೊಡಮಾಡಿದ್ದಾರೆ. ಇವರು ಪ್ರಕಟಿಸಿದ ಪುಸ್ತಕಗಳಿಗೆ ತಾವೇ ಮುನ್ನುಡಿಯನ್ನು ಬರೆದಿದ್ದಾರೆ. ಇವರು ಬರೆದ ಮುನ್ನುಡಿಯಲ್ಲಿಯೇ ಇವರ ಕಲಾಸಾಹಿತ್ಯಾಭಿರುಚಿಯನ್ನು ಅರಿಯಬಹುದು. ಒಂದು ವಿಷಯದ ಕುರಿತು ಬರವಣಿಗೆ ಮಾಡಬೇಕಾದರೆ ಆ ವಿಷಯದ ಅಪಾರ ಜ್ಞಾನ ತಿಳಿದುಕೊಂಡಿರಬೇಕು. ಆ ವಿಷಯಕ್ಕೆ ಸಂಬಂಧಿಸಿದಂತೆ ಪೂರಕ ಮಾಹಿತಿಯನ್ನು ಪಡೆದುಕೊಳ್ಳಬೇಕು. ಆ ವಿಷಯದಲ್ಲಿನ ಜ್ಞಾನಿಗಳ ಸಲಹೆಯನ್ನು ಪಡೆದುಕೊಳ್ಳಬೇಕು. ಅಂದಾಗ ಮಾತ್ರ ಆ ವಿಷಯವನ್ನು ಪರಿಪೂರ್ಣವಾಗಿ ಹಾಗೂ ರಸವತ್ತಾಗಿ ಬರವಣಿಗೆ ಮಾಡಲು ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಇಂಗ್ಲಿಷದಂತಹ ಅಧಿಕ ಬಳಕೆಯುಲ್ಲಿರುವ ಅನೇಕ ಭಾಷೆಗಳ ಜ್ಞಾನವಿರಬೇಕು. ಈ ಕುರಿತು ಬಾಯಿರಿಯವರು ಜಾಗತಿಕರ ಚಿತ್ರಕಲೆ ಎಂಬ ಪುಸ್ತಕದ ಪ್ರಸ್ತಾವನೆಯಲ್ಲಿ ಹೀಗೆ ವಿವರಿಸಿದ್ದಾರೆ.

ಮಾನವನ ಬದುಕಿನಲ್ಲಿ ಕಲೆಯು ಹಾಸುಹೊಕ್ಕಾಗಿ ಬೆಳೆದು ಬಂದಿದೆ. ಈಗೀನ ಚಿತ್ರದಲ್ಲಿ ಅಭಿರುಚಿ ತೋರಿಸುವವರ ಹಾಗೂ ಚಿತ್ರ ರಚಿಸುವವರ ಸಂಖ್ಯೆಯು ಹೆಚ್ಚಾಗಿದೆ ! ಕಲೆಯನ್ನು ನಿಜವಾಗಿ ಸಂವೇದಿಸಿ ಆನಂದ ಪಡೆಯಬೇಕಾದರೆ ದೇಶ ವಿದೇಶಗಳ ತರತರಹದ ಕಲೆಗಳ ಇತಿಹಾಸದ ಅರಿವು ಅಗತ್ಯ. ಅದರ ಕುರಿತು ಹೆಚ್ಚಿನ ಜ್ಞಾನವು ಕಲಾ ವ್ಯಾಸಂಗಿಗಳಿಗೂ, ವಿಶೇಷ ಕಲಾನುರಾಗಿಗಳಿಗೂ ಅವಶ್ಯಕ. ಆದರೆ ಸಂಕ್ಷಿಪ್ತ ಸಾಮಾನ್ಯ ತಿಳುವಳಿಕೆಯು ಮಾತ್ರ ಸಮಸ್ತ ಪ್ರೇಕ್ಷಕರಿಗೂ ಬೇಕಾದುದು ಅಂಥವರಿಗಾಗಿ ಈ ಪುಸ್ತಕವನ್ನು ಬರೆಯಲಾಗಿದೆ. ಶಾಲೆಗಳಲ್ಲಿ ಹಲವು ವಿಷಯಗಳು ಕಲಿಸಲ್ಪಡುತ್ತವೆ. ಅವುಗಳೊಟ್ಟಿಗೆ ಕಲೆಯ ಇತಿಹಾಸದ ಈ ಪ್ರಾಥಮಿಕ ಜ್ಞಾನವನ್ನೂ ನೀಡುವುದು ವಿಹಿತ.

ಕಲೆಯ ಇತಿಹಾಸ ಅರಿಯಲು ಕಲೆಗಾರರ ಚರಿತ್ರೆ ತಿಳಿಯಬೇಕು. ಕಲೆ ಮತ್ತು ಕಲೆಗಾರರ ಇತಿಹಾಸಗಳು ಪ್ರತ್ಯೇಕವಾದುವುಗಳಲ್ಲ ಅದನ್ನು ನಮ್ಮ ಭಾರತದ ಕಲೆ ಮತ್ತು ಆಧುನಿಕ ಕಲೆಯ ವಿಚಾರಗಳನ್ನು ಒಳಗೊಂಡಿದೆ. ಈ ವಿಷಯವನ್ನು ಕುರಿತು ಭಾರತೀಯ

ಚಿತ್ರಕಲೆ ಮತ್ತು ನಮ್ಯಕಲೆ ಹಾಗೂ ಕಲೆಗಾರರು ಎಂಬ ಮೂರು ಪುಸ್ತಕದಲ್ಲಿ ವಿವರಿಸಲಾಗಿದೆ.

ಉಚ್ಚ ಕಲಾಪರೀಕ್ಷೆಯ ವಿದ್ಯಾರ್ಥಿಗಳಿಗೆ ಕಲೆಯ ಇತಿಹಾಸವು ಒಂದು ಅಭ್ಯಾಸದ ವಿಷಯವಾಗಿದೆ. ಉಚ್ಚ ಕಲಾಭ್ಯಾಸಿಗಳಿಗೆ ಶಿಕ್ಷಕನಾಗಿಯೂ ಪರೀಕ್ಷಕನಾಗಿಯೂ ಕೆಲಸ ಮಾಡಿದ್ದೆ. ಆಗ ಕಲೆಯ ಇತಿಹಾಸ ಕುರಿತು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಕನ್ನಡದಲ್ಲಿ ತಕ್ಕ ಪುಸ್ತಕಗಳು ಇಲ್ಲದ ಕಾರ್ಣ ಉಂಟಾದ ಅನಾನುಕೂಲತೆಗಳನ್ನು ಅನುಭವಿಸಿದ್ದೆ. ಈ ಪುಸ್ತಕವು ಆ ಕೊರತೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಬಲ್ಲದು ಎಂದು ಬಾಯಿರಿಯವರು ಹೇಳುತ್ತಿದ್ದರು.

ಇಂಗ್ಲೀಷ ಭಾಷೆಯಲ್ಲಿ ಚಿತ್ರಕಲೆಯ ಕುರಿತು ಅಪಾರ ಗ್ರಂಥಗಳಿವೆ ಆದರೆ ಕನ್ನಡದಲ್ಲಿ ಅತೀ ವಿರಳ, ಆ ಕೊರತೆಯನ್ನು ಯಥಾಶಕ್ತಿ ನೀಗಿಸಬೇಕೆಂಬ ಇಚ್ಛೆ ಇದ್ದರೂ ಕಲಾ ಸಾಹಿತ್ಯವನ್ನು ಕೇಳುವವರೇ ಕಮ್ಮಿ ಎಂಬ ನಿರುತ್ಸಾಹ ಅಂತಹ ವೇಳೆಯಲ್ಲಿ ಕಲಾಭಿಮಾನಿ ಶ್ರೀ ಎ. ಈಶ್ವರಯ್ಯನವರು ನಾಡಿಗಾಗಿ ಬರೆಯಬೇಕಾದುದು ಆಯಾ ವೃತ್ತಿಯವರ ಅನುಭವಿಗಳ ಹೊಣೆ. ಆಗ ಶ್ರೀ ಎ. ಈಶ್ವರಯ್ಯನವರು ಕಲಾ ಲೇಖನಗಳನ್ನು ಹೆಚ್ಚಾಗಿ ಬರೆಯುತ್ತಿದ್ದರು. ಎ. ಈಶ್ವರಯ್ಯನವರು ಬಾಯಿರಿಯವರಿಗೆ ಇಂತಹ ಪುಸ್ತಕಗಳನ್ನು ಬರೆಯುವುದು ನಿಮ್ಮ ಕರ್ತವ್ಯ ಎಂದು ಹೇಳಿ ಹುರುದುಂಬಿಸಿದರು. ಇಂತಹ ಪುಸ್ತಕಗಳನ್ನು ಪ್ರಕಟಪಡಿಸಬೇಕಾದರೆ ಪ್ರಕಾಶಕರ ಪಾತ್ರವು ಮುಖ್ಯ ಯಾಕೆಂದರೆ ಯಾವ ಪುಸ್ತಕಗಳು ಹೆಚ್ಚು ಮಾರಾಟವಾಗುತ್ತವೆಯೋ ಅಂತಹ ಪುಸ್ತಕಗಳನ್ನು ಪ್ರಕಟ ಪಡಿಸುತ್ತಾರೆ. ಈ ಸಂದರ್ಭದಲ್ಲಿ ಇದೇ ಆದದ್ದು ಕಲೆಯ ಕುರಿತು ಪುಸ್ತಕಗಳನ್ನು ಓದುವವರು ತುಂಬಾ ವಿರಳವೆನ್ನಬಹುದು. ಆದ್ದರಿಂದ ಇಂತಹ ಪುಸ್ತಕಗಳನ್ನು ಪ್ರಕಟಪಡಿಸಲು ಪ್ರಕಾಶಕರು ಮುಂದೇ ಬರಲು ಹಿಂದೇಟು ಹಾಕುತ್ತಾರೆ. ಈ ಪುಸ್ತಕಗಳನ್ನು ಪ್ರಕಟಿಸಲು ಸಹಕರಿಸಿದವರು ಧಾರವಾಡದ ಸಮಾಜ್ ಪುಸ್ತಕಾಲಯದವರು ಇವರನ್ನು ಸ್ಮರಿಸಲೇಬೇಕು.

ಬಿ.ಪಿ.ಬಾಯರಿಯವರು ಕಲಾ ವಲಯದಲ್ಲಿನ ಸಾಹಿತ್ಯದ ಕೊರತೆಯನ್ನು ಕಂಡುಕೊಂಡೇ ಈ ಕೆಲಸಕ್ಕೆ ಕೈ ಹಾಕಿದ್ದಾರೆನ್ನಿಸುತ್ತದೆ. ಇವರ ಬರವಣಿಗೆಯ ಶೈಲಿಯೂ ಅತ್ಯಂತ ಸರಳವಾದುದು ಅಷ್ಟೇ ನೇರವಾದುದು. ಇವರು ಸಾಕಷ್ಟು ಪುಸ್ತಕಗಳನ್ನು ಓದಿಕೊಂಡು ಸಮರ್ಥವಾದ ಬರವಣಿಗೆಯಿಂದ ಕಲಾ ಪುಸ್ತಕಗಳನ್ನು ರಚಿಸಿದ್ದಾರೆ. ಬಾಯಿರಿಯವರು ಕಲೆಗೆ ಸಂಬಂಧಿಸಿದಂತೆ ಸುಮಾರು ೨೦ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಬಹುತೇಕ ಚಿತ್ರಕಲೆಗೆ ಸಂಬಂಧಿಸಿವೆ. ಕೆಲವು "ರಂಗೋಲಿ ಕಲೆಗೆ, ಕೆಲವು ಮಕ್ಕಳ ಚಿತ್ರಕಲೆಗೆ ಸಂಬಂಧಿಸಿವೆ.

* ಮಕ್ಕಳ ಚಿತ್ರಕಲೆಗೆ ಸಂಬಂಧಿಸಿದ ಪುಸ್ತಕಗಳು

೧. "ಚಿಕ್ಕಮಕ್ಕಳ ಚಿತ್ರಕಲೆ"

೨. 'ಚಿಕ್ಕ ಮಕ್ಕಳ ಚಿತ್ರಕಲೆ' ಪ್ರಚಾರ ಪುಸ್ತಕಮಾಲೆ-೧೬೨

* ಚಿತ್ರಕಲೆಗೆ ಸಂಬಂಧಿಸಿದ ಪುಸ್ತಕಗಳು

೧. ಜಾಗತಿಕ ಚಿತ್ರಕಲೆ

೨. ನವ್ಯಕಲೆ ಹಾಗೂ ಕಲೆಗಾರರು

೩. ಕಲೆಗಾರರ ಕಥೆಗಳು

೪. 'ರಂಜಾಳ ಗೋಲಾಪ ಶೆಣೈ'

೫. ಚಿತ್ರ ಲೇಖನ

೬. ಚಿತ್ರಕಲೆ

೭. ಚಿತ್ರಕಲೆಯ ಚಿಕ್ಕ ಕಥೆಗಳು

೧. 'ಚಿಕ್ಕ ಮಕ್ಕಳ ಚಿತ್ರಕಲೆ'

ಈ ಪುಸ್ತಕವು ೧೯೬೯ ರಲ್ಲಿ ಪ್ರಥಮ ಮುದ್ರಣ ಕಂಡಿತು. ಇದನ್ನು ಮೈಸೂರು ವಿಶ್ವವಿದ್ಯಾಲಯವು ಪ್ರಚಾರ ಪುಸ್ತಕ ಮಾಲೆಯಾಗಿ ಪ್ರಕಟಿಸಿತು. ಇದೇ ಪುಸ್ತಕವು ೧೯೭೧ ರಲ್ಲಿ ಮರುಮುದ್ರಣಗೊಂಡಿತು. ಒಟ್ಟು ೫,೦೦೦ ಪ್ರತಿಗಳು ಮಾರಾಟವಾದವು. ಈ ಪುಸ್ತಕವು ಕಲಾಶಿಕ್ಷಕರಿಗೆ ಮತ್ತು ಚಿತ್ರಕಲಾ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗುತ್ತದೆ ಎಂಬ ಉದ್ದೇಶವಿಟ್ಟುಕೊಂಡು ರಚಿಸಿದ್ದಾರೆ. ಈ ಪುಸ್ತಕದ ಪೀಠಿಕೆಯಲ್ಲಿ ಬಾಯಿರಿಯವರು ಈ ರೀತಿಯಲ್ಲಿ ವಿವರಿಸುತ್ತಾರೆ. ಶಿಶು ಚಿತ್ರಕಲೆಯು ಎಲ್ಲ ಮಕ್ಕಳ ಪಾಲಕರಿಗೂ ಶಿಕ್ಷಕರಿಗೂ ತಿಳಿದಿರಬೇಕಾದ ವಿಚಾರವಾಗಿದೆ. ಏಕೆಂದರೆ ಈ ಕಲಾ ಶಿಕ್ಷಣವು ಮಕ್ಕಳನ್ನು ಕಲಾವಿದರನ್ನಾಗಿ ತರಬೇತುಗೊಳಿಸುವುದಕ್ಕೋಸ್ಕರ ಅಲ್ಲ ಇದು ಮಗುವಿನ ಭಾವಾಭಿವ್ಯಕ್ತಿಗೆ, ಕಲ್ಪನಾ ಶಕ್ತಿಗೆ ಮತ್ತು ರಚನಾ ಸಾಮರ್ಥ್ಯಗಳ ಬೆಳೆವಣಿಗೆಗೆ ಅವಕಾಶ ದೊರಕುತ್ತದೆ. ಮುಂದೆ ಮಗು ಸ್ವತಂತ್ರ ಬದುಕಿನಲ್ಲಿ ಯಾವುದೇ ವೃತ್ತಿಯನ್ನು ಕೈಕೊಳ್ಳಲಿ ಅದರಲ್ಲಿ ತನ್ನದೇ ಆದ ರಚನಾ ವೈಶಿಷ್ಟ್ಯತೆಯನ್ನು ಬಳಸಿ ಅದನ್ನು ಹೆಚ್ಚು ಉತ್ತಮವಾಗಿ ನಿರ್ವಹಿಸಲು ಶಕ್ತನಾಗುವನು. ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಲ್ಲನು. ಇದಕ್ಕೆ ಕಲಾರಚನೆಯು ನೆರವಾಗುತ್ತದೆ. ಇದು ಕಲಾ ತಜ್ಞರ ಸಿದ್ಧಾಂತವಾಗಿದೆ. ಇಂತಹ ಚಿತ್ರಕಲಾ ಶಿಕ್ಷಣದ ಇತಿಹಾಸ, ವಿಧಾನ, ಉದ್ದೇಶ,

---

೧. ಬಿ. ಪಿ. ಬಾಯಿರಿ : ಚಿಕ್ಕ ಮಕ್ಕಳ ಚಿತ್ರಕಲೆ, ಪುಟ ಸಂಖ್ಯೆ ೧ ರಿಂದ ೨.

ಉಪಯೋಗಗಳನ್ನು ತಿಳಿಸುವುದು ಈ ಪುಸ್ತಕದ ಉದ್ದೇಶವಾಗಿದೆ.

ಈ ಪುಸ್ತಕವು ಚಿಕ್ಕಮಕ್ಕಳ ಚಿತ್ರಕಲೆ, ಚಿತ್ರಕಲಾ ಪಾಠಗಳು ಅಂದು-ಇಂದು, ಮಕ್ಕಳ ಕೈಗೆ ಕುಂಚ ಬಣ್ಣಗಳನ್ನು ಕೊಟ್ಟಾಗ ಅವರು ಏನನ್ನು ಚಿತ್ರಸುತ್ತಾರೆ ? ಮಕ್ಕಳ ಮತ್ತು ಆದಿಮಾನವ ಚಿತ್ರಕಲೆಗಳಲ್ಲಿ ಸಾಮ್ಯ ವಯಸ್ಸಿಗನುಗುಣವಾಗಿ ಮಕ್ಕಳ ಮಾನಸಿಕ ಬೆಳವಣಿಗೆಯ ಹಂತಗಳು, ಚಿತ್ರಕಲೆಯ ಇತಿಹಾಸ ಶಿಶು ಚಿತ್ರಕಲಾ ಶಿಕ್ಷಕ, ಮಕ್ಕಳ ಚಿತ್ರಕಲಾ ಶಿಕ್ಷಕ, ಕಲಾ ಶಿಕ್ಷಣದ ಉಪಕರಣಗಳು, ಶಿಶು ಚಿತ್ರಕಲೆಯ ಜನಕ ಪ್ರೊ: ಸಿಜೆಕ್ ಹೀಗೆ ವಿಷಯಾನುಕ್ರಮಗಳಾಗಿ ವಿಂಗಡಿಸಿಕೊಂಡು ವಿವೇಚಿಸಿದ್ದಾರೆ.

ಚಿಕ್ಕ ಮಕ್ಕಳ ಚಿತ್ರಕಲೆ ಎಂದರೇನು ? ಮಕ್ಕಳು ಚಿತ್ರರಚನೆಯಲ್ಲಿ ಸಹಜವಾಗಿ ಪಾಲ್ಗೊಳ್ಳುವುದು. ಸ್ವತಂತ್ರ ರಚನೆ ಮಕ್ಕಳ ಆಸಕ್ತಿ, ವಿವೇಚನಾ ಶಕ್ತಿಯನ್ನು ಕಾಣಬಹುದಾಗಿದೆ. ಚಿಕ್ಕಮಕ್ಕಳ ಚಿತ್ರಕಲೆಯ ವೈಶಿಷ್ಯಗಳೇನು ? ಅದನ್ನು ಏಕೆ ಮೆಚ್ಚಬೇಕು ? ಎಂದು ಬಾಯಿರಿಯವರು ಹೀಗೆ ವಿವೇಚಿಸುತ್ತಾರೆ. ಮಗುವಿನ ತೊದಲ್ನುಡಿಯು ಅಸ್ಪಷ್ಟವಾಗಿದ್ದರೂ ಅರ್ಥೈಸುವಂತಿರುತ್ತವೆ. ಅದು ಮಗುವಿನ ತಂದೆ ತಾಯಿಗಳು ಶೀಘ್ರದಲ್ಲಿ ಅರ್ಥೈಸುತ್ತಾರೆ. ಅಂದರೆ ಚಿತ್ರಭಾಷೆಯ ಆ ಕ್ಷೇತ್ರದವರಿಗೆ ಅರ್ಥೈಸಲು ಸುಲಭಸಾಧ್ಯ ಆದರೆ ಬೇರೆಯವರಿಗೆ ಅರ್ಥವಾಗಲಿಕ್ಕಿಲ್ಲ.

ಚಿತ್ರಗಳೆಂದರೆ ಮನದಲ್ಲಿ ಮೂಡಿದುದ್ದನ್ನು ಫಲಕಗಳ ಮೇಲೆ ಗುರುತಿಸುವುದು. ಹಾಗೆಯೇ ಭಾವಪ್ರದರ್ಶನ ಮಾಡಿ ಆತ್ಮತೃಪ್ತಿಪಟ್ಟು ಅವರೆ ಹಿಗ್ಗುತ್ತಾರೆ. ಅವರ ರಚನಾ ಸ್ಫೂರ್ತಿಯನ್ನು ಹತ್ತಿಕ್ಕಬಾರದು. ಅವರ ಚಿತ್ರಗಳನ್ನು ಅರ್ಥೈಸಿಕೊಂಡು ಪ್ರೋತ್ಸಾಹಿಸಿ ಉತ್ತೇಜನ ನೀಡಬೇಕು. ಅಂದಾಗ ಮಗುವಿನ ಮಾನಸಿಕ ಬೆಳವಣಿಗೆ ಕುಂಟಿತವಾಗುವುದಿಲ್ಲ. ಮಗುವು ಚಿತ್ರಿಸುವಾಗ ತನ್ನದೇ ಆದ ಒಂದು ಮಾಯಾ ಪ್ರಪಂಚವನ್ನೇ ನಿರ್ಮಿಸುತ್ತದೆ. ಸಾದಾ ಸರಳ ಸಂಕೇತಗಳಿಂದ ಚಿತ್ರಿಸಿ ಅಂತಃಸ್ಫುರಣ ಬಣ್ಣಗಳನ್ನು ಕೊಡುತ್ತದೆ. ಮಗುವಿನ ಆಕರ್ಷಕ ರೇಖೆಗಳ ಬಣ್ಣಗಳು, ಅವನ ಮಾನಸಿಕ ಬಯಕೆಗಳನ್ನು ಗುರುತಿಸಬಹುದಾಗಿದೆ.

ಮಕ್ಕಳು ಸಾಮಾನ್ಯವಾಗಿ ಎಂತಹ ಚಿತ್ರಗಳನ್ನು ರಚಿಸುತ್ತಾರೆ. ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಗಿಡ-ಮರ, ಸೂರ್ಯ-ಚಂದ್ರ, ಎತ್ತು (ಹಸು) ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ಸಾಕು ಪ್ರಾಣಿಗಳು, ನದಿ, ಬೆಟ್ಟ, ಹೀಗೆ ದಿನ ನಿತ್ಯ ನೋಡುವ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಮಕ್ಕಳು ಚಿತ್ರರಚನೆಗೆ ಬೇಕಾಗುವ ಉಪಕರಣಗಳು, ಬಳಸುವ ರೀತಿ, ಬೋಧಕರು ಮಗುವಿನ ಮನಸ್ಸನ್ನು ಅರಿತುಕೊಂಡು ಬೋಧಿಸುವ ವಿವಿಧ ಕ್ರಮಗಳನ್ನು ಈ ಪುಸ್ತಕದಲ್ಲಿ ಸವಿಸ್ತಾರವಾಗಿ ರಚಿಸಿದ್ದಾರೆ. (ವಿವೇಚಿಸಿದ್ದಾರೆ) ಇದು ಚಿತ್ರಕಲೆಯ ಮಕ್ಕಳಿಗೆ ಪಾಲಕರಿಗೆ ಹಾಗೂ ಶಿಕ್ಷಕರಿಗೆ ಪ್ರಯೋಜನ ಪುಸ್ತಕವಾಗಿದೆ.

ಶಿಶು ಚಿತ್ರಕಲೆಯ ಜನಕನೆಂದೇ ಆಪ್ತಿಯಾದ ಪ್ರೊ : ಸಿಜೆಕ್‌ನು ವಿವಿಧ ಮಕ್ಕಳ ಮನೋಭಾವನೆಯನ್ನು ಗುರುತಿಸಿಕೊಂಡು ತರಗತಿಗಳನ್ನು ನಡೆಸುತ್ತಿದ್ದನು. ಅವರಿಗೆ ಇಷ್ಟ ಬಂದಂತೆ ಚಿತ್ರಬರೆಯಲು ಹೇಳುತ್ತಿದ್ದನು. ಮಕ್ಕಳ ಚಿತ್ರಗಳನ್ನು ಕೂಡಿಸಿಕೊಂಡು ಅವುಗಳಲ್ಲಿ ಅಬ್ಧುತ ಲೋಕವನ್ನೇ ಕಂಡು ಕೊಂಡನು. ಇದರಿಂದ ಉತ್ತೇಜನಾದ ಸಿಜೆಕ್ ಆತ್ಮವಿಶ್ವಾಸದಿಂದ ಮಿತ್ರರ ಸಹಾಯದಿಂದ ಮಕ್ಕಳ ಕಲಾತರಗತಿಗಳನ್ನು ಪ್ರಾರಂಭಿಸಿದನು. ಇವನು ಮಕ್ಕಳಿಗೆ ದಿನನಿತ್ಯದ ಘಟನೆಗಳನ್ನು ಕಥೆ ಹೇಳುವುದು. ಜಾತ್ರೆ ಹಬ್ಬಗಳ ಕುರಿತು ಚರ್ಚಿಸಿ ಮಕ್ಕಳಿಗೆ ಚಿತ್ರರಚನೆಮಾಡಲು ಹೇಳುತ್ತಿದ್ದನು. ಈ ಮಕ್ಕಳು ಅತ್ಯಂತ ಉತ್ಸಾಹ ಹಾಗೂ ಕುತೂಹಲದಿಂದ ತರಗತಿಯಲ್ಲಿ ಪಾಲ್ಗೊಂಡು ಚಿತ್ರರಚನೆಯಲ್ಲಿ ತೊಡಗುತ್ತಿದ್ದರು. ಸಿಜೆಕನ ತರಗತಿಗಳನ್ನು ನೋಡಲು ಪ್ರತಿ ವರ್ಷವೂ ವಿದೇಶಗಳಿಂದ ಸಾವಿರಾರು ಮಂದಿ ವಿಯೆನ್ನಾಕ್ಕೆ ಭೇಟ್ಟಿಕೊಡುತ್ತಿದ್ದರು. ಹೀಗೆ ಬಾಯಿರಿಯವರು ಮಕ್ಕಳಿಗೆ, ಪೋಷಕರಿಗೆ ಹಾಗೂ ಶಿಕ್ಷಕರಿಗೆ ಉಪಯುಕ್ತವಾಗುವಂತೆ ಅನೇಕ ದೇಶವಿದೇಶಗಳ ಕಲಾತಜ್ಞರು ನಡೆಸಿದ ಮಕ್ಕಳ ಚಿತ್ರಕಲೆಯ ಕುರಿತು ಈ ಪುಸ್ತಕದಲ್ಲಿ ವಿವೇಚಿಸಿದ್ದಾರೆ.

ಇದೇ ಪುಸ್ತಕವನ್ನು ೧೯೭೧ ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಚಾರ ಪುಸ್ತಕ ಮಾಲೆಯಾಗಿ ಪ್ರಕಟಿಸಿತ್ತು. ಆ ಸಂದರ್ಭದಲ್ಲಿ ಪುಸ್ತಕ ಬೇಡಿಕೆಯ ಕಾರಣ ೧೯೯೬ ರಲ್ಲಿ ಪ್ರತಿಭಾ ಗ್ರಂಥಮಾಲೆ ಧಾರವಾಡ ಇವರು ಪುಸ್ತಕ ಪ್ರಕಟಪಡಿಸಿದರು. ಇಲ್ಲಿ ಕೆಲವು ವಿಷಯಗಳನ್ನು ಪರಿಷ್ಕರಿಸಿ ಹಲವು ಚಿತ್ರಗಳನ್ನು ಸೇರಿಸಿ ಪ್ರಕಟಿಸಲಾಗಿದೆ. ಮಗು ಮೊದಲು ತೊದಲನುಡಿಯಂತೆ ಮಾತನಾಡಲು ಕಲಿಯುತ್ತದೆಯೋ, ಈ ಚಿತ್ರಭಾಷೆಯು ಅವನ ಮಾನಸಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಮಗು ತನ್ನ ತಂದೆ ತಾಯಿ ಮನೆ ಪರಿಸರದಲ್ಲಿನ ಪ್ರಾಣಿ, ಪಕ್ಷಿ, ಗಿಡ, ಮರ ಹೀಗೆ ಹಲವಾರು ವಸ್ತುಗಳ ಚಿತ್ರರೂಪವನ್ನು ಗೆರೆಯ ಮೂಲಕ ಬಣ್ಣದ ಮೂಲಕ ಹೊರಹಾಕುತ್ತದೆ. ಇಲ್ಲಿ ಮಗುವಿನ ಸ್ವತಂತ್ರ ಭಾವನೆಗಳನ್ನು ಮತ್ತು ವಿವೇಚನಾ ಶಕ್ತಿಯನ್ನು ಚಿತ್ರ ತಜ್ಞರು ಅರಿಯಬಹುದು. ಮುಂದೆ ತನ್ನ ಯಾವುದೇ ಕೆಲಸವನ್ನು ನಿರ್ವಹಿಸಲು ಚಿತ್ರಕಲೆಯು ಸಹಾಯಕವಾಗಿದೆ. ಈ ಪುಸ್ತಕದಲ್ಲಿ ಮಕ್ಕಳು ರಚಿಸಿದ ಕೆಲವು ಚಿತ್ರಗಳನ್ನು ಕಾಣಬಹುದು.

ಅಮ್ಮನ ಕೈಯಲ್ಲಿ ಹಾಲಿನ ಲೋಟ, ಬಾವಿ, ಡಬ್ಬಿಯೊಳಗೆ ತಿಂಡಿಗಳು, ಮರ, ಸೂರ್ಯೋದಯ, ನೀರು ತರುತ್ತಿರುವ ಅಮ್ಮನಿಗೆ ನೆರಳಿಗಾಗಿ ಮರ, ಎತ್ತಿನಗಾಡಿ, ಲೋಟ ಹರಿವಾಣದಲ್ಲಿ ರೊಟ್ಟಿಗಳು, ಸರೋವರದಲ್ಲಿ ಮೀನುಗಳು, ಸುತ್ತಲೂ ಮರಗಳು, ನನ್ನ ಮನೆ, ನನ್ನ ಅಕ್ಕ, ಗಿಡದಲ್ಲಿ ಹಕ್ಕಿ ಹೀಗೆ ಕೆಲವು ಚಿತ್ರಗಳನ್ನು ಇಲ್ಲಿ ಕಾಣಬಹುದು. ಇಲ್ಲಿ ಮಕ್ಕಳು ಸ್ವಚ್ಚಂದವಾಗಿ ಸರಳ ರೇಖೆಯ ಮೂಲಕ ವಿಷಯಕ್ಕೆ ರೂಪನೀಡಿದ್ದಾರೆ. ಜೊತೆಗೆ

ದಯೇ ಕರುಣೆ, ಪ್ರೀತಿಯಂತಹ ತುಳಮುಳವನ್ನು ಹೊರ ಹಾಕಲು ಪ್ರಯತ್ನ ಮಾಡಿದ್ದಾರೆ. ಸಿಜೆಕ್‌ನು ಪ್ರಯೋಗಿಸಿದ ಒಂದು ಮಗುವಿನ ಚಿತ್ರವನ್ನು ಇಲ್ಲಿ ನೋಡಬಹುದು. [೨]ಒಮ್ಮೆ ಒಂದು ಮಗುವು ಆಯತಾಕಾರದ ಮೇಲೆ ತ್ರೀಕೋನ ಎಳೆದು ಮನೆಯ ಚಿತ್ರರಚಿಸಿತು. ಸಿಜೆಕನು ಅದನ್ನು ಮೆಚ್ಚಿ ಪ್ರಶಂಶಿದನು. ಅದಕ್ಕೆ ಆಮಗುವು ಇದನ್ನು ನೀವು ಮೆಚ್ಚುತ್ತೀರಿ. ಈ ಚಿತ್ರವು ತಪ್ಪು ಎಂದು ನನ್ನ ಹಿರಿಯರು ಹೇಳುತ್ತಾರೆ. ಏಕೆಂದರೆ ಮಾಡು ಗೋಡೆಗಿಂತ ಮುಂದಕ್ಕೆ ಇರಬೇಕಂತೆ ಇಲ್ಲವಾದರೆ ಮನೆ ನೀರು ಗೋಡೆ ಮೇಲೆ ಇಳಿದು ಮನೆ ಕುಸಿಯುತ್ತದೆಯಂತೆ ಅಲ್ಲದೇ ಕೆಳಗಿ ಮೆಟ್ಟಲು ದೊಡ್ಡದು ಮೇಲಿನ ಮೆಟ್ಟಲು ಚಿಕ್ಕದಾಗಬೇಕಂತೆ ಎಂದು ಹೇಳಿತು. ಆದರೆ ತುಸು ಹೊತ್ತಿನಲ್ಲಿ ಆ ಮಗುವು ನಗಾಡಿತು. ಸಿಜೆಕನು ಮಗುವಿನ ಕಾರಣವನ್ನು ಪ್ರಸ್ನಿಸಿದ ಮಗುವಿನ ಜವಾಬು ನನ್ನ ಚಿತ್ರದ ಮೇಲೆ ಮಳೆ ಬೀಳಲು ನಾನು ಬಿಡುತ್ತೇನೆಯೇ ? ಮಳೆ ಬೀಳುವುದೂ ಇಲ್ಲ ಈ ಗೋಡೆ ಕುಸಿಯುವುದು ಇಲ್ಲ. ಮೋಡ ಗೋಡೆಗಿಂತ ಮುಂದಕ್ಕೆ ನೀಡಿರಬೆಕೇನ್ನಬಹುದು ಭೌತಶಾಸ್ತ್ರ. ಮಗು ರಚಿಸಿದ್ದು ಕಲೆ, ಅವೆರಡೂ ಬೇರೆ ಬೇರೆ ಸೊಗಸಾಗಿ ಮಾಡಿದ್ದೇ ಕಲೆ ಆತನ ಕಲಾ ತರಗತಿಯಲ್ಲಿ ಚಿತ್ರರಚನೆಗಾಗಿ ವಸ್ತುಗಳ ಸಂಗ್ರಹ ಇಲ್ಲ. ಸೃಜನಾತ್ಮಕ ಗುಣವು (Cretive faculty) ನಶಿಸಿದ ನಂತರ ವಸ್ತು ಚಿತ್ರಗಳಿಗೆ ಅವಕಾಶ ನೀಡಬೇಕೆಂದು ಹೇಳುತ್ತಿದ್ದನು.

ಇನ್ನೊಂದು ಮಗು ರಚಿಸಿದ ಚಿತ್ರದಲ್ಲಿ ಒಬ್ಬ ತಾಯಿ ತಲೆ ಮೇಲೆ ಬಿಂದಿಗೆ ಹೊತ್ತು ನೀರು ತರುತ್ತಿರುವಳು. ಬಯಲಿನಲ್ಲಿ ಬರುತ್ತಿರುತ್ತಿರುವುದರಿಂದ ಸೂರ್ಯನ ಪ್ರಕಾಶ ಬಿಸಿಲು ತಾಯಿಯ ಮೇಲೆ ಬೀಳಬಾರದೆಂದು ಆಕೆಯ ಪಕ್ಕ ದೊಡ್ಡ ಮರದ ಚಿತ್ರವನ್ನು ಬರೆದಿದೆ. ಇಲ್ಲಿ ಆ ಮಗುವಿನಲ್ಲಿ ತಾಯಿಯ ಬಗ್ಗೆ ಇರುವ ಕಾಳಜಿ, ಪ್ರೀತಿಯನ್ನು ಸೂಚಿಸುತ್ತದೆ. ಮಗುವಿನ ಮನಸ್ಸು ಕಲ್ಮಶವಾದುದು, ಪರಿಶುದ್ಧವಾದುದು ಎಂದು ಅರಿತುಕೊಳ್ಳಬಹುದು.

೨. "ನವ್ಯಕಲೆ ಹಾಗೂ ಕಲೆಗಾರರು"

ಎಂಬ ಪುಸ್ತಕವನ್ನು ಧಾರವಾಡದ ಪ್ರತಿಭಾ ಗ್ರಂಥಮಾಲೆಯವರು ೧೯೮೭ ರಲ್ಲಿ ಪ್ರಥಮ ಮುದ್ರಣ, ೧೯೯೦ ರಲ್ಲಿ ದ್ವಿತೀಯ ಮುದ್ರಣ ಹೊರ ತಂದರು. ಬಿ. ಪಿ. ಬಾಯಿರಿಯವರು ಮುನ್ನುಡಿಯಲ್ಲಿ ನವ್ಯಕಲೆಯ ಕುರಿತು ಹೀಗೆ ಪ್ರಸ್ತಾಪಿಸಿದ್ದಾರೆ. [೩]ಆಧುನಿಕ ಕಲೆಯೆಂದರೆ ಹಿಂದಿನ ಕಲೆಗಿಂತ ಬೇರೆಯಾದುದು. ಪ್ರಾಚೀನ ಕಾಲದಿಂದಲೂ ಕಲೆಯಲ್ಲಿ ಆಗಾಗ ನವ್ಯತೆಯು ತಲೆದೋರಿತ್ತು. ಕಲೆಯನ್ನು ಸಂಪನ್ನ ಮಾಡಿತ್ತು. ಅದು ಆ ಕಾಲದ ಸಂಸ್ಕೃತಿಯ ವಿಕಾಸಕ್ಕೂ ಪರಿಸ್ಥಿತಿಗೂ ಸಂಬಂಧಿಸಿತ್ತು. ನಮಗೆ ಆಧುನಿಕ ಕಲೆಯೆಂದರೆ

೨. ಬಿ.ಪಿ.ಬಾಯಿರಿ : ಚಿಕ್ಕ ಮಕ್ಕಳ ಚಿತ್ರಕಲೆ, ಪುಟ ಸಂಖ್ಯೆ.೮೮.
೩. ಬಿ.ಪಿ.ಬಾಯಿರಿ : ನವ್ಯಕಲೆ ಹಾಗೂ ಕಲೆಗಾರರು, ಪುಟಸಂಖ್ಯೆ – ೧೦ ರಿಂದ ೭.

ನಮ್ಮ ಕಾಲದಲ್ಲಿ ಹೊರಬಂದ ಕಲೆ, ಇದನ್ನು ನಾವು ಆಧುನಿಕ ಅಥವಾ ಸಮಕಾಲಿನ ಕಲೆ ಅನ್ನುವುದಕ್ಕಿಂತಲೂ, ನವ್ಯಕಲೆ ಎಂದು ಹೇಳುವುದು ಹೆಚ್ಚು ರೂಢಿಯಾಗಿದೆ. ವಿಜ್ಞಾನದ ಬೆಳವಣಿಗೆ ಮತ್ತು ಇತರ ಪರಿಸ್ಥಿತಿಗಳ ದೆಸೆಯಿಂದ ಚಿತ್ರಕಲೆಯಲ್ಲಿ ಒಂದು ಶತಮಾನದಿಂದೀಚೆ ಮುಖ್ಯವಾಗಿ ಯುರೋಪಿನಲ್ಲಿ, ಹಿಂದೆಂದೂ ನಡೆಯದಿದ್ದಷ್ಟು ಕ್ರಾಂತಿ ಆಗಿದೆ. ಕಲೆಯ ಬಗ್ಗೆ ಭಾವನೆಗಳು, ಶೈಲಿಗಳು ಬದಲಾಗುತ್ತಿವೆ. ಇವತ್ತು ನವ್ಯ ಎನಿಸಿಕೊಂಡ ಕೃತಿಯು ನಾಳೆ ಹಳೆಯ ಪರಂಪರೆ ಯೆನಿಸುತ್ತದೆ. ಸಾಹಿತ್ಯ ಸಂಗೀತಾದಿ ಇತರ ಲಲಿಕಕಲೆಗಳ ಮೇಲೂ ಆಧುನಿಕತೆಯ ಛಾಯೆ ಬಿದ್ದಿದೆ. ಆದರೆ ಅವೆಲ್ಲಕಿಂತ ಚಿತ್ರಕಲೆಯ ಮೇಲೆ ನವ್ಯತೆಯ ಪ್ರಭಾವವು ಅಧಿಕವಾಗಿದೆ. ಚಿತ್ರಕಲಾಲೋಕವನ್ನು ಅಲ್ಲೋಲ-ಕಲ್ಲೋಲ ಮಾಡಿದೆ.

ಕಲೆಯು ನಿಂತ ನೀರಾಗಬಾರದು. ಬದಲಾವಣೆಯು, ಬೆಳೆಯುವಿಕೆಗಳು ಜೀವಂತವಾಗಿರುವದರ ಲಕ್ಷಣಗಳು. ಬದಲಾವಣೆಯೆಂದರೆ ಮುನ್ನಡೆ ಆಗಬೇಕು. ಈಗೀಗ "ಇದ್ದಕ್ಕಿಂದಂತೆ ಚಿತ್ರಿಸುವ ಕೆಲಸವನ್ನು ಕ್ಯಾಮರಾವು ಮಾಡುತ್ತದೆ. ಆದುದರಿಂದ ಅದು ಯಂತ್ರದ ಕಾರ್ಯವಾಗಿದೆ" ಎಂದು ಕಾರಣವನ್ನು ಕೊಟ್ಟು, ಕೃತಿರಚನೆಯಲ್ಲಿ ಸಾದೃಶ್ಯತೆಯ ಅಗತ್ಯವನ್ನು ತಳ್ಳಿಹಾಕುವ ವಾದವು ಪ್ರಬಲವಾಗುತ್ತಿದೆ. ತದ್ರೂಪರಚನೆಯಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಆ ರಚನೆಗಳನ್ನು ಜನತೆಯು ವಿಮರ್ಶಿಸಬಲ್ಲರು. ಅರ್ಥಮಾಡಿಕೊಂಡು ಆನಂದಿಸಬಲ್ಲುದು. "ತದ್ರೂಪಕೃತಿಗಳಲ್ಲೂ ಕಲೆಗಾರನು ಕ್ಯಾಮರಾದಂತೆ ಇದ್ದಕ್ಕಿದಂತೆ ಚಿತ್ರಿಸುವುದಿಲ್ಲ. ಇದರಿನಲ್ಲಿ ಕಾಣುವುದಕ್ಕಿಂತಲೂ ಉತ್ತಮವಾಗಬೇಕೆಂದು, ಬುದ್ಧಿಯನ್ನು ಉಪಯೋಗಿಸಿ ಕೌಶಲ್ಯದಿಂದ ಸಂಯೋಜಿಸಿ, ಪುನಃ ರೂಪಿಸುತ್ತಾನೆ. ಆದುದರಿಂದ ಅದರಲ್ಲೂ ಸೃಜನಾತ್ಮಕ ಗುಣವಿರುತ್ತದೆ" ಎಂದು ಆನಂದ ಕುಮಾರಸ್ವಾಮಿಯವರು ಹೇಳಿದ್ದಾರೆ. ಇವತ್ತಿನ ಸ್ಥಿತಿಯಲ್ಲಿ ಸಾದೃಶ್ಯ ಚಿತ್ರವನ್ನು ಮಾಡಲಾರದವರೂ ಕೂಡ ಕೃತಿಗಳನ್ನು ರಚಿಸಿ, ಅವುಗಳಲ್ಲಿ ಕಲೆಯ ಗುಣ ಇರಲಿ, ಇಲ್ಲದಿರಲಿ, ಅಂಥವುಗಳನ್ನು ನವ್ಯಕೃತಿ ಎಂದು ಹೆಸರಿಸಿ ಸ್ಥಾನಗಳಿಸಬಹುದಾಗಿದೆ.ತದ್ರೂಪ ರಚಿಸಲು ಬಲ್ಲವರು ಕೂಡ ಆ ಮಾರ್ಗವನ್ನು ತೊರೆದು, ಕ್ಷಿಪ್ರಪ್ರಸಿದ್ಧಿ ಪಡೆಯುವ ಅಕಾಂಕ್ಷೆಯಿಂದ ನವ್ಯಕಲೆಗಾರರಾದ ಉದಾಹರಣೆಗಳಿವೆ. "ನೈಜರೂಪ ಚಿತ್ರಗಳನ್ನೇ ಮಾಡುತ್ತ ಇದ್ದರೆ, ತಾವು ಬೇಗ ಮತ್ತು ಸುಲಭದಲ್ಲಿ ಖ್ಯಾತರಾಗುವುದಿಲ್ಲ" ವೆಂದು ಅವರ ಅಭಿಪ್ರಾಯ.

"ನವ್ಯಕಲೆಯಲ್ಲಿ ವಸ್ತುವಿನ ಬಾಹ್ಯ ಸೌಂದರ್ಯವನ್ನು ತೋರಿಸುವುದಿಲ್ಲ. ಅದರ ಆತ್ಮ, ಅಂತರಂಗಗಳನ್ನು ನಮಗನಿಸಿದಂತೆ ಚಿತ್ರಿಸುತ್ತೇವೆ. ಗುಣಹೀನನಾದ ಸುರೂಪಿ ಮಿತ್ರನಿಗಿಂತ ಕುರುಪಿಯಾದರೂ, ಗುಣವಂತನನ್ನೇ ಮೆಚ್ಚುವುದಿಲ್ಲವೇ ?" ಎಂಬ ನವ್ಯಕಲೆಗಾರರ ವಾದವನ್ನು ತಪ್ಪೆನ್ನಲಾಗದು. ಆದರೆ ಪ್ರೇಕ್ಷಕರಿಗೆ ನವ್ಯಕೃತಿಗಳಲ್ಲಿ ಆಕಾರಗಳು-ವಿಕಾರಗಳಾಗಿವೆ ಎಂಬ

ಅನುಭವವಾಗುತ್ತದೆ. ಇತರ ಅಂತರಂಗಿಕ ಗುಣಗಳು ಅವುಗಳಲ್ಲಿ ಇವೆಯೋ ? ಇಲ್ಲವೋ? ಏನು ಉಂಟು ? ಎಂಬುದನ್ನು ಅವರು ಅರಿಯಲಾರರು. ಆದುದರಿಂದ ಒಂದು ನವ್ಯ ಕೃತಿಯ ಬಗ್ಗೆ ಇಲ್ಲದ ಗುಣಗಳನ್ನು ಹೇಳಿ, ಪ್ರಚಾರಬಲದಿಂದ ಮುಗ್ಧರಾದ ಕಲಾಭಿಮಾನಿಗಳನ್ನು ಮರುಳುಗೊಳಿಸುವ ಸಾಧ್ಯತೆ ಉಂಟು. ನಿಜಕ್ಕೂ ಅದರ ಬಗ್ಗೆ ಹೇಳುವವರು ಇಲ್ಲದಿದ್ದರೆ, ಜನತೆಯು ತಿಳಿಯಲಾರದೆ ಅದು ಇದ್ದೂ ಇಲ್ಲದಂತಾಗುತ್ತದೆ. ತಮ್ಮ ಕಣ್ಮನಗಳಿಗೆ ಅರ್ಥ, ಆನಂದ ನೀಡದಿದ್ದರೂ "ನವ್ಯಕೃತಿಗಳನ್ನು ಬುದ್ಧಿವಂತರು ಹೊಗಳುತ್ತಾರೆ. ನಾವು ಕೂಡ ಹಾಗೆ ಮಾಡಬೇಕು. ಇಲ್ಲವಾದರೆ ದಡ್ಡರೆನಿಸಿಕೊಳ್ಳುತ್ತೇವೆ". ಎಂಬ ಭಾವನೆಯಿಂದ ಜನರು ಅಪ್ರಮಾಣಿಕರಾಗಿ ಮೆಚ್ಚುಗೆಯನ್ನು ಪ್ರದರ್ಶಿಸುವುದು ಸಾಮಾನ್ಯವಾಗಿದೆ.

ಕಲೆಯು ಒಂದು ಭಾಷೆ. ಒಬ್ಬನಿಗೆ ಒಂದು ಭಾಷೆಯು ಗೊತ್ತಿಲ್ಲವಾದರೆ ಅದರ ಶಬ್ದಾರ್ಥ, ವ್ಯಾಕರಣಗಳನ್ನು ಕಲಿಸಿ ಅದನ್ನು ತಿಳಿಯುವಂತೆ ಮಾಡುವ ಪದ್ಧತಿ ಇದೆ. ಆದರೆ ನವ್ಯಕಲೆಗಾರರು "ತಾವು ಹಾಗೆ ಮಾಡಲು ಬದ್ಧರಲ್ಲ ಮತ್ತು ಆ ಸಂವೇದನೆಯನ್ನು ತಿಳಿಸಲಾಗುವುದಿಲ್ಲ" ಎಂದು ವಾದಿಸುವುದುಂಟು. ಆ ಚಿತ್ರವು ಕಣ್ಣಿಗೆ ಚಂದ ಕಾಣುವುದಿಲ್ಲ. ಮನಸ್ಸಿಗೆ ಅರ್ತವಾಗುವುದಿಲ್ಲ. ಹಾಗೇಕೆ ಮಾಡಿದಿರಿ" ಎಂದು ವಿಚಾರಿದಾಗ, "ಒಂದು ಕೃತಿಯು ಕಲೆಗಾರನಿಗೆ ಸುಂದರವೆನಿಸಿದರೆ ಸರಿ. ಅದು ಇತರರಿಗೂ ಚಂದವೆನಿಸಬೇಕಾಗಿಲ್ಲ, ಕಲೆಗಾರನಿಗೆ ತನ್ನ ಇಚ್ಛಾನುಸಾರ ಚಿತ್ರಮಾಡಲು ಸ್ವಾತಂತ್ರ್ಯವಿದೆ" ಎಂದು ಉತ್ತರಿಸುವುದನ್ನು ಕೇಳಿರಬಹುದು, "ಅದರಲ್ಲಿ ಸೌಂದರ್ಯವೇನಿದೆ ? ಅದನ್ನು ಕಾಣಲು ಮಾರ್ಗದರ್ಶನ ಮಾಡಿರಿ, "ಎಂದು ಅಪೇಕ್ಷಿಸಿದಾಗ, "ಕಬ್ಬು, ಹಾಲು, ಬೆಲ್ಲಗಳಿಗೆ ತಮ್ಮದೇ ಆದ ಮಾಧುರ್ಯಗಳಿವೆ. ಆ ವಿವಿಧ ಸವಿಗಳನ್ನು ವಿವರಿಸಿ ಹೇಳಲು ಬರುತ್ತದೆಯೇ? ಹಾಗೆಯೇ ಇದನ್ನು ಕೂಡ ಮಾತಿನಿಂದ ಹೇಳಲು ಬರುವುದಿಲ್ಲ" ಎಂದು ಜವಾಬ್ದಾರಿಕಳಚಿಕೊಳ್ಳುವವರಿದ್ದಾರೆ "ಜನರು ಮುಗ್ಧರು, ಕಲೆಯ ಮೌಲ್ಯಮಾಪನ ಮಾಡಲಾರರು, ಹೇಳಿದ್ದುದನ್ನು ನಂಬುತ್ತಾರೆ" ಎಂದು ಕಂಡು ಬಂದಾಗ, ಆಸ್ತಕವಂತರೂ ಕಲೆಗಾರರಾಗಿ ಪ್ರಚಾರ, ವಾಗ್ವೈಖರಿಗಳಿಂದ ಕಲೆ ಅಲ್ಲದ್ದನ್ನು ಕೂಡ ಕಲೆ ಎಂದು ಸಾಧಿಸಲು, ಮಾಡಲು ಅವಕಾಶ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಜನತೆಯು ನವ್ಯಕಲೆಯ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಆದ್ದರಿಂದ ಸ್ವಬುದ್ಧಿಯಿಂದಲೇ ಒಳ್ಳೆಯ ಕೃತಿಯನ್ನು ಅರ್ಥ ಮಾಡಿಕೊಂಡು, ಸಂವೇದನಾಶೀಲತರಾಗಿ ಆನಂದವನ್ನು ಅನುಭವಿಸಬಲ್ಲರು. ಅರ್ಥವಾಗದಿದ್ದಾಗ, "ಅದರಲ್ಲಿ ಅಭಿವ್ಯಕ್ತಿ ಏನೆಂದು ತಿಳಿಯಲಿಲ್ಲ, ಮೆಚ್ಚುಗೆಯಾಗಲಿಲ್ಲ" ಎಂದು ಸತ್ಯವನ್ನೇ ಹೇಳುವವರಾಗಬೇಕು. ನವ್ಯಕೃತಿಯನ್ನು ನೋಡುವ ಕಣ್ಣನ್ನು ಪಡೆಯುವ ಪ್ರಯತ್ನ ಮಾಡಬೇಕು.

ಪಿಕಾಸೊ ರಚಿಸಿದ 'ಗೆರ್ನಿಕಾ' ಒಂದು ಶ್ರೇಷ್ಠವಾದ ನವ್ಯಕೃತಿ ಅದು ತದ್ರೂಪರಚನೆಯಲ್ಲ.

ಆದರೆ ಅದರ ಅರ್ಥ, ಉದ್ದೇಶ, ಗುಣ-ಲಕ್ಷಣಗಳನ್ನು ತಿಳಿಸಬಹುದಾಗಿದೆ. ಅದನ್ನು ಕುರಿತು ನೋಡುತ್ತಿದ್ದಂತೆ ಹೆಚ್ಚು ಹೆಚ್ಚಾಗಿ ಇಷ್ಟವಾಗುತ್ತದೆ. ಅದರ ಬಗ್ಗೆ ಗೌರವದಿಂದ ತಲೆಯು ಬಾಗುತ್ತದೆ. ನವ್ಯಕಲೆಯಲ್ಲೂ ಶಾಶ್ವತ ಮೌಲ್ಯದ ಶೈಲಿಗಳು ಉಳಿಯುತ್ತವೆ. ಕೆಲವು ತಲೆದೋರಿ ಹೆಚ್ಚು ದಿನ ಉಳಿಯದೆ ಅಳಿಯುತ್ತವೆ. ಕೆಲವೊಮ್ಮೆ ನವ್ಯತೆಗಳು ಒಡಿಸದೆ ಕೆಲವು ಕಲಾವಿದರು ಕ್ಲಾಸಿಸಿಸವ್, ಪ್ರಿರ್‍ಯಾಫೆಲಿಟಸಿಸವ್, ರೀಯಲಿಸವ್ ಮುಂತಾದ ಪೂರ್ವಕಾಲದ ಕಲಾವಿಧಾನಗಳಿಗೇ ಪುನಃ ಶರಣು ಹೋದುದನ್ನು ಕಲೆಯ ಇತಿಹಾಸವು ಹೇಳುತ್ತದೆ.

ಈಗ ನವ್ಯಕಲೆ ಮತ್ತು ಜನತೆಯ ನಡುವೆ ಕಂದಕವಿದೆ. ಅದು ನಿವಾರಣೆಯಾಗಬೇಕು. ಅದರಿಂದ ಕಲೆಗಾರರಿಗೂ, ಕಲಾಪ್ರೇಮಿಗಳಿಗೂ, ಕಲೆಯ ಬೆಳವಣಿಗೆಗೂ ಹಿತವಾಗುತ್ತದೆ. ವಜ್ರ ಮತ್ತು ಗಾಜಿನ ಹರಳುಗಳು ಬಂಗಾರ ಮತ್ತು ಬೇಗಡೆಗಳು ಸಾಮಾನ್ಯ ಜನರ ಕಣ್ಣುಗಳಿಗೆ ಸಮನಾಗಿ ಕಾಣುತ್ತವೆ. ಕಲಾಪ್ರಪಂಚದಲ್ಲಿ ಕೂಡ ಬಂಗಾರದಂತಹ, ಬೇಗಡೆಯಂತಹ ರಚನೆಗಳೆಲ್ಲವೂ ಸಾಮಾನ್ಯರ ಕಣ್ಣುಗಳಿಗೆ ಒಂದೇ ತರಹ ತೋರಬಲ್ಲವು. ಅವರು ಅವುಗಳ ಗುಣಗಳ ಆನಂದವನ್ನು ಅನುಭವಿಸಲಾರರು. ಅದಕ್ಕಾಗಿ ಕಲಾಭಿಮಾನಿಗಳು ಕಲೆಯ ಸ್ವರೂಪ. ಇತಿಹಾಸ, ವಿವಿಧ ವಿಧಾನಗಳ ತಿಳಿವಳಿಕೆಯನ್ನು ಪಡೆಯುವುದು ಅವಶ್ಯಕವಾಗಿದೆ. ಆ ಉದ್ದೇಶದಿಂದ ನವ್ಯಕಲೆಗೆ ಸಂಬಂದಪಟ್ಟ ಶೈಲಿ, ವಿಧಾನಗಳಲ್ಲಿ ಮುಖ್ಯವೆಂದು ತೋರಿದ ಕೆಲವನ್ನು ಈ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ.

ನವ್ಯಕಲೆಯು ಸ್ಥಾನಗಳಿಸಿದೆ, ಬೆಳೆಯುತ್ತಿದೆ, ಆದರೆ ಅದರ ಪ್ರಭಾವದಿಂದಲೋ ಎಂಬಂತೆ ಸ್ವದೇಶ ಚಿತ್ರಕಲೆಯು ನಶಿಸುತ್ತಿದೆ. ಹಾಗಾಗಬಾರದು. ಅದನ್ನು ಕೂಡ ಉಳಿಸುವ ಬಗ್ಗೆ ಕಲಾಭಿಮಾನಿಗಳು ಮತ್ತು ಪ್ರಜ್ಞಾವಂತರು ಚಿಂತಿಸಬೇಕಾಗಿದೆ. ಒಂದು ಭವನದಲ್ಲಿ ಎಲ್ಲ ಕೋಣೆಗಳಿಗೂ ಬೆಳಕು ಬೇಕಾದಂತೆ ಸುಸಂಸ್ಕೃತ ಜೀವನದ ಎಲ್ಲ ವಸ್ತು ವಿಷಯಗಳಲ್ಲೂ ಕಲೆಯು ಬೇಕು. ಆ ಕಲಾಭಿರುಚಿಯು ಶುದ್ಧವಾಗಿರಬೇಕು. ಆದ್ದರಿಂದ ಮಾನವನ ಜೀವನವು ಸುಸಂಸ್ಕೃತ ಹಾಗೂ ಸುಂದರವಾಗಬಲ್ಲದು.

ಕಲೆಯು ಮತ್ತು ಕಲೆಗಾರರ ಇತಿಹಾಸಗಳು ಬೇರೆಯಲ್ಲ. ಕಲೆಗಾರರ ಚರಿತ್ರೆಗಳನ್ನು ತಿಳಿಯುವುದರಿಂದ ಆ ಕಾಲದ ಜನಜೀವನ, ಮತಧರ್ಮೀಯರ, ರಾಜರ ಹಾಗೂ ಶ್ರೀ ಸಾಮಾನ್ಯರ ಅಭಿರುಚಿಗಳು, ಕಲಾವಿದರ ಸಮಸ್ಯೆಗಳು, ಕಲೆ ಮತ್ತು ಸಮಾಜ, ಒಂದರ ಮೇಲೆ ಮತ್ತೊಂದರ ಪ್ರಭಾವ ಮುಂತಾದುವುಗಳು ತಿಳಿದು ಬರುತ್ತವೆ. ಕಲಾಭಂಡಾರಕ್ಕೆ ಪ್ರಾಚೀನ ಕಾಲದಿಂದಲೂ ಅಮೂಲ್ಯ ಕೃತಿರತ್ನಗಳು ಸೇರುತ್ತ ಬಂದಿದೆ. ಅಂತಹ ಕೃತಿರಚನೆಗಳಿಗೆ ಕಲೆಗಾರರ ಪ್ರತಿಭೆಯೊಂದೇ ಕಾರಣವಲ್ಲ. ಅವರ ವ್ಯಕ್ತಿತ್ವ, ಸಹಕಾರ, ಪ್ರೋತ್ಸಾಹಕ ಹಾಗೂ ನಿರುತ್ಸಾಹಕ ಪರಿಸ್ಥಿತಿಗಳು, ಪ್ರೇಮ, ಅಸೂಯೆ ಎಲ್ಲವೂ ಅವರಿಂದ ಅಂತಹ ಕೃತಿಗಳ ನಿರ್ಮಾಣಕ್ಕೆ ಕಾರಣಗಳಾಗಿವೆ. ಕಲೆಗಾರರ ಕಥೆಗಳನ್ನು ಓದುವುದೆಂದರೆ, ಕಲೆಯ ಬಗ್ಗೆ

ನಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳುವುದಾಗಿದೆ.

೧೯೦೦ ರ ಪ್ರಾರಂಭದ ದಶಕದಲ್ಲಿ ಕಲಾ ವಲಯದಲ್ಲಿ ಹೊಸ ಕ್ರಾಂತಿ ಶುರುವಾಯಿತು ಎಂದು ಹೇಳಬಹುದು ಇದಕ್ಕೆ ಕಾರಣ 'ಫೋಟೋಗ್ರಾಫಿ'ಯ ಆವಿಷ್ಕಾರ ಇದಕ್ಕಿಂತಲೂ ಹಿಂದೆ ನೈಜ ರೂಪದಲ್ಲಿ ರಚಿಸುತ್ತಿದ್ದ ಕಲಾವಿದರು ಇದಕ್ಕಿಂತಲೂ ನೈಜತೆಯನ್ನು ಯಥಾವತ್ತಾಗಿ ಕ್ಷಣಾರ್ಧದಲ್ಲಿ ತೆಗೆಯಿತು. ಆದ್ದರಿಂದ ಫೋಟೋಗ್ರಾಫಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಿ ಉತ್ತಮ ಚಿತ್ರಗಳನ್ನು ರಚಿಸ ತೊಡಗಿದರು. ಇದರಿಂದ ನಮ್ಮ ದೃಶ್ಯಕಲಾವಿದರ ವಿಚಲಿತರಾಗದೇ ಕಲೆಯ ಕುರಿತಾದ ಹೊಸ ರೂಪ ಪ್ರಯೋಗಗಳತ್ತ ವಾಲಿದರು. ಪ್ರಕೃತಿ, ಮಾನವ ಇತ್ಯಾದಿ ವಾಸ್ತವ ಚಿತ್ರಗಳನ್ನು ರಚಿಸುವುದನ್ನು ಬಿಟ್ಟು ರೇಖೆ, ವರ್ಣಗಳನ್ನು ಸೃಜನಾತ್ಮಕವಾಗಿ ಬಳಸಿಕೊಂಡರು. ಕಲಾ ವಲಯದಲ್ಲಿ ಒಂದು ಹೊಸ ಇತಿಹಾಸವನ್ನು ಹುಟ್ಟುಹಾಕಿದರು. ವಸ್ತುವಿನ ಬಗೆಬಗೆಯ ಬಾಹುಗಳು ನೆರಳು ಬೆಳಕುಗಳ ಪರಿಣಾಮ ಬದಲಾವಣೆ ಹಾಗೂ ಪೂರಕ ವರ್ಣಗಳ ಹೊಂದಾಣಿಕೆ ಯಥಾದರ್ಶನದಿಂದ ನೋಡಿದಾಗ ಪ್ರಕೃತಿಯಲ್ಲಿ ಸಮೀಪದಿಂದ ದೃಷ್ಟಿಹರಿಸುತ್ತಾ ದೂರ ಹೋದಂತೆ ಸಮೀಪ ಹಾಗೂ ದೂರದಲ್ಲಿ ಕಾಣುವ ವಸ್ತುಗಳ ಸಂಯೋಜನೆ, ವರ್ಣಗಳ ಹೊಂದಾಣಿಕೆ, ಬೆಳಕಿನ ಪರಿಣಾಮದಿಂದಾಗುವ ಬದಲಾವಣೆಯನ್ನು ಈ ಸಂದರ್ಭದಲ್ಲಿ ತಮ್ಮ ಕ್ಯಾನವಾಸದಲ್ಲಿ ಮೂಡಿಸಿದರು. ಈ ರೀತಿಯಾಗಿ ಹೊಸ ಹೊಸ ಕಲಾವಿದರ ತಂಡಗಳು ಹುಟ್ಟಿಕೊಂಡವು. ಹೊಸ ಪಂಥಗಳು ಉದಯಗೊಂಡವು. ತಾವು ರಚಿಸಿದ ಚಿತ್ರಗಳಲ್ಲಿ ತಮ್ಮ ವಾದಗಳನ್ನು ಪ್ರಯೋಗಿಸಿದರು. ಈ ರೀತಿಯ ನವ್ಯಕಲೆಯ ಚಳುವಳಿಯ ಕಲಾವಿದರ ಮತ್ತು ಕಲೆಯ ಕುರಿತು ಬಾಯಿರಿಯವರು ಸಂಗ್ರಹಿಸಿ, ಆಧರಿಸಿದ ಚಿತ್ರರಚನೆಗಳನ್ನು ಈ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಇದು ಕಲಾವಿದರಿಗೆ ಅದರಲ್ಲೂ ಸೃಜನಶೀಲ ಚಿತ್ರಕಲಾಕಾರರಿಗೆ ತಿಳಿದುಕೊಳ್ಳಲು ಅನುಕೂಲವಾಗಿದೆ. ಚಿತ್ರಕಲೆಯನ್ನು ಅಭ್ಯಾಸ ಮಾಡುವವರಿಗೂ ಉಪಯುಕ್ತವಾಗಿದೆ.

ಇಲ್ಲಿ ಕಲೆಗಾರರ ಕಲಾಬದುಕನ್ನು ಅತ್ಯಂತ ಮಾರ್ಮಿಕವಾಗಿ ತಮ್ಮ ಶಬ್ದಭಾಷೆಯಲ್ಲಿ ಮೂಡಿಸಿದ್ದಾರೆ. ಇವರು ಬದುಕಿನಲ್ಲಿ ಅನುಭವಿಸಿದ ನೊವು, ನಲಿವು, ಸಂತೋಷ ಅಲೆದಾಟ, ಪರದಾಟದ ನೈಜ ಬದುಕಿನ ಚಿತ್ರಣವನ್ನು ಮೂಡಿಸಿದ್ದಾರೆ. ಇದರಲ್ಲಿ ಬಾಯಿರಿಯರು ತಮ್ಮ ಬದುಕಿನ ನೋವನ್ನು ಸಹಿತ ಈ ಕಥೆಗಳಲ್ಲಿ ವಿಲೀನಗೊಳಿಸಿದ್ದಾರೆ.

೩. 'ಕಲೆಗಾರರ ಕಥೆಗಳು'

ಎಂಬ ಪುಸ್ತಕವು ೧೯೫೩ ರಲ್ಲಿ ಪುನರ್ ಮುದ್ರಣಗೊಂಡಿತು. ಇಲ್ಲ ಬಾಯಿರಿಯವರು ಪಾಶ್ಚಿಮಾತ್ಯ ಹಾಗೂ ಭಾರತೀಯ ಕಲಾವಿದರ ಕಲೆಯ ಬದುಕಿಗೆ ಸಂಬಂಧಿಸಿದ ಚಿತ್ರಣವನ್ನು ಚಿತ್ರಿಸಿದ್ದಾರೆ. ಪಾಶ್ಚಿಮಾತ್ಯ ಕಲಾವಿದರ ದೈನಂದಿನ ಬದುಕು ಮತ್ತು ಸಂಸಾರಿಕ ಜೀವನ,

ಕಲೆಯ ಏಳು ಬೀಳುಗಳನ್ನು ಅತ್ಯಂತ ಸರಳವಾಗಿ ಅರ್ಥವಾಗುವಂತೆ ಬರೆದಿರುವರು. ಪ್ರತಿಯೊಬ್ಬ ಕಲಾವಿದರಿಗೂ ಒಂದೊಂದು ತಲೆ ಬರಹವಿಟ್ಟುಕೊಂಡು ವಿವೇಚಿಸಿದ್ದಾರೆ. ವಿದೇಶಿ ಕಲಾವಿದರಾದ ಜಿಯುತ್ತೊ, ಲಿಯೋನಾರ್ಡೊ ಡಾ. ವಿಂಚಿ, ಮೈಕಲ್ ಎಂಜಿಲೋ, ರೆಂಬ್ರೆಂಟ್, ಕ್ರೊಸೆ, ಟರ್ನರ, ಕೊರೊಟ್, ವಿಸ್ಲರ್, ಸೇಜಾನ್, ಗೊಗಿನ, ವಿನ್ಸೆಂಟ್ ವ್ಯಾನಗಾಗ್ ಗುಸ್ತವ್ ವೈಗ್ಲೆಂಡ, ಪಿಕಾಸ್ಸೊ ರಂತಹ ಕಲಾವಿದರನ್ನು ಕುರಿತು ಇವರ ಬಾಲ್ಯಜೀವನ, ಶಿಕ್ಷಣ, ಮನೆತನ, ಕಲಾಕ್ಷೇತ್ರಕ್ಕೆ ಬಂದ ಬಗೆ ಹಾಗೂ ಕಲಾಕೃತಿಗಳ ರಚನೆ ಈ ಸಂದರ್ಭದಲ್ಲಿ ಅನುಭವಿಸಿದ ಸುಖ-ದುಃಖಗಳನ್ನು ಸಾಕಷ್ಟು ಅಧ್ಯಯನ ಮಾಡಿ ತಿಳಿದುಕೊಂಡು ಕಲಾವಿದರ ಕಥೆಗಳನ್ನು ಹೆಣೆದಿದ್ದಾರೆ. ಇದನ್ನು ಗಮನಿಸಿದರೆ ಬಾಯಿರಿಯವರು ಸಾಕಷ್ಟು ಪರಿಶ್ರಮ ಪಟ್ಟಿದ್ದಾರೆ. ಇಂಗ್ಲೀಷ ಗ್ರಂಥಗಳು, ಪುಸ್ತಕಗಳು, ವಿಶ್ವಕೋಶಗಳು, ಕನ್ನಡಕ್ಕೆ ತರ್ಜುಮೆಗೊಳಿಸುವದು ಹಾಗೂ ವಿವಿಧ ವಿದ್ವಾಂಸರ ಜೊತೆಗೆ ಚರ್ಚಿಸಿ ಈ ಪುಸ್ತಕವನ್ನು ರಚಿಸಿದ್ದಾರೆ ಒಂದು ಲೇಖನವನ್ನು ರಚಿಸಬೇಕಾದರೆ ಎಷ್ಟೆಲ್ಲ ಪುಸ್ತಕಗಳನ್ನು ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ ಬರೆಯಲು ಎಷ್ಟು ಕಷ್ಟವಾಗುತ್ತದೆಯೋ. ಇಂತಹ ಪುಸ್ತಕವನ್ನು ರಚಿಸಲು ಲೇಖಕರು ದಿಟ್ಟ ಶ್ರಮವನ್ನು ಕಾಣಬಹುದು. ಅದರಂತೆ ಭಾರತೀಯ ಕಲಾವಿದರಾದ ರಾಜಾರವಿವರ್ಮ, ರವೀಂದ್ರನಾಥ ಟ್ಯಾಗೂರ, ಆನಂದಕುಮಾರಸ್ವಾಮಿ. ಕೆ. ವೆಂಕಟಪ್ಪ, ಜಾಮಿನಿರಾಯ್, ರಂತಹ ಭಾರತೀಯ ಆಧುನಿಕ ಕಲಾವಿದರನ್ನು ಆಯ್ದುಕೊಂಡಿದ್ದಾರೆ. ಇವರು ಭಾರತೀಯ ಆಧುನಿಕ ಕಲಾಕ್ಷೆತ್ರಕ್ಕೆ ನೀಡಿದ ದೊಡ್ಡ ಕೊಡುಗೆ ಎನ್ನಬಹುದು. ಇವರ ಕಲಾಕೃತಿಗಳಲ್ಲಿ ಭಾರತೀಯ ಸಂಸ್ಕೃತಿಯ ಸೊಗಡನ್ನು ಕಾಣಬಹುದು. ಇಂತಹ ಕಲಾವಿದರನ್ನು ಅವರ ಬದುಕಿನ ಚಿತ್ರಣವನ್ನು ಲೇಖಕರು ಹೆಣೆದಿದ್ದಾರೆ.

ಇಲ್ಲಿ ಹವ್ಯಾಸಿ ಕಲಾವಿದರನ್ನು ಕೂಡಾ ಇಲ್ಲಿ ಪರಿಚಯಿಸಿದ್ದಾರೆ. ವೃತ್ತಿಯಲ್ಲಿ ಎಷ್ಟೆಲ್ಲ ತೊಡಗಿಸಿದರೂ ಪ್ರವೃತ್ತಿಯಲ್ಲಿ ಚಿತ್ರಕಲೆಯನ್ನು ಆಯ್ದುಕೊಂಡು ಇದರಲ್ಲಿ ಸಾಧನೆಯನ್ನು ಸಾಧಿಸಿದ್ದಾರೆ. ಇಂತಹವರ ಕುರಿತು ಬಾಯಿರಿಯವರು ತಿಳಿಸಿದ್ದಾರೆ. ಕಲೆ ಕೇವಲ ಕಲಾವಿದರಿಗೆ ಸೀಮಿತವಾದುದಲ್ಲ ಅದು ಸಮಸ್ತ ಮನುಷ್ಯನು ಇಷ್ಟ ಪಡುವ ಕ್ಷೇತ್ರವಾಗಿದೆ. ಈಗ ಪುಸ್ತಕದ ಮುನ್ನುಡಿಯಲ್ಲಿ ಬಾಯಿರಿಯವರ ವಿವೇಚನೆಯನ್ನು ಅರಿಯಬಹುದು.

[೪]ಕಲೆಗಾರರ ಬದುಕು ವೈವಿದ್ಯಮಯ. ಕೃತಿ ರಚಿಸಿದಾಗ ಭಿಕ್ಷಾಧಿಪತಿಯಾಗಿದ್ದ. ಒಂದು ಹಿಡಿ ಕೂಳಿಗಾಗಿ ಕೃತಿಯನ್ನು ಕೊಟ್ಟುಬಿಟ್ಟ. ಅದನ್ನು ಪಡಕೊಂಡು ವಿಕ್ರಯಿಸಿದಾತ ಲಕ್ಷಾಧಿಪತಿಯಾದ ಒಂದು ಕಾಲದಲ್ಲಿ ಒಂದು ಕೃತಿಯು ಕಲೆಯೇ ಅಲ್ಲ. ಅದು ಒಂದು ಅಸಂಬದ್ಧ ಎಂದು ತಿರಸ್ಕೃತ. ಮತ್ತೊಂದು ಕಾಲದಲ್ಲಿ ಅದು ಒಂದು ಶ್ರೇಷ್ಠ ಕೃತಿಯೆಂದು

೪. ಬಿ.ಪಿ.ಬಾಯಿರಿ : ಕಲೆಗಾರರ ಕಥೆಗಳು, ಮುನ್ನುಡಿ ಪು.ಸಂ ೧ ರಿಂದ ೪

ಪುರಸ್ಕೃತ. ಆದಕ್ಕೆ ವಜ್ರಕ್ಕಿಂತಲೂ ಅಧಿಕ ಬೆಲೆ ಮಗನು ಅಧಿಕಾರಿಯಾಗಬೇಕು. ಧನಿಕನಾಗಬೇಕು. ಅದಕ್ಕೆ ತಕ್ಕ ಶಿಕ್ಷಣ ಪಡೆಯಲೆಂದು ಹೆತ್ತವರ ಒತ್ತಾಯ. ಆ ಬಗ್ಗೆ ಪುತ್ರನಿಗೆ ಹಿಂಸೆಕೊಟ್ಟರು. ಆದರೆ ಕಲೋಪಾಸನೆಯು ಮಗನ ಆದರ್ಶವಾಗಿತ್ತು. ಆದರ್ಶ ಸಾಧನೆಗಾಗಿ ಸುಖೋಪಭೋಗಗಳನ್ನು ತೊರೆದ. ಕೃತಿರಚನೆಯೇ ದೇವರಸೇವೆಯೆಂದು ಕಲಾತಪಸ್ವಿಯಾಗಿ ಬಾಳಿದ ಎಂಭತ್ತು ವರುಷ ಕಾಲ ಮಹಾತ್ಸಾಧನೆ ಮಾಡಿ ಅಮರ ಕೃತಿಗಳನ್ನು ರಚಿಸಿದ್ದ. ಅದಾಗ್ಯೂ ಅಂತ್ಯಕಾಲದಲ್ಲಿ ತಾನು ಕಲೆಯಲ್ಲಿ ಸಿದ್ಧಿ ಪಡೆದುದು ಸಾಲದು ಎಂದು ದಿವ್ಯ ಅತೃಪ್ತಿಯಿಂದ ಶೋಕಿಸಿದ ಬದುಕಿದ್ದಾಗ ಅವಮಾನಿತ, ಸತ್ತ ಬಳಿಕ ಬಹುಮಾನಿತ, ಹೀಗೆ ಜಗತ್ತಿನಾದ್ಯಂತ. ಕಲೆಗಾರರ ಬಾಳು ನಲಿವು-ನೋವುಗಳಿಂದ ತುಂಬಿ ರಸಭರಿತವಾಗಿರುತ್ತದೆ. ಕಲಾವಿಮರ್ಶೆಯ ಹಿತಾಹಿತ ಪರಿಣಾಮಗಳು, ಕಲೆಯ ಮೌಲ್ಯ-ಅಮೌಲ್ಯ, ಕಲೆಗಾರರ ಬದುಕು, ಕಲಾ ರಚನೆಯೆಂಬುದು ಒಂದು ತಪಸ್ಸು, ದೇಶ-ವಿದೇಶಗಳಲ್ಲಿ ಕಲಾಭಿಮಾನ, ಕಲಾಪ್ರೋತ್ಸಾಹ, ಬದಲಾಗುತ್ತಿರುವ ಕಲಾದೃಷ್ಟಿ ಮೊದಲಾದುವುಗಳನ್ನು ನಿರೂಪಿಸುವ ರಸಪ್ರಸಂಗಗಳನ್ನು ಈ ಚಿಕ್ಕ ಪುಸ್ತಕದಲ್ಲಿ ಪ್ರತ್ಯೇಕವಾಗಿಯೂ ನೀಡಲಾಗಿದೆ.

ಆಂಗ್ಲ ಭಾಷೆಯಲ್ಲಿ ಕಲೆಗಾರರ ಕುರಿತು Great Paintings, The Outline of Art ಮೊದಲಾದ ಉತ್ತಮ ಗ್ರಂಥಗಳಿವೆ. ಒಬ್ಬೊಬ್ಬ ಕಲೆಗಾರನದ್ದೇ ಸಿದ್ಧಿ ಸಾಧನೆಗಳನ್ನು ವಿಸ್ತಾರವಾಗಿ ತಿಳಿಯಪಡಿಸುವ ಗ್ರಂಥಗಳು ಬೇರೆ ಇವೆ. ಇವುಗಳೆಲ್ಲವೂ ಮೂಲಕೃತಿಗಳಿಗೆ ಸದೃಶ್ಯವಾದ ವರ್ಣಚಿತ್ರಗಳಿಂದ ತುಂಬಿರುತ್ತವೆ. ಕಾಲಕಾಲಕ್ಕೆ ವೃತ್ತ-ಪತ್ರಿಕೆಗಳಲ್ಲಿ ಕಲೆ ಮತ್ತು ಕಲೆಗಾರರ ಕುರಿತು ಹಲವಾರು ಲೇಖನಗಳು ಪ್ರಕಾಶನಗೊಳ್ಳುತ್ತವೆ. ಅವುಗಳ ದೆಸೆಯಿಂದ ಕಲೆಯ ಕುರಿತು ಜ್ಞಾನಾರ್ಜನೆ, ಮನೋರಂಜನೆಗಳೆರಡೂ ಲಭಿಸುತ್ತವೆ. ಆ ಪ್ರಕಾರ ಕನ್ನಡದಲ್ಲೂ ಕಲಾ ಸಾಹಿತ್ಯ ಒದಗಬೇಕು ಎಂಬುದು ಈ ಚಿಕ್ಕ ಪುಸ್ತಕ ರಚನೆಗೆ ಪ್ರೇರಣೆಯಾಗಿದೆ.

ಕಲಾ ಪ್ರಪಂಚಕ್ಕೆ ಅಮರ ಕೃತಿಗಳನ್ನು ನೀಡಿದ ಕಲೆಗಾರರು ಇಷ್ಟು ಮಂದಿ ಮಾತ್ರವಲ್ಲ. ಇನ್ನೂ ಹಲವರು ಇದ್ದಾರೆ. ಓದುಗರಿಂದ ದೊರೆಯುವ ಪ್ರೋತ್ಸಾಹಕ್ಕೆ ಅನುಗುಣವಾಗಿ ಈ ಪ್ರಯತ್ನವು ಮುಂದುವರಿಸಲ್ಪಟುವುದು.

೪. "ಜಾಗತಿಕ ಚಿತ್ರಕಲೆ"

ಪ್ರಥಮ ಮುದ್ರಣ ೧೯೮೫, ದ್ವಿತೀಯ ಮುದ್ರಣ ೧೯೯೫, ರಲ್ಲಿ ಪ್ರಕಾಶನಗೊಂಡಿತು. ಧಾರವಾಡದ ಪ್ರತಿಭಾ ಗ್ರಂಥಮಾಲೆಯವರು. ಈ ಪುಸ್ತಕದ ಹೆಚ್ಚು ಬೇಡಿಕೆಯ ಕಾರಣ ದ್ವಿತೀಯ ಮುದ್ರಣಗೊಳಿಸಿದರು. ಈ ಪುಸ್ತಕವು ಜಗತ್ತಿನ ಆದಿಮಾನವನ ಕಾಲದಿಂದ ಹಿಡಿದು ಮಧ್ಯಕಾಲಿನ ಹಾಗೂ ಸಮಕಾಲೀನ ಕಲೆಯ ಕುರಿತಾದ ವಿಷಯವನ್ನು ಒಳಗೊಂಡಿದೆ.

ಕೆಲವು ಪ್ರಮುಖ ಕಲಾವಿದರನ್ನು ಕುರಿತಾದ ವಿಷಯವನ್ನು ಒಳಗೊಂಡಿದೆ. ಇದು ೪೧ ಅಧ್ಯಾಗಳನ್ನು ವಿಂಗಡಿಸಿಕೊಂಡು ರಚಿಸಲಾಗಿದೆ.

ಅಮೇರಿಕಾದ ಕಲೆ, ಅಧ್ಯಾಯವು ಅಮೇರಿಕ ದೇಶದ ಉದಯ, ಅಲ್ಲಿನ ಮಾನವನ ಬದುಕು, ನಾಗರೀಕತೆ ಹಾಗೂ ಕಲಾ ಬೆಳವಣಿಗೆಯ ಕುರಿತು ವಿವರಿಸಲಾಗಿದೆ. [೫]ಅಮೇರಿಕದ ಬೆಳವಣಿಗೆಯ ಆರಂಭ. ಕಲಾ ಪ್ರಪಂಚದ ಹೊಸ ಭಾವನೆಗಳ ಬೆಳವಣಿಗೆಯಲ್ಲಿ ಅದರ ನೇತೃತ್ವ ನವ್ಯಕಲಾಕಾರರಾದ ಸ್ಟೂವರ್ಟ್ ಡಾರ್ವಿನ್, (೧೮೯೪-೧೯೬೫ ಜಾಕ್ಸನ್ ಪೊಲಕ್ (೧೯೧೨-೧೯೫೬) ರ ಕಾರ್ಯ ವೈಖರ್ಯದ ಕುರಿತಾದ ಅಧ್ಯಯನವಾಗಿದೆ.

ಹೊಸ ಖಂಡವಾದ ಅಮೇರಿಕದ ಕಲೆಯು ಮುನ್ನಡೆಯನ್ನು ಸಾಧಿಸಿ, ಹಳೆಯ ಖಂಡಗಳ ಮೇಲೆ ಬೀರುತ್ತಿರುವ ಪ್ರಭಾವವು ಹೆಮ್ಮೆ ಪಡುವಂತಹದಾಗಿದೆ. ಆದಿಮಾನವ ಕಲೆ, ಜಪಾನ, ಇಟಲಿ, ಗ್ರೀಕ್, ರೋಮನ್ ಕಲೆ, ಚೀನಿಕಲೆ, ಎಸ್ಕಿಮೋ ಕಲೆ ಹಾಗೂ ಭಾರತೀಯ ಜೈನ ಚಿತ್ರಕಲೆ ಕುರಿತಾಗಿ ಸಮರ್ಪಕವಾಗಿ ಪರಿಚಯಿಸಿದ್ದಾರೆ. ಆಳವಾಗಿ ಕಲೆಯನ್ನು ನೋಡದೇ ಹೋದರು ಅದರ ಪರಿಚಯವನ್ನು ಮಾಡಿಕೊಡಲು ಪ್ರಯತ್ನಿಸಿದ್ದಾರೆ. ಅದರಲ್ಲೂ ಭಾರತೀಯ ಕಲಾವಿದರಾದ ಎ. ಎ. ಅಲಮೇಲಕರರ ಕುರಿತು ಚರ್ಚಿಸಿದ್ದಾರೆ. ಇವರ ಪುಸ್ತಕದ ಪ್ರಸ್ತಾವನೆಯಲ್ಲಿ ಈ ವಿವರವನ್ನು ಕಾಣಬಹುದು.

[೬]ಆದಿಮಾನವನ ಗುಹೆಯಲ್ಲಿ ಆರಂಭಗೊಂಡ ಕಲೆಯು ಹುಟ್ಟು ಪ್ರಾರ್ಥನಾಲಯಗಳ ಗೋಡೆಗಳ ಮೇಲೆ ದೇವರ ಅಪಾರ ಶಕ್ತಿಯನ್ನೂ, ಮತ ಧರ್ಮಗಳ ಸಾರವನ್ನೂ, ಸಂತರ ಮಹಿಮೆಯನ್ನೂ, ವಿವರಿಸುತ್ತ ಬೆಳೆಯಿತು. ಬಳಿಕ ದೊರೆಗಳ ವೈಭವವನ್ನು ಮೆರೆಯಿಸಿತು. ಇವೆಲ್ಲವೂ ರೋಚಕವಿಚಾರಗಳು. ಕಲೆಗಳಿಲ್ಲದ ದೇಶವಿಲ್ಲ. ಕಲೆಗಳಿಲ್ಲದ ಕಾಲವಿಲ್ಲ. ಬೇರೆ ಬೇರೆ ಕಾಲ ದೇಶಗಳ ಚಿತ್ರಗಳ ವಿಷಯಗಳು ಮತ್ತು ಶೈಲಿಗಳು ಬೇರೆ ಬೇರೆಯಾಗಿವೆ. ಮಾನವನ ಬದುಕಿನಲ್ಲಿ ಕಲೆಯು ಹಾಸುಹೊಕ್ಕಾಗಿ ಬೆಳೆದುಬಂದಿದೆ. ಈಗೀನ ಚಿತ್ರದಲ್ಲಿ ಅಭಿರುಚಿ ತೋರಿಸುವವರ ಹಾಗೂ ಚಿತ್ರ ರಚಿಸುವವರ ಸಂಖ್ಯೆಯು ಹೆಚ್ಚಾಗಿದೆ ! ಕಲೆಗೆ ನಿಜವಾಗಿ ಸಂವೇದಿಸಿ ಆನಂದಪಡೆಯ ಬೇಕಾದರೆ ದೇಶ ವಿದೇಶಗಳ ತರತರದ ಕಲೆಗಳ ಇತಿಹಾಸದ ಅರಿವು ಅಗತ್ಯ. ಅದರ ಕುರಿತು ಹೆಚ್ಚಿನ ಜ್ಞಾನವು ಕಲಾವ್ಯಾಸಂಗಿಗಳಿಗೂ, ವಿಶೇಷ ಕಲಾನುರಾಗಿಗಳಿಗೂ ಅವಶ್ಯಕ. ಆದರೆ ಸಂಕ್ಷಿಪ್ತ ಸಾಮಾನ್ಯ ತಿಳಿವಳಿಕೆಯು ಮಾತ್ರ ಸಮಸ್ತ ಪ್ರೇಕ್ಷಕರಿಗೂ ಬೇಕಾದುದು. ಅಂಥವರಿಗಾಗಿ ಈ ಪುಸ್ತಕವನ್ನು ಬರೆಯಲಾಗಿದೆ. ಶಾಲೆಗಳಲ್ಲಿ

---

೫. ಬಿ.ಪಿ.ಬಾಯಿರಿ : ಜಾಗತಿಕ ಚಿತ್ರಕಲೆ, ಪುಟಸಂಖ್ಯೆ-೦೪

೬. ಬಿ.ಪಿ.ಬಾಯಿರಿ : ಜಾಗತಿಕ ಚಿತ್ರಕಲೆ, ಪ್ರಸ್ತಾವನೆ-೩ ಹಿಂದಿ ೫.

ಹಲವು ವಿಷಯಗಳು ಕಲಿಸಲ್ಪಡುತ್ತವೆ. ಅವುಗಳೊಟ್ಟಿಗೆ ಕಲೆಯ ಇತಿಹಾಸದ ಈ ಪ್ರಾಥಮಿಕ ಜ್ಞಾನವನ್ನೂ ನೀಡುವುದು ವಿಹಿತ.

ಕಲೆಯ ಇತಿಹಾಸ ಅರಿಯಲು ಕಲೆಗಾರರ ಚರಿತ್ರೆ ತಿಳಿಯಬೇಕು. ಕಲೆ ಮತ್ತು ಕಲೆಗಾರರ ಇತಿಹಾಸಗಳು ಪ್ರತ್ಯೇಕವಾದುವುಗಳಲ್ಲ. ಅದನ್ನೂ ನಮ್ಮ ಭಾರತದ ಕಲೆ ಮತ್ತು ಆಧುನಿಕ ಕಲೆಯ ವಿಚಾರಗಳನ್ನೂ ಈ ಪುಸ್ತಕದಲ್ಲಿ ಹೇಳಿಲ್ಲ. ಏಕೆಂದರೆ ಆ ವಿಷಯಗಳನ್ನು ಇದೇ ಲೇಖಕನು ಬರೆದು ಇದೇ ಪ್ರಕಾಶಕರು ಪ್ರಕಟಿಸಿದ 'ಕಲೆಗಾರರ ಕಥೆಗಳು', 'ಭಾರತೀಯ ಚಿತ್ರ ಕಲೆ' ಮತ್ತು 'ನವ್ಯಕಲೆ ಹಾಗೂ ಕಲೆಗಾರರು' ಎಂಬ ಮೂರು ಪುಸ್ತಕಗಳಲ್ಲಿ ಹೇಳಲಾಗಿದೆ.

ಉಚ್ಚ ಕಲಾಪರೀಕ್ಷೆಯ ವಿದ್ಯಾರ್ಥಿಗಳಿಗೆ ಕಲೆಯ ಇತಿಹಾಸವು ಒಂದು ಅಭ್ಯಾಸದ ವಿಷಯವಾಗಿದೆ. ಉಚ್ಚ ಕಲಾಭ್ಯಾಸಿಗಳಿಗೆ ಶಿಕ್ಷಕನಾಗಿಯೂ ಪರೀಕ್ಷಕನಾಗಿಯೂ ಕೆಲಸ ಮಾಡಿದ್ದೆ. ಆಗ ಕಲೆಯ ಇತಿಹಾಸ ಕುರಿತು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಕನ್ನಡದಲ್ಲಿ ತಕ್ಕ ಪುಸ್ತಕಗಳು ಇಲ್ಲದ ಕಾರಣ ಉಂಟಾದ ಅನಾನುಕೂಲತೆಗಳನ್ನು ಅನುಭವಿಸಿದ್ದೆ. ಈ ಪುಸ್ತಕವು ಆ ಕೊರತೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಬಲ್ಲದು.

ಇಂಗ್ಲೀಷ ಭಾಷೆಯಲ್ಲಿ ಚಿತ್ರಕಲೆಯ ಕುರಿತು ಅಪಾರ ಗ್ರಂಥಗಳಿವೆ. ಆದರೆ ಕನ್ನಡದಲ್ಲಿ ಅತೀ ವಿರಳ. ಆ ಕೊರತೆಯನ್ನು ಯಥಾಶಕ್ತಿ ನೀಗಿಸಬೇಕೆಂಬ ಇಚ್ಛೆ ಇದ್ದರೂ ಕಲಾಸಾಹಿತ್ಯವನ್ನು ಕೇಳುವವರೇ ಕಡಿಮೆ ಎಂಬ ನಿರುತ್ಸಾಹ. ಅಂತಹ ವೇಳೆಯಲ್ಲಿ ಕಲಾಭಿಮಾನಿ ಶ್ರೀ ಎ. ಈಶ್ವರಯ್ಯನವರು "ನಾಡಿಗಾಗಿ ಬರೆಯಬೇಕಾದುದು ಆಯಾ ವೃತ್ತಿಯವರ, ಅನುಭವಿಗಳ ಹೊಣೆ, ಇಂತಹ ಪುಸ್ತಕ ಬರೆಯುವದು. ನಿಮ್ಮ ಕರ್ತವ್ಯ" ಎಂದು ಹೇಳಿ ಹುರಿದುಂಬಿಸಿದರು. ಧಾರವಾಡದ ಪ್ರತಿಭಾ ಗ್ರಂತಮಾಲೆಯವರೂ, ಕಲೆಯ ಪುಸ್ತಕ ಪ್ರತಿಗಳು ಹೆಚ್ಚು ಖರ್ಚಾಗುವುದಿಲ್ಲವಾದರೂ, ಅವುಗಳನ್ನೂ ಕೂಡ ಪ್ರಕಟಿಸುವುದು ತಮ್ಮ ಹೊಣೆ ಎಂದು ಭಾವಿಸಿ, ಪ್ರಕಾಶನ ಕಾರ್ಯವನ್ನು ವಹಿಸಿಕೊಂಡರು. ಹೀಗೆ ಈ ಪುಸ್ತಕವು ಬೆಳಕು ಕಾಣುವಂತಾಯಿತು.

ಈ ಪುಸ್ತಕಕ್ಕಾಗಿ ವಿಷಯಸಂಗ್ರಹವು ಹಲವು ಮೂಲಗಳಿಂದ Master pieces of Art, Oxford Junior Encylopaedia, The Arts, Outline of Arts ಇವುಗಳ ಅಧ್ಯಯನದ ಪಾಲು ಅಧಿಕ, ಬಾಕಿ ವೃತ್ತ ಪತ್ರಿಕೆಗಳ ಲೇಖನಗಳು, ಗುರು-ಹಿರಿಯರಿಂದ ಕೇಳಿದ ಹಾಗೂ ಸ್ವಾನುಭವದ ಅಂಶಗಳು ಸೇರಿವೆ. ಇದರಲ್ಲಿರುವ ಕೆಲವು ಲೇಖನಗಳು ಉದಯವಾಣಿ ದಿನಪತ್ರಿಕೆಯಲ್ಲೂ, ಒಂದೊಂದು ಲೇಖನವು ಪ್ರಜಾವಾಣಿ, ತರಂಗ, ವಿಕ್ರಮ ಪತ್ರಿಕೆಗಳಲ್ಲೂ ಪ್ರಕಾಶನಗೊಂಡಿವೆ, ಹೀಗೆ ಹಲವು ರೀತಿಗಳಲ್ಲಿ ಸಹಕರಿಸಿದವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

೫. 'ರಂಜಾಳ ಗೋಪಾಲ ಶೆಣೈ'

ಎಂಬ ಪುಸ್ತಕವನ್ನು ೧೯೮೮ ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಪ್ರಕಟಗೊಳಿಸಿತು. ಈ ಪುಸ್ತಕವು ಶಿಲ್ಪಕಲಾವಿದ ರಂಜಾಳ ಗೋಪಾಲ ಶೆಣೈಯವರ ಕುರಿತಾಗಿದ್ದು, ಇಲ್ಲಿ ಲೇಖಕರು ಒಬ್ಬ ಕಲಾವಿದನ ಪಟ್ಟ ಶ್ರಮ, ಮನೆತನದ ಪ್ರೋತ್ಸಾಹ, ಸಮಾಜದಲ್ಲಿ ಸಿಗುವಂತಹ ಗೌರವ, ಇವುಗಳನ್ನು ಕಣ್ಣಿಗೆ ಕಟ್ಟುವಂತೆ ಅವರ ನಿಜ ಬದುಕಿನಲ್ಲಿ ಹೊಂದಿಕೊಂಡಿರುವಂತೆ ಅನುಭವವನ್ನು ತಮ್ಮ ಬರಹದಲ್ಲಿ ತರಲು ಯತ್ನಿಸಿದ್ದಾರೆ.

ಗೋಪಾಲ ಶೆಣೈಯವರು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ೧೯೯೭ ರಲ್ಲಿ ಜನಿಸಿದರು. ಒಳ್ಳೆಯ ಸುಸಂಸ್ಕೃತ ಮನೆತನದಲ್ಲಿ ಹುಟ್ಟಿ ಬೆಳೆದ ಇವರು ಸಂಸ್ಕಾರಯುತ ತಂದೆ ತಾಯಿಯರ ಮಗನಾಗಿದ್ದನು. ಒಬ್ಬ ಕಲಾವಿದನಿಗೆ ಕಲೆಯನ್ನು ಬೆಳೆಸಿಕೊಳ್ಳಲು ಪರಿಸರವು ಕಾರಣ, ಕಾರ್ಕಳವು ಒಂದು ಐತಿಹ್ಯ ಹೊಂದಿರುವಂತಹ ಕಲ್ಲು ಅಲ್ಲಿ ಸಿಗುತ್ತಿತ್ತು. ಆ ಕಾರಣ ಅಲ್ಲಿ ಅನೇಕ ಶಿಲ್ಪ ಪ್ರಯೋಗಗಳಿಂದ ಶಿಲ್ಪಕಲಾಕೃತಿಗಳಾಗಿ ಅರಳಿದವು.

ಬಾಯಿರಿಯವರು ರಂಜಾಳರ ಬಾಲ್ಯ ತಂದೆ ತಾಯಿ, ಪರಿಸರ, ಶಿಕ್ಷಣ, ವೃತ್ತಿ, ಕಲಾಕೃತಿಗಳ ನಿರ್ಮಾಣ ಮರಗೆಲಸ, ಕಲಾಶಿಲ್ಪಗಳ ರಚನೆಯನ್ನು ತಮ್ಮ ಬರಹದಲ್ಲಿ ರಂಜಾಳರ ವಾಸ್ತವ ಬದುಕಿನಲ್ಲಿ ಇದ್ದಂತೆ ವಿವರಿಸಿದ್ದಾರೆ.

[೭]ಧರ್ಮಸ್ಥಳದ ಬಾಹುಬಲಿ ಮೂರ್ತಿಯ ನಿರ್ಮಾಣಕ್ಕೆ ಕೇಳಿಕೆ ಬಂದಾಗ ರಂಜಾಳರ ವಯಸ್ಸು ಎಪ್ಪತ್ತು ವರ್ಷ. ಅಂತಹ ಮಹತ್ತಾದ ಮೂರ್ತಿಯ ಕೆಲಸವನ್ನು ವಹಿಸಿಕೊಳ್ಳಲು ಎಂಟೆದೆ ಬೇಕು. ಅದಕ್ಕಿಂತ ಮುಂಚೆ ರಂಜಾಳರು ಅಷ್ಟು ಬೃಹದ್ಗಾತ್ರದ ವಿಗ್ರಹವನ್ನು ಕೆತ್ತಿರಲಿಲ್ಲ. ಅವರು ಶ್ರದ್ಧೆಯಿಂದ ಕಾಣುತ್ತಿದ್ದ ಆಪ್ತ ಜೋಯಿಸರನ್ನು ಕರೆಯಿಸಿ, "ಕಾರ್ಯ ನಿರ್ವಹಿಸಲು ನನ್ನಿಂದ ಸಾಧ್ಯವಾದೀತೇ, ವಹಿಸಿಕೊಳ್ಳಲೇ ?" ಎಂದು ಕೇಳಿದರು. "ನಿನಗೆ ದೈವ ಬಲ, ಗುರು ಬಲಗುಳುಂಟು. ವಹಿಸಿಕೊಳ್ಳು" ಎಂದು ಜವಾಬು ಬಂತು. "ನಾನು ಮಾಡುವುದಲ್ಲ, ದೇವರೇ ಮಾಡಿಸುವಂಥಾದ್ದು, ನಾನು ನಿಮಿತ್ತ ಮಾತ್ರ", ಎಂಬ ಭಕ್ತಿಭಾವನೆಯಿಂದ ೧೯೬೮ ಜೂನ್ ತಿಂಗಳಲ್ಲಿ ಆ ಶಿಲ್ಪ ರಚನೆಗೆ ರಂಜಾಳರು ಪ್ರವೃತ್ತರಾದರು.

ಆ ಮಹಾಶಿಲ್ಪದ ತಯಾರಿಗೆ ಶಿಲೆಗಾಗಿ ಕಾರ್ಕಳದ ಮಂಗಲಪಾದೆಯ ಹೆಬ್ಬಂಡೆಗಳಲ್ಲಿ ಸುತ್ತಾಡಿದರು. ತಕ್ಕ ಉದ್ದ, ಅಗಲ, ದಪ್ಪದ ಏಕಶಿಲೆಗಾಗಿ ಹುಡುಕಾಡಿದರು. ಮಂಗಲಪಾದೆಯು ಕಾರ್ಕಳದಿಂದ ಐದು ಕಿ.ಮೀ. ದೂರದಲ್ಲಿದೆ. ಈ ಮೂರ್ತಿ ನಿರ್ಮಾಣಕ್ಕಾಗಿ ಸಿಕ್ಕ ಬಂಡೆಯು ಒಂದು ನುರು ಅಡಿ ಉದ್ದ, ಐವತ್ತೆಂಟು ಅಡಿ ಅಗಲ, ಎಂಟು ಅಡಿ ದಪ್ಪವಾಗಿತ್ತು. ಆ ಮಹಾಶಿಲೆಯನ್ನು ಕೆತ್ತಿ ಶಿಲ್ಪ ನಿರ್ಮಿಸಲು ಕಲ್ಲುಕುಟ್ಟಿಗರನ್ನು ನೇಮಿಸಿ ಕೊಂಡರು.

೭. ಬಿ.ಪಿ. ಬಾಯಿರಿ : ರಂಜಾಳ ಗೋಪಾಲ ಶೆಣೈ, ಲೇಖಕರು, ಪುಟಸಂಖ್ಯೆ-೧೦ ರಿಂದ ೧೩.

ಅವರೆಲ್ಲರ ವಸತಿಗಾಗಿ ಆ ಹಾಸು ಬಂಡಗಳ ಅಂಚಿನಲ್ಲಿ ಐವತ್ತು ಗುಡಿಸಲುಗಳು ಎದ್ದುವು. ಅವರೆಲ್ಲರಿಗೆ ಕುಡಿಯುಲು, ಸ್ನಾನ ಮಾಡಲು ನೀರು ಬೇಕು. ಪ್ರತಿ ತಾಸಿಗೆ ಸುಮಾರು ಐದು ನೂರು ಚೇಣುಗಳು ಕಲ್ಲಿಗೆ ಕುಟ್ಟ ಬಡ್ಡಾಗುತ್ತಿದ್ದುವು. ಅವುಗಳನ್ನು ಕಾಯಿಸಿ ನೀರಿಗೆ ಅದ್ದಿ ಬಡಿದು ಹರಿತಗೊಳಿಸಲು ನಿರಂತರ ನೀರು ಬೇಕು. ಏನು ಮಾಡುವುದು, ಆ ಮಹಾಬಂಡೆಯಲ್ಲಿ ನೀರೆಲ್ಲಿ ? ಚಿಂತೆಗೊಳಗಾದರು.

ಅನಿವಾರ್ಯವಗಿ ಅಲ್ಲೇ ಒಂದು ಬಾವಿ ತೋಡ ತೊಡಗಿದರು. ನೀರು ಕಾಣಲು ಎಷ್ಟು ಆಳ ತೋಡಬೇಕಾಗುವುದೋ, ಆದಾಗಿಯೂ ನೀರು ಸಿಗುತ್ತದೊ, ಇಲ್ಲವೋ ? ಎಲ್ಲರಿಗೂ ಕಳವಳ, ಆದರೆ ನಾಲ್ಕೇ ಅಡಿ ಆಳದಲ್ಲಿ ಧಾರಾಳ ನೀರು ದೊರೆಯಿತು. ಎಲ್ಲರಿಗೂ ಆಶ್ಚರ್ಯ, ಆನಂದ. ತಮ್ಮ "ಈ ಕಾರ್ಯಕ್ಕೆ ದೈವಾನುಗ್ರಹ ಉಂಟು ಎಂಬುದರ ಸೂಚನೆ ಇದು" ಎಂದರು. ಪಾದೆಯಲ್ಲಿ ಚಿಕ್ಕ ಹೊಂಡದಲ್ಲಿ ಬೇಸಿಗೆಯಲ್ಲೂ ಕಮ್ಮಿಯಾಗದೆ ಧಾರಾಳ ನೀರು ಲಭಿಸಿದೆ ಎಂಬುದನ್ನು ಕೇಳಿ ಆಶ್ಚರ್ಯಪಟ್ಟು ಅದನ್ನು ನೋಡುವುದಕ್ಕಾಗಿ ಹಲವರು ಬಂದರು.

ಆಕೃತಿ ರಹಿತವಾದ ಶಿಲಾಖಂಡದ ಒಂದು ಮೈಯು ಶಿಲ್ಪಿಯ ಕೈಯಲ್ಲಿ ವಿಗ್ರಹದ ಸ್ಥೂಳ ರೂಪ ತಳೆದಿತ್ತು. ಇನ್ನು ಅದರ ಮತ್ತೊಂದು ಮಗ್ಗುಲಿನ ಓರೆ, ಕೋರೆ ಉಬ್ಬು, ತಗ್ಗುಗಳನ್ನು ಕೆತ್ತಬೇಕಾಗಿದೆ. ಆ ಬಗ್ಗೆ ಅದನ್ನು ಎರಡು ಅಡಿ ತಗ್ಗು ಸ್ಥಳಕ್ಕೆ ಜಾರಿಸಿ ಆಚೆ ಮಗ್ಗುಲು ಮೇಲೆ ಬರುವಂತೆ ಉರುಳಿಸಬೇಕು. ಅನಂತರ ಅದರ ಮೇಲೆ ಕುಳಿತು ಕೆಲಸ ಮಾಡಬೇಕು. ಹಾಗೆ ಆ ಮಹಾ ಬಂಡೆ ತುಂಡನ್ನು ತುಸು ಸ್ಥಳಾಂತರಿಸಲು ನುರಾರು ಮಂದಿ ಒಟ್ಟಾಗಿ ತಮ್ಮ ದೇಹಬಲ, ಬುದ್ಧಿ ಶಕ್ತಿಗಳನ್ನು ಉಪಯೋಗಿಸಿದರು, ಪ್ರಯೋಜನವಾಗಲಿಲ್ಲ, ಬಂಡೆ ಕದಲಲಿಲ್ಲ. ಸಂಜೆ ಆಯಿತು, ಆ ದಿನ ಅಷ್ಟಕ್ಕೆ ಬಿಟ್ಟು ಹೋದರು, ಮಾರನೇ ದಿನ ಇನ್ನಷ್ಟು ಶಕ್ತಿಯುತರಾಗಿ ಸರಿಸುವಾಗ ಅವರಿಗೊಂದು ಅಚ್ಚರಿ ಕಾದಿತ್ತು. ಆ ಶಿಲಾಭಾಗವು ಅವರಿಗೆ ಬೇಕಾದಂತೆ ಮೆಲ್ಲಮೆಲ್ಲನೆ ಕೆಳಕ್ಕೆ ಜಾರಿತ್ತು. ರಂಜಾಳರಿಗೆ ದೈವಾನುಗ್ರಹ ಇದೆ ಎಂಬುದಕ್ಕೆ ಮತ್ತೊಂದು ಸಾಕ್ಷಿ.

ಶಿಲ್ಪ ರಚನೆಗಾಗಿ ರಂಜಾಳರು ಒಂದು ನೂರು ಮಂದಿ ಕಲ್ಲುಕುಟ್ಟಿಗರ ನೆರವಿನಿಂದ ಐದು ವರುಷಕಾಲ ಶ್ರಮಿಸಿದರು. ಅಲ್ಲಿ ರಚನೆಯಾಗುತ್ತಿದ್ದ ಆ ಮಹಾ ಶಿಲ್ಪವನ್ನು ನೋಡಲು ಪ್ರತಿ ದಿನ ಸಾವಿರಾರು ಮಂದಿ ಬರುತ್ತಿದ್ದರು. ಮಂಗಲಪಾದೆ ಒಂದು ಯಾತ್ರಾಸ್ಥಳವಾಯಿತು. ಮೂರ್ತಿಯು ಶಿಲ್ಪ ಶಾಸ್ತ್ರ ಲಕ್ಷಣಾನುಸಾರ, ಪ್ರಮಾಣಬದ್ಧವಾಗಿ ಮೂಡಿ ಬಂದಿತು. ಈ ಶತಮಾನದ ಅದ್ಭುತ ಕಲಾಕೃತಿಯೊಂದರ ನಿರ್ಮಾಣದಲ್ಲಿ ರಂಜಾಳರು ಸಫಲರಾದರು. ನಮ್ಮ ಕಾಲದ ಶಿಲ್ಪಕಲಾ ಇತಿಹಾಸಕ್ಕೆ ಅಚ್ಚರಿಯ ಒಂದು ಅಧ್ಯಾಯ ಹೆಗ್ಗಡೆ ಕಾಲವಾದರು. ಅವರ ಕುಮಾರ ವೀರೇಂದ್ರ ಹೆಗ್ಗಡೆಯವರು ಪಟ್ಟವನ್ನೇರಿದರು. ತೀರ್ಥರೂಪರು ಪ್ರಾರಂಭಿಸಿದ

ಮಹತ್ಕಾರ್ಯವನ್ನು ಮುಂದುವರೆಸಿ ನಿರ್ವಹಿಸಿದರು.

ಸಿದ್ಧವಾದ ಆ ಬೃಹನ್ಮೂರ್ತಿಯ ಭಾರ ಇನ್ನೂರು ಟನ್‌ಗಳು. ಅದು ತವರೂರು ಕಾರ್ಕಳದಿಂದ ೭೫ ಕಿ.ಮೀ ದೂರದ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸಾಗಬೇಕು ಮತ್ತು ಅದನ್ನು ಒಂದು ಗುಡ್ಡದ ತುದಿಯಲ್ಲಿ ನೇರ ನಿಲಿಸಬೇಕಾಗಿತ್ತು. ಸಾಗಿಸುವ ಸಲುವಾಗಿ ಅರವತ್ನಾಲ್ಕು ಗಾಲಿಗಳ, ನವಲತ್ತೈದು ಅಡಿ ಉದ್ದದ ದೈತಗಾತ್ರದ ವಿಶೇಷ ಟ್ರಾಲಿಯನ್ನು ಸಿದ್ಧಪಡಿಸಲಾಯಿತು. ಕಾರ್ಕಳದಿಂದ ಧರ್ಮಸ್ಥಳದ ತನಕ ಉದ್ದಕ್ಕೂ ಮಾರ್ಗವನ್ನು, ಸೇತುವೆಗಳನ್ನೂ ಪರಿಶೀಲಿಸಿ ಸರಿಪಡಿಸಲಾಯಿತು. ಮೂರ್ತಿಯನ್ನು ಪ್ರಯಾಸದಿಂದ ಟ್ರಾಲಿಗೆ ಏರಿಸಿ, ಸಾಗಾಟದ ಮತ್ತು ಎತ್ತಿ ನಿಲ್ಲಿಸುವ ಹೊಣೆಯನ್ನು ಮುಂಬಯಿಯ ಮಗತ್ರಾಮ್ ಸಂಸ್ಥೆಯವರು ವಹಿಸಿಕೊಂಡಿದ್ದರು. ೧೯೭೩ ನೇ ಇಸವಿ ಮಾರ್ಚ್ ತಿಂಗಳಲ್ಲಿ ಈ ಬೃಹತ್ ವಿಗ್ರಹವು ಸಂಭ್ರಮದ ಮೆರವಣಿಗೆಯಲ್ಲಿ ವಿಜೃಂಭಣೆಯಿಂದ ಶ್ರೀ ಕ್ಷೇತ್ರಕ್ಕೆ ಸಾಗಿತು. ಅನೇಕ ಎರಡು ತೊಡರುಗಳನ್ನು ಇದಿರಿಸಿ ೨೩ ದಿನಗಳಲ್ಲಿ ಧರ್ಮಸ್ಥಳ ತಲುಪಿತು. ೧೯೮೨ ನೇ ಫೆಬ್ರುವರಿ ತಿಂಗಳಲ್ಲಿ ಪ್ರತಿಷ್ಠಾಪನಾ ಸಮಾರಂಭವು ವಿಜೃಂಭಣೆಯಿಂದ ಜರುಗಿತು. ಆ ಮೂರ್ತಿಯು ರಂಜಾಳರ ಹೆಸರನ್ನು ಮಾತ್ರವಲ್ಲ, ಕರ್ನಾಟಕದ ಹೆಸರನ್ನೂ ಚಿರಸ್ಥಾಯಿಯಾಗಿಸಿತು.

ಬಾಹುಬಲಿಯು ವಿರಕ್ತ, ರಾಜ್ಯವನ್ನೇ ತೊರೆದವ, ಆತನ ಮೂರ್ತಿಯು ನಗ್ನ ರೂಪದಲ್ಲಿ ನೇರವಾಗಿ ನಿಂತಿದೆ. ಪ್ರಶಾಂತಭಾವದ ಮುಖ, ತುಟಿಗಳಲ್ಲಿ ದಿವ್ಯವಾದ ನಸುನಗು, ದಯಾಪೂರ್ಣವಾದ ಧ್ಯಾನಮಗ್ನದ ಅರೆಮುಚ್ಚಿದ ನೇತ್ರಗಳು, ನೆತ್ತಿಯ ತುಂಬಾ ಹರಡಿರುವ ಗುಂಗುರು ಕೂದಲುಗಳ ಸುರುಳಿ, ತಪಸ್ಸಿಗೆ ನಿಂತ ಆತನ ಪಾದಗಳ ಬಳಿ ಹಾವಿನ ಹುತ್ತಗಳು, ಲತೆಗಳೂ, ಹಾವುಗಳೂ ಕೈಕಾಲುಗಳನ್ನು ಸುತ್ತಿವೆ. ಅದರ ಮದುರತೆ ಅದರ ಎಲೆಗಳನ್ನು ಹಲವರು ದೊಡ್ಡದಾಗಿ ಚಿತ್ರಿಸಿರುವುದುಂಟು. ರಂಜಾಳರು ಆ ಲತೆಯನ್ನು ತರಿಸಿ ಪರಿಶೀಲಿಸಿ ಅದರ ಎಲೆಗಳು ಚಿಕ್ಕವೆಂದು ಕಂಡು ಚಿಕ್ಕದಾಗಿಯೇ ರಚಿಸಿದರು. ಈಗ ಮಂಗಲಪಾದೆಯಲ್ಲಿ ಕೆಲಸ ಮಾಡುವ ಕಲ್ಲು ಕುಟ್ಟಿಗರಿಗಾಗಿ ಮನೆ ಕಟ್ಟಿಕೊಂಡಿರಲು ಪಾದೆ ಸಮೀಪ ಐದೈದು ಸೆಂಟ್ಸ್‌ನಂತೆ ಒಂದು ನೂರು ನಿವೇಶನಗಳನ್ನು ಸರಕಾರ ವಿಂಗಡಿಸಿ ಕೊಟ್ಟಿದೆ. ಆ ಪ್ರದೇಶವನ್ನು ಈಗ ಸುರೇಖಾನಗರ ಎಂದು ಹೆಸರಿಸಲಾಗಿದೆ.

ರಂಜಾಳರು ರಚಿಸಿದ ಪ್ರಮುಖ ಶಿಲ್ಪಗಳಲ್ಲಿ ಬುದ್ಧ ಮೂರ್ತಿ, ಸುಮಂತು, ಥೈಲ್ಯಾಂಡಿಗೆ ಕಳುಹಿಸಲಾದ ಬುದ್ಧ ವಿಗ್ರಹ, ಜೈಮಿನಿ, ಧರ್ಮಸ್ಥಳದಲ್ಲಿ ಸ್ಥಾಪಿಸಲಾಗಿರುವ ಬಾಹುಬಲಿ ಮೂರ್ತಿ, ಶುಕಮಿನಿ ಗರುಡ ಮಂಟಪದ ಒಂದು ಕಂಭ ಆಂಜನೇಯ ವಿಗ್ರಹ ! ಅಲ್ಲದೇ ಅನೇಕ ಶಿಲ್ಪಗಳ ಕಲೆಯನ್ನು ರಂಜಾಳ ರಚಿಸಿದ್ದಾರೆ.

ರಂಜಾಳರ ಕಲಾಬದುಕಿನ ವಿವಿಧ ಮಜಲುಗಳನ್ನು ಬಾಯಿರಿಯವರು ತಮ್ಮ ಬರಹದ

ಮೂಲಕ ಕಲಾಕ್ಷೇತ್ರಕ್ಕೆ ಪರಿಚಯಿಸಿದ್ದಾರೆ. ಬಾಯಿರಿಯವರ ಬರವಣಿಗೆ ಆಡಂಬರವಿಲ್ಲದ, ವೈಭವವಿಲ್ಲದ, ಸರಳ ಹಾಗೂ ಅರ್ಥ ಪೂರ್ಣ ಬರವಣಿಗೆಯ ಮೂಲಕ ತಮ್ಮ ಕಲಾ ಸಾಹಿತ್ಯವನ್ನು ಪರಿಚಯಿಸಿದ್ದಾರೆ.

೬. "ಚಿತ್ರಲೇಖನ"

ಈ ಪುಸ್ತಕವನ್ನು ಬಿ.ಪಿ.ಬಾಯಿರಿಯವರೇ ಚಿತ್ರಕುಟೀರ ಪ್ರಕಾಶನದಿಂದ ಹೊರತಂದಿದ್ದಾರೆ. ಈ ಪುಸ್ತಕವು ೧೯೭೨ನೇ ಇಸವಿಯಲ್ಲಿ ಮೊದಲ ಮುದ್ರಣ ಕಂಡ ಪುಸ್ತಕ. ಈ ಪುಸ್ತಕದಲ್ಲಿ ಚಿತ್ರದ ವಿವರವನ್ನು ಗಮನಿಸಿ ಆರಂಭಿಸಿ ಪೂರ್ತಿ ಚಿತ್ರ ಮಾಡುವುದು ಮಕ್ಕಳ ಸಾಮಾನ್ಯ ಗುಣವೆಂದು ತಿಳಿಸುತ್ತಾ, ಸ್ಥೂಲದಿಂದ ಸೂಕ್ಷ್ಮಕ್ಕೆ ಚಿತ್ರಸಬೇಕಾಗಿರುವ ರಚನಾ ಕ್ರಮ ಚಿತ್ರವಸ್ತುವನ್ನು ಸ್ಥೂಲವಾಗಿ ನೋಡಿ ಅದಕ್ಕೆ ಸಂಬಂಧಿಸಿರುವ ಒಂದು ಭೂಮಿತಿ ಆಕೃತಿಯನ್ನು ಕಂಡು ಇಡೀ ಚಿತ್ರದ ಹೊರಗಡೆ ಗುರ್ತಿಸಿ ನಂತರ ವಿವರಗಳನ್ನು ಗಮನಿಸಬೇಕು. ಈ ಪುಸ್ತಕದ ಪುಟ ಸಂಖ್ಯೆ ೭,೮, ಮತ್ತು ೯ ರಲ್ಲಿ ಆ ವಸ್ತುಗಳಿಗೆ ಸ್ಥೂಲವಾಗಿ ಸಂಬಂಧಪಟ್ಟ ಆಯತ, ವೃತ್ತ, ತ್ರಿಕೋನ ಮೊದಲಾದ ಆಕೃತಿಗಳನ್ನು ಚಿತ್ರಿಸಿ ಬಳಿಕ ವಿವರಗಳನ್ನು ಬಿಡಿಸಬೇಕೆಂಬುದನ್ನು ಸೂಚಿಸಲಾಗಿದೆ.

ಮನುಷ್ಯರ ಚಿತ್ರಗಳಲ್ಲೂ ಉಬ್ಬು-ತಗ್ಗುಗಳನ್ನು ಪೂರ್ತಿ ಮಾಡುತ್ತಾ ಹೋಗದೇ ಮೊದಲು ನೇರ ವೃತ್ತಗಳು ದೀರ್ಘ ವೃತ್ತಗಳನ್ನು ಗುರುತಿಸಿ ಇದಿರಿನ ನಂತರ ಬಿಡಿಗಳನ್ನು ಚಿತ್ರಿಸಬೇಕು ಎಂದು ಪುಟ ಸಂಖ್ಯೆ ೨೬ ಮತ್ತು ೨೭ ರಲ್ಲಿ ಸೂಚಿಸಲಾಗಿದೆ. ಫ್ರಾಬೆಲ್ ಎಂಬುದು ಜರ್ಮನಿಯ ಶಿಕ್ಷಣ ತಜ್ಞ ಮಕ್ಕಳು ಬದ್ಧವಾಗಿ ನೇರಗೆರೆ ಎಳೆದಾಗ ಓರೆ ಕೊರೆಗಳ ರೇಖೆಗಳಾಗುತ್ತವೆ. ಪರಿಣಾಮವಾಗಿ ತಮಗೆ ಚಿತ್ರ ಮಾಡಲು ಬರುವುದಿಲ್ಲವೆಂದು ನಿರಾಶೆಯಾಗುತ್ತಾರೆ. ಹಾಗಾಗದಂತೆ ಲಿಖಿತ ಕಾಗದಗಳ ಮೇಲೆ ಎರೆಡೆರಡು ಅಂಗುಲ ಉದ್ದಕ್ಕೂ ನೇರಗೆರೆಗಳನ್ನು ಅಡ್ಡವಾಗಿ ಹಾಕಿಸಿ, ಅಡ್ಡವಾಗಿ ಕಂಡುಬರುವ ಕಿಟಕಿ, ಕಪಾಟು, ಮನೆ, ಲಾರಿ, ಮೊದಲಾದ ಚಿತ್ರಗಳು ಆ ನೇರ ಗೇರೆಗಳ ದಿಶೆಯಲ್ಲಿ ಓರೆಯಾಗದೆ ಸೊಗಸಾಗಿ ಕಂಡು ಚಿತ್ರಿಸಲು ಮಕ್ಕಳಿಗೆ ಆತ್ಮವಿಶ್ವಾಸ ಮೂಡುತ್ತದೆ.

ಪುಟ ಸಂಖ್ಯೆ ೪,೫ ಮತ್ತು ೬ ರಲ್ಲಿ ಅಂತಹ ಚಿತ್ರಗಳನ್ನು ನಾವು ನೋಡಬಹುದು. ಇದನ್ನು ಬಿ.ಪಿ.ಹಾಯಿರಿಯವರು "ಫ್ರಾಬೆಲ್‌ನ ಚಿತ್ರ ಶಿಕ್ಷಣ" ವಿಧಾನ ಎಂದು ಕರೆಯುತ್ತಾರೆ. ಅದಲ್ಲದೆ, ವಸ್ತುಚಿತ್ರಣ, ವೃತ್ತಾಕಾರದಲ್ಲಿ ಮೂಡುವ ವಿವಿಧ ಪಕ್ಷಿಗಳು, ಚೌಕಾಕಾರದಲ್ಲಿ ಮೂಡುವ ಹೂವು-ಎಲೆಗಳು, ಫ್ರೀ ಹ್ಯಾಂಡ್ ಡಿಸೈನಗಳು, ತರಕಾರಿ, ಹಣ್ಣು-ಹಂಪಲುಗಳು, ಮಾನಾವಾಕೃತಿಗಳು, ಪ್ರಕೃತಿ ಚಿತ್ರಣ, ಪ್ರಾಣಿಗಳು ಮುಂತಾದವುಗಳ ಬಗ್ಗೆ ಚಿತ್ರಗಳನ್ನು ಅತೀ

ಸರಳ ಹಾಗೂ ಸುಲಭವಾಗಿ ರಚಿಸುವ ತಂತ್ರವನ್ನು ಇಲ್ಲಿ ಕೊಟ್ಟಿದ್ದಾರೆ. ಯಥಾದರ್ಶನದ ಬಗ್ಗೆ ಕೂಡಾ ಇದರಲ್ಲಿ ನಿರೂಪಣೆ ಮಾಡಿದ್ದಾರೆ. ಕೊನೆಯ ಪುಟಗಳಲ್ಲಿ ಕನ್ನಡ, ಇಂಗ್ಲೀಷ ಅಕ್ಷರ ಬರವಣಿಗೆ ಪ್ರಕಾರಗಳ ಬಗ್ಗೆ ಚಿತ್ರ ಮಾಹಿತಿಯನ್ನು ನೀಡಿದ್ದಾರೆ.

ಒಟ್ಟಾರೆಯಾಗಿ "ಚಿತ್ರ ಲೇಖನವು" ಪ್ರಾಥಮಿಕ ಕಲಾ ಶಿಕ್ಷಣ ನೀಡುವುದಕ್ಕೆ ಒಂದು ಉತ್ತಮ ನಿದರ್ಶನವಾಗಿದೆ. ಅವರು ತೋರಿದ ಆಸಕ್ತಿ, ಮಕ್ಕಳ ಚಿತ್ರಲೇಖನ ಪುಸ್ತಕದಲ್ಲಿ ಅತೀ ಸರಳತೆ ಹಾಗೂ ಸುಲಭವಾಗಿ ಮಕ್ಕಳಲ್ಲಿ ಚಿತ್ರ ರಚನೆ ಮಾಡುವಂತೆ ಪ್ರಚೋದನೆ ನೀಡುತ್ತದೆ.

೭. ಚಿತ್ರಕಲೆ

೧೯೮೦ ರಲ್ಲಿ ಮೊದಲ ಮುದ್ರಣಕಂಡ "ಚಿತ್ರಕಲೆ" ಎಂಬ ಕಿರು ಪುಸ್ತಕ ಮಾಲೆ ಪ್ರಕಟಿಸಲಾಯಿತು ಈ ಪುಸ್ತಕದಲ್ಲಿ ಬಿ.ಪಿ. ಬಾಯಿರಿಯವರ ಈ ಪುಸ್ತಕದಲ್ಲಿ ವರ್ಣನೆ. ಅತೀ ಸಂಕ್ಷಿಪ್ತವಾಗಿ ನೀಡಲಾಗಿದೆ. ಆದಿ ಮಾನವ ಚಿತ್ರಕಲೆ, ಯುರೋಪಿನ ಚಿತ್ರಕಲೆ, ಚೀನಾ, ಜಪಾನ ಚಿತ್ರಕಲೆ, ಇಜಿಪ್ತ, ಗ್ರೀಕ್ ಚಿತ್ರಕಲೆ ಬಗ್ಗೆ ಸರಳವಾಗಿ ಮತ್ತು ಸಂಕ್ಷಿಪ್ತ ರೂಪದಲ್ಲಿ ಪ್ರತಿಯೊಂದು ವಿವರಣೆಯನ್ನು ಟಿಪ್ಪಣಿ ಮೂಲಕ ವಿವರಿಸಿದ್ದಾರೆ. ಭಾರತದ ಚಿತ್ರಕಲೆ ಅಧ್ಯಾಯದಲ್ಲಿ ಹರಪ್ಪ ಮಹೆಂಂಜೋದಾರೋ ಚಿತ್ರಕಲೆ ಸಂಸ್ಕೃತಿ ನಾಗರೀಕತೆ ಕುರಿತು ಬೌದ್ಧ ಚಿತ್ರಕಲೆಯಲ್ಲಿ ಅಜಂತಾದ ಸುಂದರ ವಾಸ್ತುಚಿತ್ರ, ಭಿತ್ತಿಚಿತ್ರಗಳ ಬಗ್ಗೆ ಅತೀ ಸರಳ ಅರ್ಥದೊಂದಿಗೆ ವಿವರಣೆ ನೀಡಿದ್ದಾರೆ. ಅದಲ್ಲದೆ ಜೈನ ಚಿತ್ರಕಲೆ, ಮೊಘಲ್ ಚಿತ್ರಕಲೆ, ರಜಪೂತ ಚಿತ್ರಕಲೆ, ಕಾಂಗ್ರಾ ಶೈಲಿ ಮುಂತಾದ ಅರಸು ವಂಶದ ವಾಸ್ತುಶಿಲ್ಪ ಚಿತ್ರಕಲೆ, ಸಂಸ್ಕೃತಿಯ ವರ್ಣನೆ, ಕೂಡಾ ಮೆಚ್ಚುವಂತದ್ದಾಗಿದೆ. ಕೊನೆಯದಾಗಿ "ವ್ಯತ್ಯಾಸಗಳು" ಎಂಬ ಟಿಪ್ಪಣಿಯಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಕಲೆಗಳ ಬಗ್ಗೆ ಇರುವ ವ್ಯತ್ಯಾಸಗಳೂ ಭಾರತೀಯ ಚಿತ್ರಕಲೆಯಲ್ಲಿ ಪರಸ್ಪರ ಇರುವ ವ್ಯತ್ಯಾಸಗಳನ್ನು ಚುಟುಕಾಗಿ ಬರೆದಿದ್ದಾರೆ. ಪ್ರಸ್ತುತ ಆಧುನಿಕ ಕಾಲದಲ್ಲಿ ಚಿತ್ರಕಲೆ ಬೆಳೆದು ಬಂದ ದಾರಿ ಅದರ ವಿಸ್ತಾರದ ಬಗ್ಗೆ ವಿವರಣೆ ಇದೆ. ಭಾರತದಲ್ಲಿ ನವ್ಯಕಲೆಗೆ ನಾಂದಿಹಾಕಿದ ಕಲಾವಿದರ ಪರಿಚಯವನ್ನು ಕೂಡಾ ನೀಡಿದ್ದಾರೆ. ಕಲೆಯ ಅಭಿವೃದ್ಧಿಗಾಗಿ ಸರಕಾರದಿಂದ ಅಕಾಡೆಮಿಗಳು, ಕಲಾವಿದರ ಗ್ರಾಮಗಳು ಸಂಘ ಸಂಸ್ಥೆಗಳು ನಿರ್ಮಾಣವಾಗಿದೆ ಮತ್ತು ದೇಶ ವಿದೇಶಗಳು ಕಲೆಯ ಬೆಳವಣಿಗೆಯನ್ನು ಅತಿ ಆಸಕ್ತಿಯಿಂದ ಗಮನಿಸುತ್ತಾರೆ. ಎನ್ನುವ ಮಾತು ಹೀಗೆ ಕಲೆಯ ಆಧುನಿಕ ಯುಗದಲ್ಲಿ ಪ್ರಗತಿ ಸಾಧಿಸಿ ಇತರ ದೇಶಗಳೊಡನೆ ಭಾರತದ ಕಲೆ ತಲೆ ಎತ್ತಿ ನಿಲ್ಲುವಂತಾಗಬೇಕು ಎಂದು ಅವರ ಅಭಿಪ್ರಾಯ.

೮. ಚಿತ್ರಕಲೆಯ ಚಿಕ್ಕ ಕಥೆಗಳು

ಇದು ೧೯೮೦ ರಲ್ಲಿ ಮುದ್ರಣ ಕಂಡಿತು. ಪ್ರಕಾಶಕರು ಸಮಾಜ ಪುಸ್ತಕಾಲಯ ಧಾರವಾಡ ಜೇನು ನಾಲಿಗೆಗೆ ಸಿಹಿ ಮಾತ್ರವಲ್ಲ ಆರೋಗ್ಯಕ್ಕೂ ಹಿತಕರ ಹಾಗೆಯೇ ಚಿತ್ರಕಲೆಯ ಈ ಪುಟ್ಟ ಕಥೆಗಳ ಉದ್ದೇಶವು ಮನೋರಂಜನೆ ಮಾತ್ರವಲ್ಲ. ಕಲೆಯ ಅವಶ್ಯಕತೆ ಕಲಾ ಪ್ರೋತ್ಸಾಹ. ಕಲಾವಿದರ ಬದುಕು. ಕಲೆಯ ಸ್ಥಾನಮಾನ ಮುಂತಾದವುಗಳ ಕುರಿತು ಜ್ಞಾನ ನೀಡುವುದೂ ಆಗಿರುತ್ತದೆ. ಇವುಗಳಲ್ಲಿ ಕೆಲವನ್ನು ಸಂದರ್ಭಾನುಸಾರ ಜನಸಾಮಾನ್ಯರ ಬಾಯಿಯಿಂದ ಕೇಳಬಹುದು. ಕೆಲವನ್ನು ವಿದ್ವಾಂಸರ ಉಪನ್ಯಾಸ ಹರಿಕಥೆಗಳಲ್ಲಿ ಕೇಳುವುದು. ಇನ್ನೂ ಕೆಲವನ್ನು ನಿಯತಕಾಲಿಕ ವೃತ್ತ ಪತ್ರಿಕೆಗಳಲ್ಲೂ ಪುರಾತನ ಕಾವ್ಯ ಪುರಾಣ ಗ್ರಂಥಗಳಲ್ಲೂ ಓದಿದ್ದು ಆಗಿದೆ. ಹೀಗೆ ಅವರು ವಿಷಯವನ್ನು ಸಂಗ್ರಹಿಸಿ ಚಿತ್ರಕಲೆಯ ಚಿಕ್ಕ ಕಥೆಗಳು ಎಂಬ ಪುಸ್ತಕವನ್ನು ೧೯೮೦ ರಲ್ಲಿ ಪ್ರಕಟವಾಗುವಂತೆ ನೋಡಿಕೊಂಡರು. ಲೇಖಕರ ಪಾಲಿಗೆ ಚಿಕ್ಕ ಕಥೆಗಳು ಆದರೆ ಇದರಲ್ಲಿ ಒಳಗೊಂಡಿರುವ ವಿಷಯವನ್ನು ಓದಿದರೆ ಅದು ಜನರಿಗೆ ಸತ್ಯಾಂಶವನ್ನು ಕಂಡು ಕೊಳ್ಳುವ ಮತ್ತು ಚಿಂತನೆಗೆ ಒಳಪಡಿಸುವ ಅಂಶವನ್ನು ಮೀರುತ್ತವೆ. ನಮ್ಮಲ್ಲಿ ಕಲೆಯ ಕುರಿತು ಆಸಕ್ತಿ ಅಭಿಮಾನಗಳು ಹೆಚ್ಚಬೇಕಾಗಿದೆ. ಅದಕ್ಕಾಗಿ ಇಂತಹ ಬರಹಗಳು, ಅವಶ್ಯಕ ದ್ವಿತೀಯ ಮುದ್ರಣದಲ್ಲಿ ಇನ್ನಷ್ಟು ಕಥೆಗಳು, ರಸಪ್ರಸಂಗಗಳು ನುಡಿಮುತ್ತುಗಳು ಇದರಲ್ಲಿ ಸೇರಿಸಲಾಗಿದೆ.

೯. "ಭಾರತೀಯ ಚಿತ್ರಕಲೆ"

ಈ ಪುಸ್ತಕವನ್ನು ಧಾರವಾಡದ ಪ್ರತಿಭಾ ಗ್ರಂಥಮಾಲೆಯವರು ೧೯೭೬ ಮತ್ತು ೧೯೮೯ ರಲ್ಲಿ ಎರಡು ಮುದ್ರಣಗಳಲ್ಲಿ ಪ್ರಕಟಗೊಳಿಸಿದರು. ಬಾಯಿರಿಯವರು ಭಾರತದ ಪ್ರಮಾದಿ ಮಾನವನ ಕಲೆಯಿಂದ ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲದ ಚಿತ್ರಕಲೆಯನ್ನು ಈ ಕಿರು ಪುಸ್ತಕದ ಮೂಲಕ ಪರಿಚಯಿಸಿದ್ದಾರೆ. ಆ ಸಂದರ್ಭದಲ್ಲಿ ಕನ್ನಡದಲ್ಲಿ ಕಲಾಚರಿತ್ರೆಗೆ ಸಂಬಂಧಿಸಿದ ಯಾವ ಪುಸ್ತಕಗಳು ಅಷ್ಟೊಂದು ಇದ್ದಿಲ್ಲ. ಕೇವಲ ಕಲಾವಿದರು ಚಿತ್ರರಚನೆ ಮಾಡುವುದು ಮುಖ್ಯವಲ್ಲ. ಚಿತ್ರದ ಕುರಿತು ಮಾಹಿತಿಯನ್ನು, ಉದ್ದೇಶವನ್ನು ಹಾಗೂ ಚಿತ್ರಭಾಷೆಯನ್ನು ಪರಿಚಯಿಸುವುದು ಮುಖ್ಯ. ಒಂದು ಚಿತ್ರಬರೆಯಬೇಕಾದರೆ ಕಲಾವಿದನಾದವನಿಗೆ ಪೂರ್ವಾಪರ ಯೋಚನೆ, ಗ್ರಂಥಗಳ ಪಠಣ, ವಿಷಯ ವಿವೇಚನೆ, ದೈಹಿಕ-ಮಾನಸಿಕ ಚೈತನ್ಯತೆ ಕಲ್ಪನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಇದನ್ನು ಮೈಗೂಡಿಸಿಕೊಳ್ಳಬೇಕಾದರೆ ಪುರಾಣಗ್ರಂಥಗಳು, ರಾಜಕೀಯ ಇತಿಹಾಸ, ಭಾಷೆ ಒಂದು ದೇಶದ ಹಾಗೂ ಒಂದು ಪ್ರಾಂತದ ಕಲೆಯ ಕುರಿತು ತಿಳಿದುಕೊಳ್ಳುವುದು. ವಿವಿಧ ಕಲಾವಿದರ

ಚರಿತ್ರೆಯನ್ನು ಅರಿತುಕೊಳ್ಳುವದು ಇತ್ಯಾದಿಯಾಗಿ ತನ್ನನ್ನು ತಾನು ಕಲಾಕ್ಷೇತ್ರಕ್ಕೆ ಅರ್ಪಿಸಿಕೊಂಡು ಚಿಂತನ-ಮಂಥನದ ಮೂಲಕ ಸತ್ವಯುತ ಕಲಾಕೃತಿಯಾಗಲಿ ಅಥವಾ ಬರಹವಾಗಲಿ ಮೂಡಲು ಸಾಧ್ಯ. ಈ ರೀತಿಯಾಗಿ ರೂಢಿಸಿಕೊಂಡವರು ಬಾಯಿರಿಯವರು.

ಭಾರತೀಯ ಚಿತ್ರಕಲೆಯಲ್ಲಿ ಆದಿಮಾನವನ ಚಿತ್ರಕಲೆಯ ಕುರಿತು, ಸಿಂಧೂಕಣಿವೆಯ ಕಲೆ, ವೇದಕಾಲದಲ್ಲಿನ ಚಿತ್ರಕಲೆ, ಪ್ರಾಚೀನಕಾಲದಲ್ಲಿನ ವಿವಿಧ ಗ್ರಂಥಗಳ ಚಿತ್ರಕಲೆ, ಕಾವ್ಯ ಮತ್ತು ಪುರಾಣಗಳಲ್ಲಿ ಚಿತ್ರಕಲೆಯ ಉಲ್ಲೇಖದ ಕುರಿತು. ಗಾಂಧಾರ, ಬೌದ್ಧಕಾಲಮಾನದ ಚಿತ್ರಕಲೆ, ಗುಹಾಲಯದ ಚಿತ್ರಗಳನ್ನು ಕುರಿತು ದೇವಾಲಯಗಳ ಭಿತ್ತಿ ಚಿತ್ರಗಳ ಕುರಿತು. ಮೊಘಲ ಹಾಗೂ ರಜಪೂತ ಅರಸರ ಕಾಲದ ಕಿರುರೂಪ ಚಿತ್ರಕಲೆ ಹಾಗೂ ವಿಜಯನಗರ, ಕಾಂಗ್ರಾ, ರಾಜಸ್ಥಾನಿ, ಮೈಸೂರು ಚಿತ್ರಕಲಾ ಶೈಲಿಯ ಕುರಿತು ಕಲಾ ಓದುಗರಿಗೆ, ಕಲಾ ಇತಿಹಾಸಕಾರರಿಗೆ ಒಂದು ಉತ್ತಮ ಕೊಡುಗೆಯಾಗಿ ನೀಡಿದ್ದಾರೆ. ಇಲ್ಲಿ ಎಲ್ಲ ಕಲೆಯ ಕುರಿತು ಆಳವಾಗಿ ತಿಳಿಸದೇ ಹೋದರು, ಆ ಕಲೆಗಳ ಸಂಕ್ಷಿಪ್ತ ಮುಖ್ಯಾಂಶಗಳನ್ನು ತಿಳಿಸಲು ಪ್ರಯತ್ನಿಸಿದ್ದಾರೆ.

ಭಾರತೀಯ ಚಿತ್ರಕಲೆಯ ಶ್ರೇಷ್ಠೊತ್ತಮರಲ್ಲಿ ಭಾರತೀಯ ಕಲೆಯಲ್ಲಿ ಹೊಸ ಕ್ರಾಂತಿಯನ್ನು ಹುಟ್ಟುಹಾಕಿದವರಾದ ಶ್ರೀ ಅವನೀಂದ್ರನಾಥ ಟ್ಯಾಗೋರ, ಕಲಾ ಚಾರ್ಯ ನಂದಲಾಲ್ ಬೋಸ ಹಾಗೂ ಅಮೃತ ಶೇರ್‌ಗೀಲ್‌ರ ಜೀವನ, ಕಲಾಬದುಕು ಹಾಗೂ ಅವರ ಸಾಧನೆಗಳನ್ನು ಪರಿಚಯಿಸಿದ್ದಾರೆ. ಈ ಮೂವರು ಕಲಾವಿದರು ಭಾರತೀಯ ಕಲಾ ಇತಿಹಾಸದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಭಾರತೀಯ ಕಲೆಗೆ ಚೈತನ್ಯತೆಯ ಹೊಸರೂಪವನ್ನು ಕೊಟ್ಟಿದ್ದಾರೆ. ಬಾಯಿರಿಯವರು ಪುಸ್ತಕದ ಉದ್ದೇಶವನ್ನು ಹಾಗೂ ರಚನೆಯ ಮುಖ್ಯಾಂಶಗಳು ಪೀಠಿಕೆಯಲ್ಲಿ ಹೀಗೆ ವಿವರಿಸಿದ್ದಾರೆ.

[೮]ವರ್ಣಚಿತ್ರಕಲೆಯು ಈ ಹಿಂದೆ ಭಾರತದಲ್ಲಿ ಇದ್ದಿಲ್ಲ ಎಂಬುದಾಗಿ, ಸಾಮಾನ್ಯವಾಗಿ ನೂರೈವತ್ತು ವರುಷ ಹಿಂದಿನ ತನಕವೂ ಪಾಶ್ಚಾತ್ಯರ ಭಾವನೆಯಾಗಿತ್ತು. ಕೆಲವು ವರ್ಣಚಿತ್ರಗಳು ಅವರಿಗೆ ದೊರೆತಿದ್ದವು. ಅವುಗಳನ್ನು ಕೊಂಡುಹೋಗಿ ತಮ್ಮ ವಸ್ತು ಸಂಗ್ರಹಾಲಯಕ್ಕೆ ಸೇರಿಸಿದ್ದರು. ಅವುಗಳನ್ನು ಚಿತ್ರಕೃತಿ ಅನ್ನುವುದಕ್ಕಿಂತಲೂ ಅಲಂಕಾರದ ನಮೂನೆಗಳು, ವಿಚಿತ್ರ ರೂಪಗಳು ಎಂಬುದಾಗಿ ಭಾವಿಸಿದ್ದರು. ಅವು ಭಾರತದ್ದು ಎಂದು ತಿಳಿಯದೆ ಚೀನಾದೇಶದ್ದು, ಪರ್ಶಿಯಾ ದೇಶದ್ದು ಎಂದು ವಿವರ ಪಟ್ಟಿಯಲ್ಲಿ ಬರೆದುದ್ದುಂಟು. ನಮ್ಮ ಚಿತ್ರಕಲೆಯ ಕುರಿತು ಅಷ್ಟು ಅಜ್ಞಾನವಿತ್ತು.

---

೮. ಬಿ.ಪಿ.ಬಾಯಿರಿ : ಭಾರತೀಯ ಚಿತ್ರಕಲೆ, ಪಿಠಿಕೆ ೪-೧೯೮೯.

ಜಪಾನರ ಚಿತ್ರಕಲೆಯನ್ನು ಪರಿಶೀಲಿಸಿದ ನಂತರ ಅವರಿಗೆ ಚಿತ್ರವನ್ನು ನೋಡುವ ಹೊಸದೃಷ್ಟಿ ಉಂಟಾಯಿತು. ಪೂರ್ವದೇಶಗಳ ಕಲಾಪರಿಚಯ ಮಾಡಿಕೊಳ್ಳುವುದು ಅಗತ್ಯವೆನಿಸಿತು. "ಚಿತ್ರವೆಂದರೆ ತದ್ರೂಪವಾಗಿರಬೇಕು. ತೆಳು ಹಲಗೆ ಅಥವಾ ನಾರಿನಬಟ್ಟೆಯ ಮೇಲೆ ರಚಿಸಿರಬೇಕು. ಗೀಲಿಟಿನ ಚೌಕಟ್ಟು ಹಾಕಿರಬೇಕು. ಗೋಡೆಗಳ ಮೇಲೆ ತೂಗುಹಾಕುವಂತಿರಬೇಕು" ಮೊದಲಾದ ಭಾವನೆಗಳನ್ನು ತ್ಯಜಿಸಿದರು. ಬೌದ್ಧರ ಭಿತ್ತಿಚಿತ್ರಗಳು, ರಜಪೂತ ಹಾಗೂ ಮೊಘಲರ ಚಿಕ್ಕ ಚಿತ್ರಗಳು-ಎಲ್ಲವೂ ಭಾರತೀಯ ಚಿತ್ರಕಲಾ ನಿರೂಪಣೆಗಳು ಎಂದು ಗಮನಿಸತೊಡಗಿದರು.

ನಮ್ಮ ಕಲೆಯ ಕುರಿತು ಹಿಂದೆ ಪಾಶ್ಚಾತ್ಯರಲ್ಲಿ ಇದ್ದ ಅಂತಹ ಅನಾದರ ಅಜ್ಞಾನ ಭಾವನೆಗಳು ನಮ್ಮಲ್ಲಿ ವಿದ್ಯಾವಂತರೆನಿಸಿಕೊಂಡ ಅನೇಕರಲ್ಲಿ ಈಗ ಕೂಡ ಇರುವುದು ಕಂಡು ಬರುತ್ತದೆ. ಜನತೆಯಲ್ಲಿ ಭಾರತೀಯ ಕಲೆಯ ಇತಿಹಾಸ, ಕಲಾಕೃತಿಗಳ ಪರಿಜ್ಞಾನವು ಉಂಟಾದರೆ ಕಲೆಗೆ ಉತ್ತಮ ಭವಿಷ್ಯವಿದೆ. ಏಕೆಂದರೆ ಕಲೆಯು ಅಭಿಮಾನಿಗಳ ಅಭಿರುಚಿ ಮತ್ತು ಪೋಷಣೆಗಳಿಂದ ಬೆಳೆಯುತ್ತದೆ. ಕನ್ನಡ ಭಾಷೆಯಲ್ಲಿ ಹಾಗೆ ಕಲೆಯ ಕುರಿತು ಗ್ರಂಥಗಳು ವಿರಳ. ಈ ಚಿಕ್ಕ ಪುಸ್ತಕವು ಅದರ ಅಗತ್ಯವನ್ನು ಸ್ವಲ್ಪ ಮಟ್ಟಿಗಾದರೂ ಪೂರೈಸುವುದೆಂದು ಹಾರೈಸಲಾಗಿದೆ.

ಭಾರತದಲ್ಲಿ ಈಗ ಪ್ರವರ್ಧಮಾನವಾಗುತ್ತಿರುವ ಸುಪ್ರಸಿದ್ಧ ಕಲೆಗಾರರ ಬಳಗವು ದೊಡ್ಡದಾಗಿದೆ. ಇದು ಅಭಿಮಾನದ ವಿಷಯ. ಈ ಸಂಕ್ಷಿಪ್ತ ಇತಿಹಾಸದಲ್ಲಿ ಅವರೆಲ್ಲರ ಕಲಾಸಾಧನೆಗಳನ್ನು ಹೇಳುವುದು ಅವಶ್ಯಕ. ಆದುದರಿಂದ ಇದರಲ್ಲಿ ಸೂಚ್ಯವಾಗಿ ಮೂರು ಮಂದಿ ಭಾರತೀಯ ಕಲೆಗಾರರ ಸಂಕ್ಷಿಪ್ತ ಪರಿಚಯವನ್ನು ಮಾತ್ರ ಕೊಡಲಾಗಿದೆ.

೧೦. ಭಾರತೀಯ ಸಂಸ್ಕೃತಿಯಲ್ಲಿ ರಂಗವಲ್ಲಿ

ಈ ಪುಸ್ತಕವನ್ನು ಸ್ವತಹ ೧೯೯೨ ರಲ್ಲಿ ಬಿ.ಪಿ.ಬಾಯಿರಿಯವರು ಬರೆದು ಪ್ರಕಟಿಸಿದ್ದಾರೆ. ಇವರು ರಂಗೋಲಿಕಲೆಯನ್ನು ವಿವಿಧ ರಾಜ್ಯಗಳಲ್ಲಿ ಪ್ರಾದೇಶಿಕ ಭಾಷೆಗಳಿಂದ, ಆಚರಣೆಯ ವಿವಿಧ ಪದ್ಧತಿ ರಚನಾ ವಿಧಾನ, ನಕ್ಷಾ ವಿನ್ಯಾಸದ ಕುರಿತು ವಿಷಯವನ್ನು ಸಂಗ್ರಹಿಸಿ ಬರೆದಿದ್ದಾರೆ.

ರಂಗೋಲಿ ಕಲೆಯ ಇತಿಹಾಸವು ಶಾಸನಗಳಲ್ಲಿನ ಉಲ್ಲೇಖ ಪುರಾಣ ಶಾಸ್ತ್ರಗಳಲ್ಲಿನ ಉಲ್ಲೇಖಗಳನ್ನು ಪರಿಚಯಿಸಿದ್ದಾರೆ. ರಂಗೋಲಿಯು ಕೇವಲ ಸೌಂದರ್ಯದ ದೃಷ್ಟಿಯಿಂದ ಹಾಕುವುದಲ್ಲ ಅದು ಮನುಷ್ಯನ ಆಚರಣೆ, ನಂಬಿಕೆಯನ್ನಿಟ್ಟಕೊಂಡು ಪ್ರಾಚೀನತೆಯಿಂದ ಇಂದಿನ ವರೆಗೂ ಅನುಸರಿಸುತ್ತಾ ಬಂದಿದ್ದಾರೆ. ಇಲ್ಲಿ ದೇವರು ದಯೇ, ದುಷ್ಟಶಕ್ತಿಯ ನಿಗ್ರಹ, ಆಕ್ರಮಣದಿಂದ ತಪ್ಪಿಸಿಕೊಳ್ಳುವದು. ಮನವರಿಕೆ ಮಾಡಿಕೊಳ್ಳದು ಕೂಡಾ ರಂಗೋಲಿಯ ಉದ್ದೇಶವಾಗಿದೆ. ರಾಮನು ಬಂಗಾರದ ಜಿಂಕೆಯನ್ನು ಬೆನ್ನಟ್ಟಿಕೊಂಡು ಹೋದಾಗ ಲಕ್ಷ್ಮಣನು

ಕುಟೀರದ ಬಾಗಿಲ ಮುಂದೆ ಒಂದು ಗೆರೆಯನ್ನು ಹಾಕಿ ಅತ್ತಿಗೆಗೆ ದಾಟದಂತೆ ಆತನು ಹೇಳಿರುತ್ತಾನೆ. ಇದನ್ನು ಅರಿತು ರಾವಣನು ವೇಷಮರೆಸಿ ಭಿಕ್ಷೆಗೆ ಬಂದು ಸೀತೆಯನ್ನು ಅಪಹರಿಸುತ್ತಾನೆ. ಇಲ್ಲಿ ಸೀತೆಯು ಲಕ್ಷ್ಮಣನು ಹಾಕಿದ ಗೆರೆಯನ್ನು ದಾಟಬೇಡವೆಂದಿದ್ದರೂ ಅದನ್ನು ಮೀರಿ ದಾಟಿದಾಗ ಈ ದುರ್ಘಟನೆಗೆ ಕಾರಣವಾಗುತ್ತದೆ.

ರಂಗೋಲಿಯಲ್ಲಿ ಬಳಸುವ ವಿವಿಧ ರೇಖಾ ಚಲನೆಯ ವಿನ್ಯಾಸವು ನಂಬಿಕೆಯ ಮಾರ್ಗದರ್ಶನವನ್ನು ತೋರಿಸುತ್ತದೆ. ರಂಗೋಲಿಯನ್ನು ಬಾಯಿರಿಯವರು ಜನಪದರ ಕಲ್ಪನೆಯ ಕೆಲವು ಗೀತೆಗಳನ್ನು ಸಂಗ್ರಹಿಸಿ ಈ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

ರಂಗೋಲಿಯನ್ನು ಬೇರೆ ಬೇರೆ ವರ್ಗಗಳ ಜನಾಂಗದವರು. ಹಾಕುವ ವಿಧಾನ, ಸಮಯ, ಬಳಸುವಂತಹ ಮಾಧ್ಯಮ, ಹಾಕುವಂತಹ ಸ್ಥಳ, ಬಳಸುವ ಪರಿಕರಗಳು, ನಕ್ಷಾವಿನ್ಯಾಸಗಳನ್ನು ಬಾಯಿರಿಯವರು ಈ ರಂಗೋಲಿ ಚಿತ್ರಕಲೆಯಲ್ಲಿ ತಿಳಿಸಿದ್ದಾರೆ. ಈ ವಿಷಯದಲ್ಲಿ ಸಾಕಷ್ಟು ಕುತೂಹಲ, ನಂಬಿಕೆಯನ್ನು ಇಟ್ಟುಕೊಂಡಿದ್ದರು. ಅತ್ಯಂತ ಪರಿಶ್ರಮಪಟ್ಟು ಈ ರಂಗೋಲಿಕಲೆಯನ್ನು ಬೆಳೆಸಲು, ಉಳಿಸಲು ಪ್ರಯತ್ನಿಸಿದ್ದಾರೆ. ಅನೇಕ ವಿದ್ವಾಂಸರ ಜೊತೆ ಚರ್ಚಿಸಿ, ಅವರಿಂದ ಈ ಕಲೆಯ ಕುರಿತಾದ ಲೇಖನಗಳನ್ನು ಬರೆಯಿಸಿ, ಮುಂದಿನ ರಂಗೋಲಿ ಕಲಾವಿದರಿಗೆ ಉಪಯುಕ್ತವಾಗುವಂತೆ ಈ ಪುಸ್ತಕವನ್ನು ಬರೆದಿದ್ದಾರೆ.

ಅಧ್ಯಾಯ ಏಳು

ಸಮಾರೋಪ

ಬಿ. ಪಿ. ಬಾಯಿರಿಯವರ ಕಲೆ ಮತ್ತು ಕಲಾ ಸಾಹಿತ್ಯ ಬಗೆಗೆ ಅಧ್ಯಯನ ಮಾಡಿದಾಗ ಅನೇಕ ಮಹತ್ವದ ಹೊಳಹುಗಳು ದೊರೆತವು. ಒಬ್ಬ ವ್ಯಕ್ತಿ ಅಧ್ಯಯನವು ಆತನನ್ನು ವೈಭವಿಕರಿಸುವ ದೈವಿಕರಿಸುವ ನೆಲೆಯು ಅಪಾಯದ ಅಧ್ಯಯನವಾಗುವ ಸಂಭವವಿರುತ್ತದೆ. ಆದರೆ ಅಂತಹ ಅಪಾಯುಗಳು ಇತ್ತೀಚಿನ ದಿನಮಾನಗಳಲ್ಲಿ ವ್ಯಕ್ತಿಯು ಅಧ್ಯಯನಗಳು ಪೂರ್ವಾಗ್ರಹವೂ ಆಗುತ್ತಿವೆ. ಆದರೆ ವಾಸ್ತವದ ನೆಲೆಗಟ್ಟಿನ ಮೇಲೆ ನಿರ್ವಹಿಸುವುದು ಇಂದಿನ ಅಗತ್ಯವಾಗಿದ್ದರಂದ ಆ ಅಧ್ಯಯನವು ಅಂತಹ ನೆಲೆಗಟ್ಟಿನಲ್ಲಿ ರಚನೆಯಾಗಿದೆ. ಬಾಯಿರಿಯವರು ಬಹುಮುಖ ವ್ಯಕ್ತಿತ್ವ ಸಾಧನೆಯು ಕೂಡಾ ಬಹುಮುಖಿಯಾದುದು. ಕಲಾವಿದರ ಕಲಾ ಸಾಧನೆಯನ್ನು ಹಿಂದಿನ ಎಲ್ಲಾ ಅಧ್ಯಯನಗಳಲ್ಲಿ ಸ್ಥೂಲವಾಗಿ ಚರ್ಚಿಸಲಾಯಿತು. ಬಿ. ಪಿ. ಬಾಯಿರಿಯವರ ಕಲಾಕೃತಿಗಳ ಹರವು ತುಂಬಾ ವಿಶಾಲವಾದುದು. ಕರ್ನಾಟಕದುದ್ದಕ್ಕೂ ಮತ್ತು ದೇಶವಿದೇಶಗಳಲ್ಲಿ ಇವರ ಕಲಾಕೃತಿ, ಕಲಾಸಾಹಿತ್ಯದ ಪ್ರಸ್ತಕಗಳು ಸಂಗ್ರಹಗೊಂಡಿವೆ. ಇಲ್ಲಿ ಪ್ರಧಾನವಾಗಿ ಕೆಲವು ಕಲಾಕೃತಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಲ್ಲದೆ ಇನ್ನೂ ಹೆಚ್ಚು ವಿವರವಾದ ಅಧ್ಯಯನಕ್ಕೆ ಇಲ್ಲಿ ಹೇರಳವಾದ ಅವಕಾಶಗಳಿವೆ.

ವ್ಯಕ್ತಿಯೊಬ್ಬರ ಬದುಕು ಅರಳುವುದು ಸಮಾಜದ ಮಧ್ಯವೇ ಭಾರತದಂತಹ ಸಾಮಾಜಿಕ, ಧಾರ್ಮಿಕ ನೆಲೆಗಳಿರುವ ಸಮಾಜದಲ್ಲಿ ಬಾಯಿರಿಯವರ ಕಲಾಕೃತಿಗಳು ಜನಸಾಮಾನ್ಯರ

ನಡುವೆ ಮೂಡಿರುವ, ಕಲಾಕೃತಿಗಳು ಅವುಗಳನ್ನು ಗಮನಿಸುವಾಗ ಪ್ರಮುಖವಾಗಿ ಕಂಡು ಬರುವುದು ನಲಿವಿಗಿಂತ ನೋವುಗಳು ಅನುಭವಗಳ ಹಿನ್ನೆಲೆಯಲ್ಲಿ ಅವರ ಅಭಿವ್ಯಕ್ತಿ ಪಡೆದುಕೊಂಡ ರೀತಿಯದು. ಅದಕ್ಕೆ ತಕ್ಕ ಉತ್ತರವೆಂಬಂತೆ ಬಾಯಿರಿಯವರು ಕಲಾ ಸಾಹಿತ್ಯವನ್ನು ಆಯ್ಕೆ ಮಾಡಿಕೊಂಡದ್ದು ನಾವು ಬೆಳೆಯೊದೆಲ್ಲ ಜನರ ಮಧ್ಯದಲ್ಲಿ ಅವರಿಂದ ದೂರ ಹೋಗದಂತೆ ಅವರಿಗೆ ನಿಲುಕುವಂತೆ ಬೆಳೆಯುವುದಿದೆಯಲ್ಲ ಅದು ಬೆಳವಣಿಗೆಯ ನಿಜವಾದ ಲಕ್ಷಣ ಎನ್ನುವ ಬಾಯಿರಿಯವರು ಸಾಮಾಜಿಕ ಮತ್ತು ತಾತ್ವಿಕ ಒಲವಿನ ಕೃತಿಗಳನ್ನೆ ಅತ್ಯಂತ ಶ್ರೇಷ್ಠ ಕಲಾಕೃತಿಗಳೆಂದು ಹೇಳುತ್ತಾರೆ. ಅವರ ಸಾಮಾಜಿಕ ಒಲವಿನ ಅಥವಾ ವಿಚಾರಗಳಿಂದ ಕೂಡಿದ ಕೃತಿಗಳು ತೀರ ಸರಳವಾಗಿದ್ದು ಅವರ ಕಲಾಭಿವ್ಯಕ್ತಿಯ ಪ್ರಬುದ್ಧತೆಗೆ ಅವು ಒಳ್ಳೆಯ ಉದಾಹರಣೆಗಳು. ಬಾಯಿರಿಯವರು ಕಲಾಕೃತಿಗಳನ್ನು ರಚಿಸುವಾಗ ತುಂಬ ಪೂರ್ವಯೋಜಿತ ಸಿದ್ದತೆಗಳಿಂದ ಚಿತ್ರಗಳನ್ನು ರಚಿಸುತ್ತಾರೆ ಎನ್ನುವದು ಒಂದು ಕಾರಣವಾಗಿದೆ. ಇನ್ನೊಂದು ಚಿತ್ರದ ವಸ್ತುವಿನ ನಿರೂಪಣೆಗೆ ಹೆಚ್ಚು ಒತ್ತು ಕೊಡುವುದರಿಂದ ಬದ್ದತೆಯುಳ್ಳ ಕಲಾಕೃತಿಗಳು ಸರಳ ರಚನೆಗಳಾಗಿ ಮೂಡುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಬಿ. ಪಿ. ಬಾಯಿರಿಯವರು ಪ್ರತಿಭೆ ಇರದಿದ್ದರೆ ಕೃತಿ ರಚನೆ ಸಾಧ್ಯವಿಲ್ಲ ಪ್ರತಿಭೆ ಇದ್ದರೆ ಶಿಲ್ಪ, ಚಿತ್ರ, ಕಾವ್ಯ ರಚನೆಯಾಗುತ್ತದೆ. ಪ್ರತಿಭೆ ನಾನಾ ಒತ್ತಡದಲ್ಲಿ ರೂಪುಗೊಳ್ಳುತ್ತೆ, ಸಾಮಾನ್ಯವಾದ ತಿಳುವಳಿಕೆಯಲ್ಲಿ ತಿಳಿಸುವಂತಹ ಅನೇಕ ಉತ್ತರಗಳು ಸಂಕೀರ್ಣವಲ್ಲದಿದ್ದರೂ ಅದು ತಾಂತ್ರಿಕ ದೃಷ್ಟಿಯಿಂದ ಹೊಸ ಅಧ್ಯಯನ ಮಾಡುವುದಕ್ಕೆ ಎಷ್ಟು ಸರಳವೋ ಎಷ್ಟು ನೇರವೂ ಮಾಡಿ ಹೇಳಬೇಕಾಗುತ್ತದೆ. ಪ್ರತಿಯೊಂದು ಕೃತಿಯು ಮನಸ್ಸಿನ ಒಂದೇ ಅಧ್ಯಯನದ ಆಳದಿಂದ ಬರಲಾರದು ಅದು ಬೇರೆ ಬೇರೆ ಹಂತದಲ್ಲಿ ಮನಸ್ಸನ್ನು ವಿವಿಧ ಸ್ತರಗಳಿಂದ ಬೇರೆ ಬೇರೆ ರೂಪ ಮತ್ತು ಲಯಗಳಲ್ಲಿ ರೂಪಗೊಳ್ಳುತ್ತೆ. ಏಕತಾನತೆಯ ವಿಚಾರ ಮತ್ತು ಅನುಭವದಲ್ಲಿ ಅದರ ಸಂವೇದನೆ ಅನೇಕರಿಗೆ ಸಿಗಲಾರದು ಕಲಾಕೃತಿಯಲ್ಲಿ ಮತ್ತೆ ಮತ್ತೆ ತಾನೇ ಅಪೇಕ್ಷಿಸುವುದನ್ನು ಹುಡುಕಲಾರದೇ ಹೊಸ ದೃಷ್ಟಿಯ ರಚನೆಯಲ್ಲಿ ಕಲಾವಿದನ ಕೊಡುಗೆಯನ್ನು ಗಮನದಲ್ಲಿಸಿರಿಕೊಳ್ಳಬೇಕಾಗುತ್ತದೆ. ಎಂದು ತಮ್ಮ ವಿದ್ಯಾರ್ಥಿಗಳಿಗೆ ಕಲಾಕೃತಿ ರಚನೆಯ ಬಗ್ಗೆ ತಿಳಿಸಿಕೊಡುತ್ತಿದ್ದರು.

ದೂರದ ಮತ್ತು ಸಮೀಪದ ವಸ್ತುಗಳ ಕುರಿತು ಖ್ಯಾತ ಲೇಖಕಿ ವೈದೆಹಿಯವರಿಗೆ ಚಿತ್ರಕಲಿಕೆಯ ಬಗ್ಗೆ ಹೇಳಿಕೊಡುವಾಗ "ನಮ್ಮ ಹತ್ತಿರದ ವಸ್ತು ನಮಗೆ ದೊಡ್ಡದಾಗಿ ಕಾಣುತ್ತದೆ. ದೂರದ ವಸ್ತು ನುಣ್ಣಗೆ ಮಾತ್ರವಲ್ಲ, ಸಣ್ಣಗೆ ಕೂಡ, ಎಂತಲೇ ಆಕಾಶಕಾಯಗಳು ಭೂಮಿಗಿಂತ ಸಾವಿರ ಪಟ್ಟು ದೊಡ್ಡದಿದ್ದರೂ ಪುಟ್ಟ ಚುಕ್ಕಿಗಳು! ನಮ್ಮ ಭೂಮಿಯೇ ನಮಗೆ ದೊಡ್ಡದು! ಎಲ್ಲೋ ನಡೆದ ಅಪಘಾತ ನಮ್ಮನ್ನು ತಟ್ಟುವುದಕ್ಕಿಂತ ನಮ್ಮ ಬೀದಿಯಲ್ಲೇ ನಡೆದ ಅಪಘಾತಕ್ಕೆ

ನಾವು ಸ್ಪಂದಿಸುವುದು ಹೆಚ್ಚು.. ಹೌದೆ ? ಹೇಳುತ್ತ ಉಪಾಧ್ಯಾಯರು ಸ್ವಗತವೆಂಬಂತೆ ಆಡಿಕೊಂಡರು.... ನಮ್ಮಿಂದ ದೂರವಿರುವ ಯಾರೂ ನಮ್ಮಷ್ಟು ದೊಡ್ಡವರಲ್ಲ ! ಮನುಷ್ಯನ ಅಹಂ ಗೂ ಇದಕ್ಕೂ ಸಂಬಂಧ ಕಾಣುತ್ತದೆಯೇ[೧] ಹೀಗೆ ಅವರು ಪ್ರತಿಯೊಂದು ಮಕ್ಕಳಿಗೆ ಚಿತ್ರಕಲೆಯ ಶಿಕ್ಷಣ ನೀಡುತ್ತಿದ್ದರು. ಬಿ. ಪಿ. ಬಾಯಿರಿಯವರು ಕರ್ನಾಟಕ ಚಿತ್ರಕಲಾ ಕ್ಷೇತ್ರಕ್ಕೆ, ಕಲಾ ಸಾಹಿತ್ಯದಲ್ಲಿ ತಮ್ಮದೇ ಆದ ಹೆಸರನ್ನು ಅನನ್ಯತೆಯನ್ನು ಗುರುತಿಸಿದವರು ಎಂದು ಹೇಳುಬಹುದು.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ ಬಗೆಗೆ ಹೇಳಲಾಗಿದೆ. ಇಲ್ಲಿ ಇತರ ಮಾದರಿಗಳಿಗಿಂತ ಭಿನ್ನ ಮಾದರಿಗಳನ್ನು ಬಳಸಲಾಗಿದೆ. ಹಾಗೆಯೇ ಅಧ್ಯಯನದ ಧೋರಣೆಯನ್ನು ಸಹ ಈ ಕಾಲಕ್ಕೆ ಹೇಗೆ ಪ್ರಸ್ತತ ಎಂದು, ಹೊಂದಿಕೆಯಾಗುವ ರೀತಿಯಲ್ಲಿ ಸಂಯೋಜಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಬಾಯರಿಯವರ ಬಾಲ್ಯ, ಪರಿಸರ ಮತ್ತು ಶಿಕ್ಷಣದ ಬಗೆಗೆ ದಾಖಲಿಸಲಾಗಿದೆ. ಇಲ್ಲಿ ಬಾಯಿರಿಯವರ ಬಾಲ್ಯದ ಪರಿಸರ ಸಂಸ್ಕೃತಿ ಮತ್ತು ಆಗ ಆ ಪರಿಸ್ಥಿತಿಯಲ್ಲಿ ಸಮಾಜದ ಕಟ್ಟಳೆಗಳನ್ನು ಎಳೆ ಎಳೆಯಾಗಿ ಬಿಡಿಸುತ್ತಾ ಬಾಲಕ ಬಾಯಿರಿಯವರ ಮೇಲೆ ಪರಿಣಾಮ ಮತ್ತು ತಂದೆಯವರೆ ಶಿಕ್ಷಕರಾಗಿ ಶಿಕ್ಷಣ ನೀಡಿದ ನಂತರ, ಬಾಯಿರಿಯವರ ಶಿಕ್ಷಣದ ಗುಣಮಟ್ಟದ ಅಲ್ಲದೆ ಚಿತ್ರಕಲಾ ಕ್ಷೇತ್ರಕ್ಕೆ ಯಾವ ರೀತಿಯಲ್ಲಿ ಪ್ರವೇಶಿಸಿದ್ದರು ಎಂದು ಎಳೆ ಎಳೆಯಾಗಿ ಬಿಚ್ಚಿಡಲಾಗಿದೆ. ಅಂದಿನ ಸಂದರ್ಭದಲ್ಲಿ ಮದ್ರಾಸು ಸೆಂಟರನಲ್ಲಿ ಕಲಾ ಶಿಕ್ಷಣವನ್ನು ಮೊದಲನೆ ಶ್ರೇಣಿಯಲ್ಲಿ ಉತ್ತೀರ್ಣರಾದದ್ದು ಮುಂತಾದ ಘಟನೆಗಳನ್ನು ತಿಳಿಸಲಾಗಿದೆ ಅವರು ಶಿಕ್ಷಣ ಪಡೆದ ರೀತಿ ಆ ಕಾಲದ ಶಿಕ್ಷಣ ಪದ್ದತಿ ಮತ್ತು ಚಿತ್ರಕಲಾ ಪರಿಸರ ಎಲ್ಲವನ್ನೂ ದಾಖಲಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಬಿ.ಪಿ.ಬಾಯಿರಿಯವರ ವೃತ್ತಿ ಜೀವನದಲ್ಲಿ ಬಾಯಿರಿಯವರು ತಮ್ಮ ಕಲಾ ಶಿಕ್ಷಣ ಮುಂದುವರೆಸಲೆತ್ನಿಸಿದ ಬೆನ್ನಲ್ಲೆ, ಮನೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟ ಕಾರಣದಿಂದಾಗಿ, ಶಿಕ್ಷಕ ವೃತ್ತಿ ಪ್ರಾರಂಭಿಸಿದ್ದು ಅವರ ಬದುಕು ಹೇಗಿತ್ತು, ಕಲೆಯೊಂದಿಗಿನ ಅವರ ಅನುಸಂಧಾನ ಯಾವ ತೆರನಾದುದು ಅವರ ಬದುಕಿನಲ್ಲಿ ಕುಟುಂಬದವರೊಂದಿಗೆ ಸಂಪರ್ಕ ಹೇಗಿತ್ತು. ಸ್ನೇಹಿತರ ಜೊತೆಗಿನ ಸಂಬಂಧ, ತಮ್ಮ ವೃತ್ತಿ ಜೊತೆ ಜೊತೆಗೆ, ಸಮಾಜಕ್ಕೆ ಕಲಾಕೃತಿಗಳ ಕೊಡುಗೆ, ಭಾವಚಿತ್ರಣ, ದೇವರ ಚಿತ್ರ ಪಟ ಮುಂತಾದವುಗಳ ಬಗ್ಗೆ ಚರ್ಚೆಯ ಮೂಲಕ ಅಧ್ಯಾಯವನ್ನು ಪೂರ್ಣಗೊಳಿಸಲು ಯತ್ನಿಸಲಾಗಿದೆ.

೧. ವೈದೇಹಿ : ಮಲ್ಲಿನಾಥನ ಧ್ಯಾನ, ಕಥಾ ಸಂಕಲನ, ಪು.ಸಂ ೩೨ ೧೯೯೩

ಅಧ್ಯಾಯ ನಾಲ್ಕರಲ್ಲಿ ಬಾಯರಿಯವರ ಕಲಾಕೃತಿಗಳು ಹಾಗೂ ಭಾವಚಿತ್ರಗಳು ಇಲ್ಲಿ ಪ್ರಮುಖವಾಗಿ ಬಾಯಿರಿಯವರು ಸಮಾಜಕ್ಕೆ, ಬೇಕಾಗುವ ಕಲಾಕೃತಿಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟಿರುವುದು ಕಂಡು ಬರುತ್ತದೆ. ಭಾವಚಿತ್ರಣದಲ್ಲಿ ತುಂಬಾ ಪ್ರಾವಿಣ್ಯತೆಯನ್ನು ಪಡೆದಿರುವುದು ಅವರ ಕಲಾಕೃತಿಯನ್ನು ವಿಕ್ಷಿಸಿದಾಗ, ಅವರ ಕಲಾಕೃತಿಗಳು ಬಿಂಬಿಸುವ ಭಾವ, ಬಣ್ಣದ ಬಳಕೆ, ಸಂಯೋಜನೆಯ ಸೂಕ್ಷ್ಮತೆ, ಹೊನಲು ಬೆಳಕು, ಉಬ್ಬುತಗ್ಗುಗಳ ಹೊಂದಾಣಿಕೆ, ಮುಂತಾದ ಅಂಶಗಳಿನ್ನು ಇಟ್ಟುಕೊಂಡು ವಿಮರ್ಶಿಸಲಾಗಿದೆ. ಕಲಾಕೃತಿ ರಚಿಸಿದ ದಿನಾಂಕ, ಉದ್ದಳತೆ, ಕಲಾವಿದರ ಕಲಾಕೃತಿಗಳಿರುವ ಪ್ರದೇಶ, ಊರು, ಮನೆಗಳನ್ನೂ ನನ್ನ ಅಧ್ಯಯನದ ಮಿತಿಯಲ್ಲಿ ಸಂಗ್ರಹಿಸಲು ಸಾಧ್ಯವಾಗಿಲ್ಲ.

ಅಧ್ಯಾಯ ಐದರಲ್ಲಿ ಬಾಯಿರಿಯವರಿಗೆ ಚಿಕ್ಕಂದಿನಿಂದಲೇ ರಂಗೋಲಿ ಸದಾ ಕಾಡುತ್ತಿದ್ದ ಕಲಾ ವಸ್ತುವಾಗಿತ್ತು. ಆಗಾಗ ರಂಗೋಲಿಯ ಬಗೆಗೆ ಚಿಂತನ-ಮಂಥನಗಳನ್ನು ನಡೆಸುತ್ತಿದ್ದ ಬಾಯಿರಿ ತಮ್ಮ ನಿವೃತ್ತಿಯ ನಂತರ ರಂಗೋಲಿಯ ಕಡೆಗೆ ತಮ್ಮ ಧ್ಯಾನ್ಯವನ್ನು ಕೇಂದ್ರಕರಿಸಿ "ರಂಗೋಲಿ ಕಲೆ ಕಲೆಯಲ್ಲ" ಎಂದು ಪ್ರತಿಪಾದಿಸಿದ ಕಲಾವಿದರಿಗೆ, ರಂಗೋಲಿಯಲ್ಲಿ ಸಾಧನೆಯನ್ನು ಮಾಡಿ ಅವರಿಗೆ ಉತ್ತರ ನೀಡಿದವರು ರಂಗೋಲಿಯ ಬಗ್ಗೆ ಸಮಗ್ರವಾದ ಮಾಹಿತಿಯನ್ನು ೧೯೬೦ ರ ದಶಕದಲ್ಲಿ ಸಂಗ್ರಹಿಸಿ ಅವುಗಳನ್ನು ಉಳಿಸಿ ಬೆಳೆಸಬೇಕೆಂದು ಕಾರಣದಿಂದಾಗಿ ಪುಸ್ತಕಗಳ ರೂಪದಲ್ಲಿ ಜನಸಾಮಾನ್ಯರ ಕೈಗೆ ಎಟಕುವ ಬೆಲೆಯಲ್ಲಿ ನೀಡಿದ್ದಾರೆ. ಅವರ ಆ ನಿಲ್ಲದ ಕ್ರಿಯಾಶೀಲತೆ ಈಗಿನ ಯುವ ಕಲಾವಿದರಿಗೆ ಮಾದರಿಯಾಗಿದೆ. ತಮ್ಮ ನಿವೃತ್ತಿ ಜೀವನವನ್ನು ಸದೂಪಯೋಗ ಪಡಿಸಿಕೊಳ್ಳಬಲ್ಲವರೆಂದರೇ ಕಲಾವಿದರು ಮಾತ್ರ ಎಂದು ತೋರಿಸಿಕೊಟ್ಟಿದ್ದಾರೆ. ಬಾಯಿರಿಯವರ ರಂಗೋಲಿ ಕಲೆಯು ಕನ್ನಡದ ಹೆಚ್ಚಿನ ಪತ್ರಿಕೆಗಳಲ್ಲಿ ಸತತವಾಗಿ ಮುದ್ರಿಸಲಾಗಿತ್ತು. ಅವರ ನೂರಾರು ರಂಗೋಲಿಗಳು, ಹಲವಾರು ಕಲಾ ಲೇಖನಗಳು ತರಂಗದಲ್ಲಿ ಪ್ರಕಟಗೊಂಡಿದ್ದನ್ನು ಸ್ಮರಿಸಬಹುದು ಅಲ್ಲದೆ ಇವು ಮುಂದಿನ ಸಂಶೋಧನೆ ಬಯಸುವ ರಂಗೋಲಿ ಕಲಾವಿದರಿಗೆ ಮಾರ್ಗದರ್ಶಕವಾಗಿದೆ.

ಅಧ್ಯಾಯ ಆರರಲ್ಲಿ ಬಿ. ಪಿ. ಬಾಯಿರಿಯವರ ಕಲಾ ಸಾಹಿತ್ಯದ ಬಗ್ಗೆ ಹೇಳುವುದಾದರೆ ಆ ಸಂದರ್ಭದಲ್ಲಿ ಕಲೆಯ ಬಗ್ಗೆ ಪುಸ್ತಕಗಳು ಪ್ರಕಟಗೊಂಡಿರಲಿಲ್ಲ. ಅವು ಆಂಗ್ಲ ಭಾಷೆಯಲ್ಲಿ ಮಾತ್ರ ಸಿಗುತ್ತದ್ದ ಕಲಾ ಪುಸ್ತಕಗಳನ್ನು ಓದಿಕೊಂಡು ತಮ್ಮದೇ ಆದ ಬರವಣಿಗೆಯೆ ಪದ್ದತಿಯಲ್ಲಿ ಸುಮಾರು ೨೨ ಕ್ಕೂ ಹೆಚ್ಚು ಪುಸ್ತಕಗಳನ್ನು ಆ ದಿನಮಾನಗಳಲ್ಲಿ ಪ್ರಕಟಿಸಿದ ಒಬ್ಬ ಧಿಮಂತ ಕಲಾ ಸಾಹಿತಿ ಎಂದು ಹೇಳಬಹುದು ಕಲಾ ವಿದ್ಯಾರ್ಥಿಗಳಿಗಾಗಿ ಈ ಪುಸ್ತಕಗಳನ್ನು ರಚಿಸುವುದಕ್ಕಾಗಿಯೇ ಬಹುಶಃ ಕಲಾ ಸಾಹಿತಿಯಾಗಿ ಬಾಯಿರಿಯವರು ಬಂದಿರಬಹುದೆಂದು ಹೇಳಬಹುದು. ಇದೆಲ್ಲವನ್ನು ಈ ಅಧ್ಯಾಯದಲ್ಲಿ ತರ್ಕಿಸಲಾಗಿದೆ.

ಅಧ್ಯಾಯ ಏಳರಲ್ಲಿ ಆಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ. ಇನ್ನು ಅನುಬಂಧದಲ್ಲಿ ಸಂಪೂರ್ಣ ಛಾಯಾ ಚಿತ್ರಗಳ ವಿವರ, ಗ್ರಂಥಋಣ, ಮುಂತಾದವುಗಳನ್ನು ಜೋಡಿಸಿ ಈ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.




ಫಲಿಮಾರುಮಠದ ಭಂಡಾರಕೇರಿ ಸ್ವಾಮಿಜೀಯವರಿಂದ ಸನ್ಮಾನ ಪತ್ರ ಸ್ವೀಕರಿಸುತ್ತಿರುವುದು



22ನೇ ವಾರ್ಷಿಕ ಕಲಾ ಪ್ರದರ್ಶನದ ವೇಳೆಯಲ್ಲಿ ಅಧ್ಯಕ್ಷೀಯ ಭಾಷಣ



ಉಡಪಿಯ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಡಾ. ಶಿವರಾಂ ಕಾರಂತರವರಿಂದ ಸನ್ಮಾನ



೧೧-೦೩-೧೯೮೨ ರಂದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಆಗಿನ ರಾಜ್ಯಪಾಲರಿಂದ ಬಿ. ಪಿ. ಬಾಯಿರಿಯವರು ಪ್ರಶಸ್ತಿ ಸ್ವೀಕರಿಸುತ್ತಿರುವುದು

ಅನುಬಂಧಗಳು

ಬಿ. ಪಿ. ಬಾಯಿರಿಯವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು

ಕರ್ನಾಟಕ ಲಲಿತಕಲಾ ಅಕಾಡಮಿ ಪ್ರಶಸ್ತಿ

ಕರ್ನಾಟಕ ಲಲಿತಕಲಾ ಪರಿಷತ್ತಿನ ಪ್ರಶಸ್ತಿ

ರಾಜ್ಯ ಕಲಾ ಶಿಕ್ಷಕ ಪ್ರಶಸ್ತಿ

"ಜಾಗ್ರತಿಕ ಕಲೆ" ಪುಸ್ತಕಕ್ಕೆ ಲಲಿತಕಲಾ ಅಕಾಡಮಿ ಪ್ರಶಸ್ತಿ

೧೯೭೧. ಉಡುಪಿಯ ಬೋರ್ಡ್ ಹೈಸ್ಕೂಲ್ ಅಧ್ಯಾಪಕ ವೃಂದದವರ ಸನ್ಮಾನ ಪತ್ರ.

೧೯೭೩. ಮೈಸೂರು ಪ್ರದೇಶ ಚಿತ್ರಕಲಾ ಪರಿಷತು ಅವರ ಸನ್ಮಾನ ಪತ್ರ.

೧೯೭೪. ಬೇಲಾಡಿ ಹಿರಿಯ ಪ್ರಾಥಮಿಕ ಶಾಲೆ ಬಳಗದವರು ಗೌರವದರ, ಸನ್ಮಾನ ಪತ್ರ.

೧೯೭೫. ಕಲಾವೃಂದ (ರಿ) ಉಡುಪಿ ಯವರಿಂದ ಭಿನ್ನವಕ್ತಳೆ (ಸನ್ಮಾನ ಪತ್ರ).

೧೯೭೯. ಮಂಗಳೂರಿನ ಬಿ.ಜಿ.ಎಂ. ಕಲಾ ಶಾಲೆಯ ಬೆಳ್ಳಿ ಹಬ್ಬದ ಉತ್ಸವ ಸಮಿತಿಯವರಿಂದ ಗೌರವ ಪತ್ರ.

೧೯೮೦. ಯುಗಪುರುಷ ಸಂಸ್ಥೆಯವರಿಂದ "ಯುಗಪುರುಷ" ಎಂದು ಸನ್ಮಾನ.

೧೯೮೩. "ಕರ್ನಾಟಕ ರಾಜ್ಯೋತ್ಸವ ಸಮಿತಿ" ರಸಿಕ ರಂಗ, ಉಡುಪಿ ಇವರು ಚಿತ್ರಕಲೆಯಲ್ಲಿ ಸಲ್ಲಿಸುತ್ತಿರುವ ಹಿರಿಯ ಸೇವೆಗಾಗಿ ನೀಡಿದ ಸನ್ಮಾನ ಪತ್ರ.

೧೯೮೭. ಉಡುಪಿಯ ಗಣೇಶೋತ್ಸವ ಸಮಿತಿಯವರು ನೀಡಿದ ಅಭಿನಂದನ ಪತ್ರ.

೧೯೮೮. ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಸಂಸ್ಥೆಯಿಂದ ಸನ್ಮಾನ ಪತ್ರ.

೧೯೯೦. ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು ಮಂಗಳೂರು ಇವರು ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿಗಾಗಿ ಸೇವಗೆ ಸನ್ಮಾನ.

೧೯೯೨. ಎಂ.ಜಿ.ಎಂ. ಕಾಲೇಜು ಬಳಗ ಅವರ ಸನ್ಮಾನ ಪತ್ರ.

೧೯೯೪. ಪರ್ಯಾಯ ಶ್ರೀ ಶಿರೂರ ಮಠ, ಶ್ರೀ ಕೃಷ್ಣ ಮಠ, ಉಡುಪಿ ಶ್ರೀ ಕೃಷ್ಣ ಜಯಂತಿ ಸಂದರ್ಭದಲ್ಲಿ, ಚಿತ್ರಕಲಾ ಕ್ಷೇತ್ರದಲ್ಲಿ ಗಣಣೀಯವಾದ ಸೇವೆ ಸಲ್ಲಿಸಿ ಗೌರವಿಸಿ ನಿಡಿದ ಅಭಿನಂದನ ಪತ್ರ.

ಬಿ. ಪಿ. ಬಾಯಿರಿಯವರ ವಿರಚಿತ ಪುಸ್ತಕಗಳ ಪಟ್ಟಿ

೧. ರಂಗವಲ್ಲಿ ಪುಸ್ತಕ ಮಾಲಿಕೆ ೧೯೬೭
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೨. ರಂಗವಲ್ಲಿ ಪುಸ್ತಕ ಮಾಲಿಕೆ ೧೯೬೯
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೩. ರಂಗವಲ್ಲಿ ಪುಸ್ತಕ ಮಾಲಿಕೆ ೧೯೭೧
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೪. ರಂಗವಲ್ಲಿ ಪುಸ್ತಕ ಮಾಲಿಕೆ ೧೯೭೩
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೫. ರಂಗವಲ್ಲಿ ಪುಸ್ತಕ ಮಾಲಿಕೆ ೧೯೭೫
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೬. ರಂಗವಲ್ಲಿ ಪುಸ್ತಕ ಮಾಲಿಕೆ ೧೯೭೭
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೭. ರಂಗವಲ್ಲಿ ಪುಸ್ತಕ ಮಾಲಿಕೆ ೧೯೭೯
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೮. ರಂಗವಲ್ಲಿ ಪುಸ್ತಕ ಮಾಲಿಕೆ ೧೯೮೧
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೯. ರಂಗವಲ್ಲಿ ಪುಸ್ತಕ ಮಾಲಿಕೆ ೧೯೮೩
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೦. ರಂಗವಲ್ಲಿ ಪುಸ್ತಕ ಮಾಲಿಕೆ ೧೯೮೭
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೧. ರಂಗವಲ್ಲಿ ಪುಸ್ತಕ ಮಾಲಿಕೆ ೧೯೯೦
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೨. ರಂಗವಲ್ಲಿ ಪುಸ್ತಕ ಮಾಲಿಕೆ ೧೯೯೨
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೩. ಭಾರತೀಯ ಸಂಸ್ಕೃತಿಯಲ್ಲಿ ರಂಗವಲ್ಲಿ ೧೯೯೨.
ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೪. ಚಿತ್ರ ಲೇಖನ ೧೯೭೨.

ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೫. ಚಿತ್ರಕಲೆ ೧೯೮೦.

ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೬. ಚಿಕ್ಕ ಮಕ್ಕಳ ಚಿತ್ರಕಲೆ ೧೯೯೬ ದ್ವಿತೀಯ ಮುದ್ರಣ

ಪ್ರಸಾರಾಂಗ ಮಾನಸ ಗಂಗೋತ್ರಿ, ಮೈಸೂರು

೧೭. ಚಿಕ್ಕ ಮಕ್ಕಳ ಚಿತ್ರಕಲೆ ೧೯೬೯

ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ

೧೮. ಚಿತ್ರಕಲೆಯ ಚಿಕ್ಕ ಕಥೆಗಳು ೧೯೮೦

ಪ್ರಕಾಶಕರು, ಚಿತ್ರಕುಟೀರ, ಉಡುಪಿ

೧೯. ಜಾಗತಿಕ ಚಿತ್ರಕಲೆ ೧೯೮೫

ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ

೨೦. ನವ್ಯಕಲೆ ಹಾಗೂ ಕಲೆಗಾರರು ೧೯೮೨

ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ

೨೧. ಕಲೆಗಾರರ ಕಥೆಗಳು ೧೯೭೭

ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ

೨೨. ರಂಜಾಳ ಗೋಪಾಲ ಶೆಣೈ ೧೯೮೮

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೨೩. ಭಾರತೀಯ ಚಿತ್ರಕಲೆ ೧೯೭೯

ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ

ಸಂದರ್ಶನಗಳು

೧. ಬಿ.ಪಿ.ಬಾಯಿರಿಯವರ ಮಕ್ಕಳೊಂದಿಗೆ ಸಂದರ್ಶನ

೧. ಬಾಲಕೃಷ್ಣ ಬಾಯಿರಿ

೨. ರತ್ನಾಕರ ಬಾಯಿರಿ

೩. ಗೀತಾ

೪. ರತ್ನಾ

೨. ಬಿ.ಪಿ.ಬಾಯಿರಿಯವರ ಸ್ನೇಹಿತರೊಂದಿಗೆ ಸಂದರ್ಶನ

೧. ಅನಂತ ಕೃಷ್ಣ ಸಾಮಗ

೨. ಪುಟ್ಟಣ್ಣ ಶೆಟ್ರು

೩. ಎಚ್. ಕೃಷ್ಣಭಟ್ಟ

೪. ಶಾಂತಪ್ರಿಯ

೩. ಬಿ. ಪಿ. ಬಾಯಿರಿಯವರ ಶಿಷ್ಯಂದಿರು ಹಾಗೂ ಹಿತೈಷಿಗಳು

೧. ವೈದೇಹಿ ಮಣಿಪಾಲ

೨. ಡಾ. ಬಿ. ಎಮ್. ಸೋಮಯಾಜಿ. ಬಾರ್ಕೂರು

೩. ಸುಧಾಕರ ಪೈ

೪. ಪಿ. ಎನ್. ಆಚಾರ್ಯ (ವಿದ್ಯಾರ್ಥಿ)

೫. ದಾಮೋದರ ಐತಾಳ



ಬಿ.ಪಿ. ಬಾಯಿರಿಯವರ ಪುತ್ರ ಬಾಲಕೃಷ್ಣ ಬಾಯಿರಿಯವರೊಂದಿಗೆ ಸಂದರ್ಶನ



ಬಿ.ಪಿ. ಬಾಯಿರಿಯವರ ಹಿತೈಸಿ ಮಹಿಳಾ ಸಾಹಿತಿ ಶ್ರೀಮತಿ ವೈದೇಹಿಯವರೊಂದಿಗೆ ಸಂದರ್ಶನ



ಬಿ.ಪಿ. ಬಾಯಿರಿಯವರ ಹಿತೈಸಿ ಡಾ. ಬಿ.ಎಂ. ಸೋಮಯಾಜಿಯವರ ಜೊತೆ ಸಂದರ್ಶನ

ಬಿ. ಪಿ. ಬಾಯಿರಿಯವರ ಕಲಾಕೃತಿಗಳ ಸಂಗ್ರಹದ ನೆಲೆಗಳು

ಮೈಸೂರಿನ ಮಾನಸ ಗಂಗೋತ್ರಿ ಜಾನಪದ ವಸ್ತು ಸಂಗ್ರಹಾಲಯ

ಮಣಿಪಾಲದ ಎಂ.ಜಿ.ಎಂ. ಕಾಲೇಜು

ಮಣಿಪಾಲದ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಸಂಸ್ಥೆ,

ಉಡುಪಿಯ ಬೋರ್ಡ್ ಹೈಸ್ಕೂಲ್

ಬಾರ್ಕೂರದ ಡಾ. ಬಿ. ಎಂ. ಸೋಮಯಾಜಿ ಅವರ ಮನೆಯಲ್ಲಿ

ಕುಂದಾಪೂರದ ಬೋರ್ಡ್ ಹೈಸ್ಕೂಲ್

ಮಂಗಳೂರು

ಮಣಿಪಾಲದ ವಿವಿಧ ಗಣ್ಯರ ಮನೆಗಳಲ್ಲಿ

ಗ್ರಂಥಋಣ

ಅಭಿನವ ಗುಪ್ತ – ಜಿ. ಟಿ. ದೇಶಪಾಂಡೆ

ಸಾಹಿತ್ಯ ಅಕಾಡೆಮಿ, ನವದೆಹಲಿ-೦೧ ಅನು : ಎನ್ ಬಾಲಸುಬ್ರಹ್ಮಣ್ಯ

ಆಲೇಖ್ಯ – ಡಾ. ಅ.ಲ. ನರಸಿಂಹನ್

ಸಂಯೋಜಿತ, ಬೆಂಗಳೂರು. ೧೯೯೯

ಕಲೆ ಎಂದರೇನು ? – ಸಿ.ಪಿ.ಕೆ

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೦

ಕಲಾ ಪ್ರಪಂಚ – ಡಾ. ಶಿವರಾಮ ಕಾರಂತ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕನ್ನಡ ವಿಶ್ವಕೋಶ ಸಂಪುಟ. ೪ – ಡಾ. ಹಾ. ಮಾ. ನಾಯಕ

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೭೨

ಕಲಾವಿದ ಆರ್. ಎಮ್. ಹಡಪದ – ಡಾ.ಸಿದ್ದಲಿಂಗಸ್ವಾಮಿ ಹಿರೇಮಠ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ

ಅಪ್ರಕಟಿತ ಪಿ.ಹೆಚ್.ಡಿ ಮಹಾಪ್ರಬಂಧ. ೨೦೦೪

ಕಲಾ ಸಂವೇದನೆಯ ಒಳನೋಟಗಳು – ಕೆ. ವಿ. ಸುಬ್ರಮಣ್ಯಂ

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೭

ಕಲಾ ಕೋಶ – ಸಂ. ಮರಿಶ್ಯಾಮಾಚಾರ

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

ಕರ್ನಾಟಕ ಜನಪದ ಚಿತ್ರಕಲೆ – ಡಾ. ಎಸ್. ಸಿ. ಪಾಟೀಲ

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ

ಸಂಸ್ಥಾನಮಠ, ಗದಗ. ೧೯೯೩

ಚಿತ್ರ ಚಿತ್ತ – ಚಿ. ಸುಕೃಷ್ಣಶೆಟ್ಟಿ

ಇಳಾ ಪ್ರಕಾಶನ, ಬೆಂಗಳೂರು. ೨೦೦೦

ಚಿತ್ರ ಲೇಖನ – ಬಿ. ಪಿ. ಬಾಯಿರಿ

ಪ್ರಕಾಶಕರು, ಚಿತ್ರಕುಟೀರ, ಉಡುಪಿ

ಚಿತ್ರಕಲೆ – ಬಿ. ಪಿ. ಬಾಯಿರಿ

ಪ್ರಕಾಶಕರು, ಚಿತ್ರಕುಟೀರ, ಉಡುಪಿ

ಚಿಕ್ಕ ಮಕ್ಕಳ ಚಿತ್ರಕಲೆ – ಬಿ. ಪಿ. ಬಾಯಿರಿ
ಪ್ರಸಾರಾಂಗ ಮಾನಸ ಗಂಗೋತ್ರಿ, ಮೈಸೂರು

ಚಿಕ್ಕ ಮಕ್ಕಳ ಚಿತ್ರಕಲೆ – ಬಿ. ಪಿ. ಬಾಯಿರಿ
ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ

ಚಿತ್ರಕಲೆಯ ಚಿಕ್ಕ ಕಥೆಗಳು – ಬಿ. ಪಿ. ಬಾಯಿರಿ
ಪ್ರಕಾಶಕರು, ಚಿತ್ರಕುಟೀರ, ಉಡುಪಿ

ಬಿ. ಪಿ. ಬಾಯಿರಿ – ಡಾ. ಬಾ.ನಾ ಶಾಂತಪ್ರಿಯಾ
ಸಂದರ್ಶನ ಲೇಖನ, ೧೯೯೫

ಬಿ.ಪಿ.ಬಾಯಿರಿಯವರ ಜೀವನ ಮತ್ತು ಕಲಾಕೃತಿಗಳು – ಸೂರಜಕುಮಾರ
ಅಪ್ರಕಟಿತ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಕಿರು ಯೋಜನಾ ವರದಿ. ೨೦೦೬

ಭಾರತೀಯ ಸಂಸ್ಕೃತಿಯಲ್ಲಿ ರಂಗವಲ್ಲಿ – ಬಿ. ಪಿ. ಬಾಯಿರಿ
ಪ್ರಕಾಶಕರು, ಚಿತ್ರಕುಟೀರ, ಉಡುಪಿ. ೧೯೬೩

ಭಾರತೀಯ ಚಿತ್ರಕಲೆ – ಬಿ.ಪಿ. ಬಾಯಿರಿ
ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ

ಭಾರತೀಯ ಚಿತ್ರಕಲೆ – ಡಾ. ಶಿವರಾಮ ಕಾರಂತ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೧೯೯೧

ಜಾಗತಿಕ ಚಿತ್ರಕಲೆ – ಬಿ.ಪಿ. ಬಾಯಿರಿ
ಪ್ರಕಾಶಕರು, ಚಿತ್ರಕುಟೀರ, ಉಡುಪಿ.

ನವ್ಯಕಲೆ ಹಾಗೂ ಕಲೆಗಾರರು – ಬಿ.ಪಿ. ಬಾಯಿರಿ
ಪ್ರಕಾಶಕರು, ಚಿತ್ರಕುಟೀರ, ಉಡುಪಿ.

ರಂಜಾಳ ಗೋಪಾಲ ಶೆಣೈ – ಬಿ.ಪಿ. ಬಾಯಿರಿ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೬

ರಂಗೋಲಿ ಬ್ರಹ್ಮ ಬಾಯಿರಿ – ಈಗ ನೆನಪು ಮಾತ್ರ – ಪಿ. ಆರ್. ತಿಪ್ಪೇಸ್ವಾಮಿ
೧೪-೧೨-೧೯೯೬ರ ಹೊಸ ದಿಗಂತ ದಿನ ಪತ್ರಿಕೆ

One-man crusade to revive a half-dead art form – By- “Shree” Padre

ಸಂಕ್ಷೇಪಗಳು

ಕ. ವಿ. ಹಂ.	–	ಕನ್ನಡ ವಿಶ್ವವಿದ್ಯಾಲಯ ಹಂಪಿ
ಬೆಂ. ವಿ. ವಿ.	–	ಬೆಂಗಳೂರು ವಿಶ್ವವಿದ್ಯಾಲಯ
ಕ. ವಿ. ವಿ.	–	ಕರ್ನಾಟಕ ವಿಶ್ವವಿದ್ಯಾಲಯ
ಮೈ. ವಿ. ವಿ.	–	ಮೈಸೂರು ವಿಶ್ವವಿದ್ಯಾಲಯ
ಗು. ವಿ. ವಿ.	–	ಗುಲ್ಬರ್ಗಾ ವಿಶ್ವವಿದ್ಯಾಲಯ
ಮ. ಪ್ರ.	–	ಮಹಾ ಪ್ರಬಂಧ
ಪು. ಸಂ.	–	ಪುಟ ಸಂಖ್ಯೆ.
ಸಂ.	–	ಸಂಪಾದಕರು

